ಸಂಪ್ರದಾಯ ಸಂಪದ



ಲೇಖಕರು

ಶ್ರೀಮತಿ ಶಾಂತಾ ರಾಮಚಂದ್ರ



ಶ್ರೀಮತಿ ಶಾಂತಾ ರಾಮಚಂದ್ರ



ಹೋಮವನ್ನು ಮಾಡುವಾಗ
ಶ್ರೀ ಮಹಾಗಣಪತಿ ಪ್ರತ್ಯಕ್ಷವಾಗಿರುವ ಚಿತ್ರ

ಶ್ರೀಃ

ಸಂಪ್ರದಾಯ ಸಂಪದ

ಲೇಖಕರು
ಶ್ರೀಮತಿ ಶಾಂತಾ ರಾಮಚಂದ್ರ
ನಂ. 366, 42 ಅಡ್ಡರಸ್ತೆ, 8ನೇ ಬ್ಲಾಕ್, ಜಯನಗರ, ಬೆಂಗಳೂರು – 560 070
ದೂರವಾಣಿ : 080 – 2244 5213

"ಸಂಪ್ರದಾಯ ಸಂಪದ" ಗ್ರಂಥವು ಶ್ರೀಮತಿ ಶಾಂತಾ ರಾಮಚಂದ್ರವರಿಂದ ಪ್ರಕಟಿಸಲ್ಪಟ್ಟಿ
– ಮುದ್ರಣ ಹಕ್ಕನ್ನು ಪ್ರಕಾಶಕರಿಗೆ ಕಾದಿರಿಸಲಾಗಿದೆ

ಪ್ರತಿಗಳು : 1000

ವರ್ಷ : 2008

ಬೆಲೆ : ರೂ. 50.00

ಪ್ರಕಾಶಕರು :
ಶ್ರೀ ಟಿ. ಎಸ್. ರಾಮಚಂದ್ರ
ನಂ. 366, 42 ಅಡ್ಡರಸ್ತೆ, 8ನೇ ಬ್ಲಾಕ್, ಜಯನಗರ, ಬೆಂಗಳೂರು – 560 070
ದೂರವಾಣಿ : 080 – 2244 5213

ಮುದ್ರಣ :
ಸಪ್ತಗಿರಿ ಎಂಟರ್‌ಪ್ರೈಸಸ್
71/1, 'ರಾಘವೇಂದ್ರ ನಿವಾಸ'
6ನೇ ಮುಖ್ಯರಸ್ತೆ, 4ನೇ ಹಂತ, ತ್ಯಾಗರಾಜನಗರ
ಬೆಂಗಳೂರು – 560 028
ದೂರವಾಣಿ : 9880085071

ಮುನ್ನುಡಿ

ನಮ್ಮ ದೇಶದ ಜನತೆಯು ಇಲ್ಲಿ ಪ್ರಚಲಿತವಾಗಿರುವ ಪರಂಪರೆಗಳು, ಶಾಸ್ತ್ರವಿಹಿತ ಸಂಪ್ರದಾಯಗಳು ಮುಂತಾದವನ್ನು ಪುರಾತನ ಕಾಲದಿಂದಲೂ ಶ್ರದ್ಧೆ, ಭಕ್ತಿ ಮತ್ತು ನಂಬಿಕೆಗಳಿಂದ ಆಚರಿಸುತ್ತಾ ಬಂದಿದ್ದಾರೆ. ಸಮಾಜದ ಎಲ್ಲ ಪಂಗಡಗಳಲ್ಲೂ ಇಂತಹ ಅನೇಕ ವೈವಿಧ್ಯಮಯ ಚಟುವಟಿಕೆಗಳು ನಡೆಯುತ್ತಿವೆ. ಇತ್ತೀಚಿನ ವರ್ಷಗಳಲ್ಲಿ, ಆಧುನಿಕ ಆಲೋಚನೆಗಳು, ಒತ್ತಡಗಳು ಮುಂತಾದವುಗಳಿಂದ ಇಂತಹ ಆಚರಣೆಗಳು ಕಡಮೆಯಾಗುತ್ತಾ ಬರುತ್ತಿವೆ; ಇವುಗಳ ಉಪಯುಕ್ತತೆಗಳ ಬಗ್ಗೆ ಪ್ರಶ್ನೆಗಳು, ಅನುಮಾನಗಳು ಮುಂತಾದವುಗಳು ಪ್ರಚಲಿತವಾಗುತ್ತಿವೆ; ಇಂತಹ ಆಚರಣೆಗಳಲ್ಲಿ ತೊಡಗಿದರೂ ಅವುಗಳನ್ನು ಕೇವಲ ಅನಿವಾರ್ಯ ಎಂದು ಭಾವಿಸಿ ಯಾಂತ್ರಿಕವಾಗಿ ನಡೆಸಿಕೊಂಡು ಹೋಗುವ ಪ್ರವೃತ್ತಿಗಳು ಉಂಟಾಗುತ್ತಿವೆ. ಆದರೆ ಸಮಾಜವು ನೆಮ್ಮದಿಯಿಂದ ಬಾಳಬೇಕೆಂದರೆ, ಅದರ ಎಲ್ಲ ಅಂಗಗಳ ನಡುವೆ ಪರಸ್ಪರ ಸೌಹಾರ್ದ ಮನೋಭಾವ ಇರಬೇಕು. ಇದೇ ನಿಜವಾದ ಜೀವನ. ಮಾನವ ಜನ್ಮದ ಅಪೂರ್ವ ಅವಕಾಶವನ್ನು ಪಡೆದಿರುವ ನಾವು ನಮ್ಮ ಬಿಡುವಿಲ್ಲದ ಕೆಲಸಕಾರ್ಯಗಳ ಮಧ್ಯೆಯೂ ಸೋದರ-ಸೋದರಿಯರು, ಬಂಧುಬಾಂಧವರು, ನಮ್ಮ ಸಂಪರ್ಕಕ್ಕೆ ಬರುವ ಜನರು ಮುಂತಾಗಿ ಎಲ್ಲರೊಡನೆ ಮಿಳಿತವಾಗಿ ಸುಖ ದುಃಖಗಳನ್ನು ಹಂಚಿಕೊಂಡು ನಮ್ಮ ಜೀವನದ ಸಮಸ್ಯೆಗಳಿಗೆ ಸೂಕ್ತವಾದ ಪರಿಹಾರಗಳನ್ನು ಕಂಡುಕೊಂಡು ಸಾರ್ಥಕ ಜೀವನವನ್ನು ನಡೆಸುವುದೇ ಸರಿಯಾದ ಜೀವನ. ಹೀಗೆ ಸಹಜ ಹಾಗೂ ಉತ್ತಮ ಜೀವನವನ್ನು ನಡೆಸಲು ಇಂತಹ ಶಾಸ್ತ್ರ ಸಾಂಪ್ರದಾಯಕ ವಿಧಿಗಳು ರಾಜಮಾರ್ಗಗಳಾಗಿವೆ. ಇವುಗಳ ಹಿಂದೆ ಬಲ್ಲವರ, ಸಾಧಕರ ಹಾಗೂ ಜೀವನಾನುಭವಿಗಳ ಮಹೋನ್ನತ ವಿಚಾರಗಳಿವೆ. ಉತ್ತಮ ಸಮಾಜ ಜೀವನಕ್ಕೆ ದಾರಿಯಾಗಿರುವ ಇವುಗಳ ಅತ್ಯಮೂಲ್ಯ ಅಂತರಾರ್ಥಗಳನ್ನು ತಿಳಿದುಕೊಂಡು ಎಲ್ಲರಿಗೂ ತಿಳಿಸಿಕೊಡುವುದೇ ಇಂದಿನ ಅಗತ್ಯವಾಗಿದೆ. ಇವುಗಳ ಆಚರಣೆಯಿಂದ ಮನಸ್ಸು ಅರಳುವ, ನಿರ್ಮಲವಾಗುವ, ಕಷ್ಟಕೋಟಲೆಗಳನ್ನು ದೂರಮಾಡುವ ತನ್ಮೂಲಕ ಸುಖ ಜೀವನವನ್ನು ನಡೆಸುವ ವೈಜ್ಞಾನಿಕ ವಿಶ್ಲೇಷಣೆಗಳನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಕೇವಲ ಆಡಂಬರ, ನಮ್ಮ ಸಾಧನೆಯ ಪ್ರಚಾರ, ದೊಡ್ಡಸ್ತಿಕೆ ಮುಂತಾದವುಗಳನ್ನು ಮೆರೆಸುವ ಆದರೆ ಯಾವುದೇ ಮೌಲ್ಯಗಳಿಲ್ಲದ ಇಂದಿನ ಪದ್ಧತಿಗಳಿಗಿಂತಲೂ ಈ ಶಾಸ್ತ್ರ ಸಂಪ್ರದಾಯಗಳು ಅತ್ಯುತ್ತಮ ಮೌಲ್ಯಗಳಿಂದ ಕೂಡಿವೆ; ಜೀವನ ಸಾರ್ಥಕತೆಗೆ ಕಾರಣವಾಗುತ್ತವೆ.

ಪ್ರಸ್ತುತ ಜನಜೀವನದಲ್ಲಿ, ನಮ್ಮ ಸಾಂಪ್ರದಾಯಕ ಚಟುವಟಿಕೆಗಳ ಸಿದ್ಧತೆ, ಆಚರಣೆ ಮುಂತಾದವುಗಳನ್ನು ತಿಳಿಸಿಕೊಡುವ ಗ್ರಂಥಗಳ ಪಾತ್ರ ಅಮೂಲ್ಯವೆಂದೇ ಹೇಳಬೇಕು. ಇಂತಹ ಹಲವಾರು ಪುಸ್ತಕಗಳು ಈಗಾಗಲೇ ಪ್ರಕಟವಾಗಿವೆ. ಆದರೆ ಇನ್ನೂ ಪ್ರಕಟವಾಗುವುದು ಅತ್ಯಂತ ಸೂಕ್ತವೆನಿಸುತ್ತದೆ. ಶಾಸ್ತ್ರ ಸಂಪ್ರದಾಯಗಳ ಆಂತರ್ಯವು ಒಂದೇ ಆಗಿದ್ದರೂ ಅವುಗಳ ಆಚರಣಾ ವಿಧಾನಗಳಲ್ಲಿ ವೈವಿಧ್ಯತೆಗಳಿವೆ. ವಿವಿಧ ಭೌಗೋಳಿಕ ಹಾಗೂ ಸಾಮಾಜಿಕ ಪರಿಸರಗಳ ಕಾರಣಗಳಿಂದ ಇಂತಹ ವ್ಯತ್ಯಾಸಗಳಿರುತ್ತವೆ. ಆದರೆ ಈ ವೈವಿಧ್ಯತೆಗಳು ಇವುಗಳ ಮೂಲೋದ್ದೇಶಗಳಿಗೆ ಯಾವುದೇ ಭಂಗ ಉಂಟುಮಾಡುವುದಿಲ್ಲ. ಈ ಹಿನ್ನೆಲೆಯಲ್ಲಿ, ನಮ್ಮ ಸಮಾಜದ ಭಾವಸಾಮರಸ್ಯ ಜೀವನಕ್ಕೆ ಎಡೆಮಾಡಿಕೊಡಬಲ್ಲ ಪ್ರಸ್ತುತ ಗ್ರಂಥವು ಬಹೂಪಯೋಗಿಯಾಗುತ್ತದೆ. ಶ್ರೀಮತಿ ಶಾಂತಾ ರಾಮಚಂದ್ರ ಅವರು ಬಾಲ್ಯದಿಂದಲೂ ಆಧ್ಯಾತ್ಮಿಕ ಹಾಗೂ ಧಾರ್ಮಿಕ ಪರಿಸರದಲ್ಲಿ ಬೆಳೆದುಬಂದು ಅಲ್ಲಿನ ಅಮೂಲ್ಯ ಆಚರಣೆಗಳನ್ನು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಗಮನಿಸಿ, ಹೃದ್ಗತ ಮಾಡಿಕೊಂಡಿರುವುದು ಇಲ್ಲಿ ಕಾಣಬರುತ್ತದೆ. ಅವರ ಮನದಲ್ಲಿ ನೆಲೆಗೊಂಡಿರುವ ವಿಚಾರಗಳನ್ನು ಜನತೆಗೆ ಪ್ರಸ್ತುತಪಡಿಸಬೇಕೆಂದು ನಿಶ್ಚಯಿಸಿದ್ದು ಅವರ ಸೇವಾ ಆಂತರ್ಯವನ್ನು ತೋರಿಸಿಕೊಡುತ್ತದೆ. ಈ ಗ್ರಂಥವು ಕನ್ನಡಿಗರ ಮನೆ, ಮನಗಳನ್ನು ತುಂಬಲಿ ಎಂಬುದೇ ನಮ್ಮ ಆತ್ಮೀಯ ಆಸೆಯಾಗಿದೆ.

– ಟಿ ವಿ ಶ್ರೀನಾಥಶಾಸ್ತ್ರೀ

– ವಿ ಸರಸ್ವತಿ

ಲೇಖಕಿಯ ಅನಿಸಿಕೆ

ಪ್ರಿಯ ಓದುಗರೇ,

ಈ ಆಧುನಿಕ ಯುಗದಲ್ಲಿ ನಮ್ಮ ಎಲ್ಲಾ ಶಾಸ್ತ್ರ ಸಂಪ್ರದಾಯಗಳನ್ನು ಆಚರಿಸುವವರು ಬಹಳ ವಿರಳ. ಕೆಲವರಿಗೆ ಶಾಸ್ತ್ರ ಸಂಪ್ರದಾಯಗಳ ಬಗ್ಗೆ ಸರಿಯಾದ ಮಾಹಿತಿಗಳು ಇಲ್ಲ. ಹೀಗಾಗಿ ಹಲವರು ಸ್ನೇಹಿತರು ಹಾಗೂ ಬಂಧುಗಳ ಪ್ರೋತ್ಸಾಹದಿಂದ ಮತ್ತು ನನ್ನ ಹಿರಿಯರಿಂದ ಆಚರಿಸಲ್ಪಡುತ್ತಿದ್ದ ಹಾಗೂ ಹಲವರಿಂದ ಕೇಳಿ ತಿಳಿದ ಕೆಲವು ಸಂಪ್ರದಾಯ ವಿಚಾರಗಳನ್ನು ಎಲ್ಲರೊಡನೆ ಹಂಚಿಕೊಳ್ಳಬೇಕೆಂಬ ಬಯಕೆ ನನ್ನಲ್ಲಿ ತುಡಿಯುತ್ತಿತ್ತು. ಒಮ್ಮೆ ಒಂದು ಮದುವೆಯ ಮನೆಗೆ ಹೋಗಿದ್ದಾಗ ಅಲ್ಲಿ ನಡೆಯುತ್ತಿದ್ದ ಶಾಸ್ತ್ರ, ಸಂಪ್ರದಾಯಗಳನ್ನು ನೋಡುತ್ತಾ ಆ ಬಗ್ಗೆ ಮಾತನಾಡುತ್ತಿರುವಾಗ ಅಲ್ಲಿ ಇದ್ದ ಕೆಲವರು ಇವುಗಳನ್ನು ನಮಗೆ ಬರೆದುಕೊಡಿ ಎಂದು ಕೇಳಿದರು. ಈ ಸಂಪ್ರದಾಯಗಳೆಲ್ಲಾ ಕಡಿಮೆಯಾಗುತ್ತಿರುವುದರಿಂದ ಇಂತಹ ಶುಭ ಸಮಾರಂಭಗಳಾದ ಮದುವೆ, ಮುಂಜಿ, ನಾಮಕರಣ ಮುಂತಾದ ನಮ್ಮ ಹಲವಾರು ಸಂಸ್ಕಾರಗಳು ಮತ್ತು ಸಂಸ್ಕೃತಿಗಳ ಬಗ್ಗೆ ನಮ್ಮ ಮುಂದಿನ ಪೀಳಿಗೆಗೆ ಅಲ್ಪಸ್ವಲ್ಪವಾದರೂ ತಿಳಿವಳಿಕೆ ಉಂಟುಮಾಡಲು ಸಹಾಯವಾಗಬಹುದೆಂದು ಆಗ ಈ ಬಗ್ಗೆ ಯೋಚಿಸಿ ನನಗೆ ತಿಳಿದುಬಂದ ಮಾಹಿತಿಗಳನ್ನು ಒಟ್ಟುಗೂಡಿಸಿ ಈ ಪುಸ್ತಕವನ್ನು ಬರೆದಿರುತ್ತೇನೆ. ಈ ಸಂಪ್ರದಾಯಗಳು ಸೀತೆ, ಪಾರ್ವತಿ ಮುಂತಾದ ದೇವರುಗಳ ಕಾಲದಲ್ಲೂ ಪ್ರಚಲಿತವಿದ್ದವು ಎಂಬುದು ಶ್ರೀ ಮತಿಘಟ್ಟ ಕೃಷ್ಣಮೂರ್ತಿ ಅವರು ಸಿದ್ಧಪಡಿಸಿರುವ ಸಂಪ್ರದಾಯ ಹಾಡುಗಳ ಒಂದು ದೊಡ್ಡ ಸಂಗ್ರಹದಲ್ಲಿನ ಹಾಡುಗಳಲ್ಲಿ ಕಂಡುಬರುತ್ತದೆ.

ಇಂತಹ ಅಮೂಲ್ಯ ಆಚರಣೆಗಳು ಬೆಲೆ ಇಲ್ಲದಂತಾಗಬಾರದು ಮತ್ತು ನಮ್ಮತನವನ್ನು ಸ್ವಲ್ಪವಾದರೂ ಉಳಿಸಿಕೊಂಡು ಬರಬೇಕು. ಈಗಿನ ಅರ್ಥವಿಲ್ಲದ ಆಡಂಬರ, ಫ್ಯಾಷನ್, ಊಟ, ಉಡುಗೊರೆಗಳಲ್ಲಿಯೇ ಈ ಸಮಾರಂಭಗಳು ಮುಕ್ತಾಯವಾಗಬಾರದು. ಈ ಶಾಸ್ತ್ರ ಸಂಪ್ರದಾಯಗಳಿಗೂ ಸ್ವಲ್ಪ ಕಾಲವನ್ನು ಮೀಸಲಾಗಿಡಬೇಕು. ಉದಾಹರಣೆಗೆ ಉಪನಯನ ಕಾರ್ಯಕ್ರಮದಲ್ಲಿ ಗಾಯತ್ರಿ ಉಪದೇಶವಾದ ನಂತರ ಅಲ್ಲಿ ಗಾಯತ್ರಿ ದೇವಿ ಬಂದಿರುತ್ತಾಳೆ ಎಂದು ಭಾವಿಸಿ ಸ್ವಲ್ಪ ಬಿಡುವು ಮಾಡಿಕೊಂಡು ಅವಳ ವರ್ಣನೆಯ ಹಾಡನ್ನು ಹಾಡಬೇಕು. ಮುಂದೆ ವಟುವಿಗೆ ಭಿಕ್ಷೆ ನೀಡುವ ಸಂದರ್ಭದಲ್ಲಿ, ಅವನು ಮುಂದೆ ವಿದ್ಯಾಭ್ಯಾಸವನ್ನು ಹೇಗೆ ಮಾಡಬೇಕೆಂದು ತಿಳಿಸುವ ಹಾಡನ್ನು ಹಾಡುತ್ತಾ ಭಿಕ್ಷೆ ನೀಡಬೇಕು. ಆಮೇಲೆ ವಟುವಿನ ನಡವಳಿಕೆಗಳಿಗೆ ಮಾರ್ಗದರ್ಶಕವಾಗಿರುವ ಮಂಗಳಾಷ್ಟಕವನ್ನು ಹಾಡಬೇಕು. ಇದನ್ನು ವರದಹಳ್ಳಿಯ ಶ್ರೀಧರ ಸ್ವಾಮಿಗಳು ಸಂಸ್ಕೃತದಲ್ಲಿ ಬರೆದಿದ್ದಾರೆ. ಇವುಗಳಲ್ಲೆಲ್ಲಾ ಅರ್ಥವತ್ತಾದ ಮತ್ತು ಮೌಲ್ಯಯುತವಾದ ವಿಷಯಗಳು ಇರುವುದನ್ನು ಗಮನಿಸಬೇಕು.

ಇದೇ ರೀತಿ ಎಲ್ಲ ಶುಭಕಾರ್ಯಗಳಿಗೆ ಸಂಬಂಧಿಸಿದ ಶಾಸ್ತ್ರ ಸಂಪ್ರದಾಯಗಳು ನಾವು ಹೇಗೆ ಉತ್ತಮ ಪ್ರಜೆಗಳಾಗಿ ಬಾಳ ಬೇಕೆಂಬುದನ್ನೇ ಸಾರಿ ಹೇಳುತ್ತವೆ. ಆದರೆ ಇವುಗಳಿಗಿಂತ ವೈಭವ ಆಡಂಬರಗಳೇ ಅಧಿಕವಾಗುತ್ತಿರುವುದು ಶೋಚನೀಯ ಸಂಗತಿ. ಇತ್ತೀಚಿನ ದಿನಗಳಲ್ಲಿ ಯುವಕರು ಮತ್ತು ಹೆಣ್ಣುಮಕ್ಕಳು ಹೆಚ್ಚಿನ ಪದವಿಗಳನ್ನು ಗಳಿಸಿ ದೊಡ್ಡ ದೊಡ್ಡ ಕೆಲಸಗಳಲ್ಲಿರು ವುದು ಸಾಮಾನ್ಯದ ಸಂಗತಿ. ಆದರೆ ಅವರ ಅನೇಕ ಅನಿಸಿಕೆಗಳು ಶೋಚನೀಯವೆನಿಸುತ್ತವೆ. ಸಂಸಾರದ ವ್ಯವಸ್ಥೆಯನ್ನೇ ಪ್ರಶ್ನೆ ಮಾಡುತ್ತಾ ಅಂದರೆ ಪ್ರಪಂಚಕ್ಕೇ ಆದರ್ಶಪ್ರಾಯವಾದ ನಿಜವಾದ ಜ್ಞಾನ, ತ್ಯಾಗ,

ಗೃಹ ಸಂಬಂಧಿ ಕೆಲಸ ಕಾರ್ಯಗಳು ಅಂದರೆ ದೈನಂದಿನ ಆಚರಣೆಗಳು ಮುಂತಾದವುಗಳನ್ನು ದೂರೀಕರಿಸುವ ಪ್ರವೃತ್ತಿಗಳು ಬೆಳೆಯುತ್ತಿವೆ. ಕೇವಲ ಹಣ ಗಳಿಸುವ ಮಾರ್ಗದಲ್ಲಿದ್ದು ಮುಖ್ಯವಾಗಿ ಗೃಹಜೀವನ, ಅಲ್ಲಿನ ಸುಖ, ಶಾಂತಿ, ನೆಮ್ಮದಿಗಳಿಗೆ ಪೂರಕವಾದ ನಡವಳಿಕೆಗಳೇ ಇಲ್ಲದಿರುವುದು ಅತ್ಯಂತ ಶೋಚನೀಯ ಎನಿಸುತ್ತದೆ. ಆದ್ದರಿಂದಲೇ ನಮ್ಮ ಲೌಕಿಕ ವ್ಯವಹಾರಗಳ ಜೊತೆಗೆ ನಮ್ಮ ಜೀವನಕ್ಕೆ ಶಾಂತಿ ನೆಮ್ಮದಿಗಳನ್ನು ನೀಡಬಲ್ಲ, ಈಗ ವಿನಾಶದ ಹಾದಿಯಲ್ಲಿರುವ, ಸತ್ ಸಂಪ್ರದಾಯಗಳನ್ನು ಆಚರಿಸುವತ್ತಲೂ ನಮ್ಮ ಗಮನವನ್ನು ಹರಿಸಬೇಕಾಗಿದೆ. ಆದರೆ ಇಂತಹ ಅನೇಕ ಧಾರ್ಮಿಕ ಹಾಗೂ ಸಾಂಸ್ಕೃತಿಕ ವಿಧಿಗಳನ್ನು ಕೇವಲ ವೈಯಕ್ತಿಕ ಅನುಭೋಗಕ್ಕೆ ಬಳಸುವ ರೂಢಿಯೂ ಬಂದಿದ್ದು ಇಂತಹ ಪ್ರವೃತ್ತಿಗಳನ್ನೂ ನಾವು ದೂರೀಕರಿಸಬೇಕು. ಅಂದರೆ, ಮುಖ್ಯವಾಗಿ ಈ ಎಲ್ಲಾ ಕ್ರಿಯೆಗಳನ್ನು ಶಾಸ್ತ್ರ ಸಂಪ್ರದಾಯಗಳಿಗೆ ಅನುಗುಣವಾಗಿ ಬಂಧು ಬಳಗದವರೊಡನೆ ಶ್ರದ್ಧೆಯಿಂದ ಆಚರಿಸುತ್ತಾ ಸರಳ ಜೀವನವನ್ನು ನಡೆಸುತ್ತಾ ಆತ್ಮೋದ್ಧಾರ ಮಾಡಿಕೊಳ್ಳಬೇಕು.

ಕ್ರಿಮಿಕೀಟಾದಿಗಳ ಹುಟ್ಟನ್ನು ಕಳೆದು ಉತ್ತಮವಾದ ಮಾನವ ಜನ್ಮವನ್ನು ಪಡೆದಿರುವ ನಾವು ಇದನ್ನು ಸಾರ್ಥಕಪಡಿಸಿ ಕೊಳ್ಳಬೇಕು. ಇದಕ್ಕೆ ಹತ್ತು ಹಲವಾರು ಮಾರ್ಗಗಳಿವೆ. ಅಂದರೆ ಆತ್ಮೋದ್ಧಾರಕ್ಕಾಗಿ ನಮ್ಮ ಋಷಿಮುನಿಗಳು ವೇದೋಪನಿಷತ್ತುಗಳಲ್ಲಿ ತಿಳಿಸಿರುವ ಧರ್ಮ, ಅರ್ಥ, ಕಾಮ, ಮೋಕ್ಷ ವಿಚಾರಗಳ ಚೌಕಟ್ಟಿನಲ್ಲೇ ನಮ್ಮ ಜೀವನವನ್ನು ನಡೆಸಬೇಕು. ಇದು ಪರಂಪರಾಗತವಾಗಿ ನಿತ್ಯ ಜೀವನದಲ್ಲೇ ಸಂಪ್ರದಾಯಗಳ ರೂಪದಲ್ಲಿ ಆಚರಣೆಗೆ ಬಂದಿವೆ. ಇದನ್ನು ಗೃಹಸ್ಥರು, ಅದರಲ್ಲೂ ಮುಖ್ಯವಾಗಿ ಗೃಹಿಣಿಯರು ಆಚರಿಸುವ ಪರಿಪಾಠ, ನಿಯಮಗಳು ಜಾರಿಯಲ್ಲಿವೆ. ಈ ಎಲ್ಲಾ ವಿಷಯಗಳನ್ನು ಪರಿಗಣಿಸಿ ಎಲ್ಲರ ಅನುಸರಣೆಗೆ ಕೆಲವಾರು ಅಗತ್ಯ ಮಾಹಿತಿಗಳು, ಕ್ರಿಯಾ ವಿಧಾನಗಳು, ಸ್ತೋತ್ರಗಳು ಮುಂತಾದವುಗಳನ್ನು ಈ ಪುಸ್ತಕದಲ್ಲಿ ದಾಖಲಿಸಲಾಗಿದೆ. ಮುಖ್ಯವಾಗಿ ಮಹಿಳೆಯರು ತಮ್ಮ ಜೀವನದಲ್ಲಿ ಇವುಗಳನ್ನು ಅಳವಡಿಸಿಕೊಂಡು ಮನೆಯಲ್ಲೇ ಪರಮಾತ್ಮನನ್ನು ಕಾಣಬಹುದು.

ಒಟ್ಟಿನಲ್ಲಿ ವೇದ, ಶಾಸ್ತ್ರ, ಉಪನಿಷತ್ತುಗಳಲ್ಲಿ ಮಾನವನ ಬದುಕಿನ ಬಗ್ಗೆ ತಿಳಿಸಿರುವ ಅನೇಕ ವಿಚಾರಗಳನ್ನು ಸಂಪ್ರದಾಯ ರೂಪದಲ್ಲಿ ಆಚರಿಸುವ ವಿಧಾನಗಳನ್ನು ನಮ್ಮ ಹಿರಿಯರು, ಪೂರ್ವಿಕರು ತಿಳಿಸಿಕೊಟ್ಟಿರುವುದು ಅತಿಶಯದ ಸಂಗತಿಗಳಾಗಿವೆ. ಈ ವಿಚಾರದಲ್ಲಿ ನನಗೆ ತಿಳಿದಿರುವುದನ್ನು ಇಲ್ಲಿ ತಿಳಿಸುವ ಪ್ರಯತ್ನವನ್ನು ಮಾಡಿದ್ದೇನೆ. ಸಹೃದಯ ಓದುಗರು ಮತ್ತು ಬಂಧು ಬಾಂಧವರು ಇವುಗಳನ್ನು ಓದಿ ತಿಳಿದುಕೊಂಡು ಆಚರಣೆಗೆ ತಂದರೆ ನಮ್ಮ ಹಾಗೂ ನಮ್ಮ ಮುಂದಿನ ಪೀಳಿಗೆಯವರ ಭವಿಷ್ಯ ಉಜ್ವಲವಾಗುವುದರಲ್ಲಿ ಸಂಶಯವಿಲ್ಲ.

ಈ ಸಂದರ್ಭದಲ್ಲಿ ಇದರ ಪರಿಷ್ಕರಣೆಗೆ ನೆರವಾದ ಮತ್ತು ಉತ್ತಮವಾದ ಮುನ್ನುಡಿಯನ್ನು ಬರೆದುಕೊಟ್ಟ ಶ್ರೀಮತಿ ವಿ. ಸರಸ್ವತಿ ಮತ್ತು ಶ್ರೀ ಚಿ.ವಿ. ಶ್ರೀನಾಥ ಶಾಸ್ತ್ರಿಗಳವರಿಗೆ ಕೃತಜ್ಞಳಾಗಿದ್ದೇನೆ. ನನ್ನ ಮಗಳಾದ ಚಿ॥ ಸೌ॥ ಗೀತಾ ಮತ್ತು ಕುಮಾರಸ್ವಾಮಿಯವರು ಮುದ್ರಣದ ಕಾರ್ಯವನ್ನು ನೆರವೇರಿಸಿಕೊಟ್ಟಿರುತ್ತಾರೆ. ಉಗನವಾಡಿ ಶ್ರೀ ವಿ.ಎ.ರವಿಯವರು ಅಂದವಾಗಿ ಮುದ್ರಿಸಿಕೊಟ್ಟಿರುತ್ತಾರೆ ಅವರಿಗೆ ನಮ್ಮ ಕೃತಜ್ಞತೆಗಳು. ಕುಟುಂಬ ವರ್ಗದವರು, ಸ್ನೇಹಿತರು ಸಹಕರಿಸಿದ್ದಾರೆ. ನಾನು ಗೃಹ ಜೀವನಕ್ಕೆ ಕಾಲಿಟ್ಟು 50 ವರ್ಷಗಳು ಕಳೆದ ಈ ಸಂದರ್ಭದಲ್ಲಿ ಹುಟ್ಟಿದ ಮನೆ ಮತ್ತು ಸೇರಿದ ಮನೆಯ ಹಿರಿಯರು ಆಚರಿಸುತ್ತಿದ್ದ ಮೌಲ್ಯಗಳನ್ನು ನಿಮ್ಮಗಳೊಡನೆ ಹಂಚಿಕೊಂಡಿದ್ದೇನೆ.

ಶಾಂತಾ ರಾಮಚಂದ್ರ

ಶಾಸ್ತ್ರ ಸಾಂಪ್ರದಾಯಿಕ ವಿಧಿಗಳು

ಪೀಠಿಕೆ

ಶಾಸ್ತ್ರವೆಂದರೆ ನಮ್ಮ ಧರ್ಮದಲ್ಲಿರುವ ಹಲವಾರು ವಿಚಾರಗಳ ಆಚರಣೆ ಹೇಗೆ ಎಂಬುದನ್ನು ತಿಳಿಸುವುದೇ ಆಗಿದೆ. ಸಂಪ್ರದಾಯಗಳನ್ನು ಆಚರಿಸುವುದರ ಮೂಲಕ ಈ ಶಾಸ್ತ್ರ ವಿಚಾರಗಳನ್ನು ತಿಳಿದುಕೊಳ್ಳಬಹುದಾಗಿದೆ. ಇದರಿಂದ ನಮಗೆ ಸಾಕಷ್ಟು ಪ್ರಯೋಜನಗಳಿವೆ. ಜೀವನವನ್ನು ನೆಮ್ಮದಿಯಿಂದ ಸುಗಮವಾಗಿ ನಡೆಸಲು ಶಾಸ್ತ್ರವಿಧಿಗಳು ಸಹಾಯಮಾಡುತ್ತವೆ. ನಮ್ಮ ಹಿರಿಯರು ಶಾಸ್ತ್ರವಿಹಿತವಾದ ಈ ಸಂಪ್ರದಾಯಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಹಾಗಾಗಿ ಅವರ ದೈಹಿಕ ಹಾಗು ಮಾನಸಿಕ ಆರೋಗ್ಯವು ಹೆಚ್ಚಿ ಅವರು ಹೆಚ್ಚು ದೃಢಕಾಯರಾಗಿರುತ್ತಿದ್ದರು.

ನಾವು ಮನುಷ್ಯರಾಗಿ ಹುಟ್ಟಿದ ದಿನದಿಂದ ಕೊನೆಯವರೆಗೂ ನಮ್ಮ ದೇಹದ ಪ್ರತಿ ಬದಲಾವಣೆಗೂ ಒಂದೊಂದು ಶಾಸ್ತ್ರವಿದೆ. ಶಾಸ್ತ್ರಗಳಿಗೆ ತಕ್ಕ ಸಂಪ್ರದಾಯಗಳೂ ಇವೆ. ಇವನ್ನೇ ಷೋಡಷ ಕರ್ಮಗಳೆಂದು ಕರೆಯುತ್ತಾರೆ. ಬರವೇ ರಾಮಾಯಣದಲ್ಲಿ ಉಗುರು ತೆಗೆಯುವುದೂ ಶಾಸ್ತ್ರದ ಒಂದು ಅಂಗವಾಗಿ ವೈಭವವಾಗಿ ನಡೆಯುತ್ತದೆ. ಪುಟ್ಟ ಮಗು ಮಗುಚಿಕೊಳ್ಳುವುದು, ಹೊಸ್ತಿಲು ದಾಟುವುದು ಇತ್ಯಾದಿಗಳನ್ನು ಆಚರಿಸುವ ಸಂಪ್ರದಾಯಗಳೂ ಇವೆ. ಅವುಗಳ ಆಚರಣೆಗಳಿಗೆಲ್ಲಾ ಬಗೆಬಗೆಯ ತಿಂಡಿ ತಿನಿಸುಗಳನ್ನು ಮಾಡಿ ಆರತಿ ಮಾಡುತ್ತಾರೆ.

ದೈನಂದಿನ ಆಚರಣೆಗಳು :

ಬೆಳಗ್ಗೆ ಏಳುವುದರಿಂದ ಹಿಡಿದು ರಾತ್ರಿ ಮಲಗುವವರೆಗೆ ಏನೇನು ಮಾಡಬೇಕೆಂಬುದೇ ಈ ಆಚರಣೆಗಳಾಗಿವೆ. ಮೊದಲನೆಯದಾಗಿ ಬೆಳಗ್ಗೆ ಎದ್ದ ತಕ್ಷಣ ಕೈ ನೋಡಿಕೊಂಡು ಈ ಶ್ಲೋಕವನ್ನು ಹೇಳಬೇಕು.

ಕರಾಗ್ರೇ ವಸತೇ ಲಕ್ಷ್ಮೀ ಕರಮಧ್ಯೇ ಸರಸ್ವತೀ ।
ಕರಮೂಲೇ ಸ್ಥಿತೇ ಗೌರೀ ಪ್ರಭಾತೇ ಕರದರ್ಶನಂ ॥

ಮೈ ತೊಳೆಯುವಾಗ ಹೇಳುವ ಮಂತ್ರ :

ಗಂಗೇ ಚ ಯಮುನೇ ಚೈವ ಗೋದಾವರಿ ಸರಸ್ವತಿ
ನರ್ಮದೇ ಸಿಂಧು ಕಾವೇರಿ ಜಲೇಸ್ಮಿನ್ ಸನ್ನಿಧಿಂ ಕುರು ॥

ಬೆಳಗ್ಗೆ ಸೂರ್ಯನಿಗೆ ನಮಸ್ಕಾರ :

ಉದಯೇ ಬ್ರಹ್ಮರೂಪೋಯಂ ಮಧ್ಯಾಹ್ನೇ ತು ಮಹೇಶ್ವರಃ
ಅಸ್ತಮಾನೇ ಸ್ವಯಂ ವಿಷ್ಣುಃ ತ್ರಯೀಮೂರ್ತಿರ್ದಿವಾಕರಃ ॥

ದೀಪ ಹಚ್ಚುವಾಗ ಹೇಳುವ ಮಂತ್ರ :

ದೀಪಂ ಜ್ಯೋತಿ: ಪರಬ್ರಹ್ಮ । ದೀಪಂ ಸರ್ವತಮೋಪಹಂ
ದೀಪೇನ ಸಾಧ್ಯತೇ ಸರ್ವಂ । ಸಂಧ್ಯಾದೀಪ ನಮೋಸ್ತುತೇ ॥

ಸಂಜೆ ದೀಪ ಹಚ್ಚುವಾಗ ಪ್ರಾರ್ಥನೆ :

ಶುಭಂ ಭವತು ಕಲ್ಯಾಣಂ ಆರೋಗ್ಯಂ ಧನ ಸಂಪದಃ ।
ಮಮ ಶತ್ರು ವಿನಾಶಾಯ ಸಾಯಂ ಜ್ಯೋತಿರ್ನಮೋಸ್ತುತೇ ॥

ಗುರುವಂದನೆ :

ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀ ಗುರವೇ ನಮಃ ॥

ವಿಘ್ನ ನಿವಾರಣ ಸ್ತೋತ್ರ :

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ
ಪ್ರಸನ್ನವದನಂ ಧ್ಯಾಯೇತ್ ಸರ್ವ ವಿಘ್ನೋಪಶಾಂತಯೇ ॥

ತುಳಸಿ ಪ್ರಾರ್ಥನೆ :

ನಮಃ ತುಳಸಿ ಕಲ್ಯಾಣೀ ನಮೋ ವಿಷ್ಣುಪ್ರಿಯೇ ಶುಭೇ ।
ನಮೋ ಮೋಕ್ಷಪ್ರದೇ ದೇವಿ ನಮಃ ಸಂಪತ್ ಪ್ರದಾಯಿನಿ ॥

ತುಳಸಿ ನಮಸ್ಕಾರ :

ಯನ್ಮೂಲೇ ಸರ್ವತೀರ್ಥಾನಿ ಯನ್ಮಧ್ಯೇ ಸರ್ವದೇವತಾಃ ।
ಯದಗ್ರೇ ಸರ್ವವೇದಾಶ್ಚ ತುಳಸೀ ತ್ವಾಂ ನಮಾಮ್ಯಹಂ ॥

ಸ್ತ್ರೀ ಸೌಭಾಗ್ಯ ವರ್ಧನೆಗೆ :

ಜೀವಯಾಮಾಸ ಭರ್ತಾರಂ ಮೃತಂ ಸತ್ಯಂ ಹಿ ಮೃತ್ಯುಹಾ ।
ಮೃತ್ಯುಂಜಯಃ ಸುಯೋಗೀಂದ್ರಃ ಸೌಭಾಗ್ಯಂ ಮೇ ಪ್ರಯಚ್ಛತು ॥

ವ್ಯಾಧಿ ನಿವಾರಣ ಸ್ತೋತ್ರ :

ಮಾಂ ಭಯಾತ್ ಸರ್ವತೋ ರಕ್ಷ ಶ್ರಿಯಂ ವರ್ಧಯ ಸರ್ವದಾ ।
ಶರೀರಾರೋಗ್ಯಂ ಮೇ ದೇಹಿ ದೇವ ದೇವ ನಮೋಸ್ತುತೇ ॥

ಸಂಕಟಗಳಿಂದ ಬಿಡುಗಡೆ :

ಅನಸೂಯಾತ್ರಿ ಸಂಭೂತೋ ದತ್ತಾತ್ರೇಯೋ ದಿಗಂಬರಃ ।
ಸ್ಮರ್ತೃಗಾಮಿ ಸ್ವಭಕ್ತಾನಾಮುದ್ಧರ್ತಾ ಭವಸಂಕಟಾತ್ ॥

ಮಹಾಮೃತ್ಯುಂಜಯ ಮಂತ್ರ

ಮೃತ್ಯುಂಜಯಾಯ ರುದ್ರಾಯ ನೀಲಕಂಠಾಯ ಶಂಭವೇ ।
ಅಮೃತೇಶಾಯ ಶರ್ವಾಯ ಮಹಾದೇವಾಯ ತೇ ನಮಃ ॥

ಪ್ರಾತರ್ ವಿಧಿಗಳು

ಸ್ನಾನ, ಪೂಜೆ, ಜಪ(ಸಂಧ್ಯಾವಂದನೆ) ಮುಂತಾದವುಗಳನ್ನು ಮಾಡಿಕೊಂಡು ಮುಂದಿನ ಕೆಲಸಗಳಲ್ಲಿ ತೊಡಗಬಹುದೆಂದು ಶಾಸ್ತ್ರದಲ್ಲಿ ವಿಧಿಸಿರುತ್ತಾರೆ. ಇದರ ಜೊತೆಗೆ ತಂದೆ ತಾಯಿಗಳಿಗೂ ಸಹ ನಮಸ್ಕರಿಸಬೇಕೆಂದಿದೆ. ಸಾಯಂಕಾಲವಾದ ಮೇಲೆ ಸಾಯಂಸಂಧ್ಯೆ,

ನಮಸ್ಕಾರ, ಸ್ತೋತ್ರಪಾಠ ಮುಂತಾದುವುಗಳನ್ನು ಮಾಡಬೇಕೆಂದಿದೆ. ಇದೇ ರೀತಿ ಸ್ತ್ರೀಯರಿಗೂ ಮನೆಗೆಲಸ, ಮಕ್ಕಳನ್ನು ನೋಡಿಕೊಳ್ಳುವುದು ಮುಂತಾದ ದೊಡ್ಡ ಜವಾಬ್ದಾರಿಗಳು ಇರುತ್ತವೆ. ಇವುಗಳು ದೈನಂದಿನವುಗಳಾದರೆ ಹಬ್ಬ, ಹರಿದಿನ, ಮನೆಯಲ್ಲಿ ಮಾಡುವ ವ್ರತಗಳು, ಪೂಜೆಗಳು, ಹುಟ್ಟುಹಬ್ಬ, ಮದುವೆ, ಮುಂಜಿ, ಜುಟ್ಟು, ನಾಮಕರಣ ಮುಂತಾದವುಗಳನ್ನು ಶಾಸ್ತ್ರ ಸಂಪ್ರದಾಯದಂತೆ ವೇದ ಮಂತ್ರಗಳೊಡನೆ ಕೂಡಿ ಮಾಡುತ್ತಾರೆ ಮತ್ತು ನಿತ್ಯ ಪೂಜೆಯಲ್ಲೂ ಸಾಲಿಗ್ರಾಮ ಮುಂತಾದ ಪೂಜೆಗಳನ್ನು ಗಂಡಸರೇ ಮಾಡಬೇಕು.

ಧ್ಯಾನ ಮಾಡುವ ಕ್ರಮ

1. ಒಬ್ಬರೇ ಪ್ರಶಾಂತವಾದ ಒಂದು ಕೋಣೆಯಲ್ಲಿ ಕುಳಿತುಕೊಳ್ಳುವುದು.
2. ಆಸನದ ವ್ಯವಸ್ಥೆ: ಎತ್ತರವೂ ತಗ್ಗೂ ಇಲ್ಲದ ಒಂದು ಆಸನದ (ಮಣೆ) ಕೆಳಗಡೆ ದರ್ಭೆಹುಲ್ಲು ಹಾಕಬೇಕು. ಅದರ ಮೇಲೆ ಕೃಷ್ಣಾಂಜನ ಹಾಕಿ ಅದರ ಮೇಲೆ ಬಟ್ಟೆ ಹಾಕಬೇಕು.
3. ಮನಸ್ಸನ್ನು ಶಾಂತವಾಗಿಟ್ಟುಕೊಳ್ಳಬೇಕು.
4. ಇಷ್ಟದೇವರನ್ನು ಮನಸ್ಸಿನಲ್ಲಿ ತಂದುಕೊಂಡು ಜಪಿಸಬೇಕು.

   ಈ ಧ್ಯಾನವನ್ನು ಮನೆಯ ಆಚೆ ಅಂಗಳದಲ್ಲಿ ಮಾಡಿದರೆ ಉತ್ತಮ. (ಗುರುಗೀತಾದಲ್ಲಿರುವಂತೆ ಆಸನ ವ್ಯವಸ್ಥೆ ಮಾಡಿಕೊಳ್ಳಬೇಕು)

ಈ ದೈನಂದಿನ ಕೆಲಸದ ಜೊತೆಯಲ್ಲಿ ಈ ಶಾಸ್ತ್ರ ಸಂಪ್ರದಾಯಗಳನ್ನು ವೇದ ಮಂತ್ರಗಳಿಂದ ಕೂಡಿ ಮಾಡುವುದು ಒಂದು ಸಂಸ್ಕಾರವಾಗಿರುತ್ತದೆ. ಇದಕ್ಕೆ ಮನೆಯಲ್ಲಿ ಮಹಿಳೆಯರೇ ಹೆಚ್ಚಿನ ಗಮನ ಕೊಡಬೇಕಾಗಿರುವುದರಿಂದ ಅವರುಗಳು ಮಾಡು ವುದನ್ನು ಇಲ್ಲಿ ಬರೆಯಲಾಗಿದೆ.

ಈ ಆಚರಣೆಯನ್ನು ನಮ್ಮ ಪೂರ್ವಿಕರಾದ ಋಷಿ–ಮುನಿಗಳು ಆಚರಿಸಿಕೊಂಡು ಬಂದಿದ್ದರು. ಬರುಬರುತ್ತಾ ಇವುಗಳಲ್ಲಿ ಬದಲಾವಣೆಗಳಾಗಿವೆ. ಆದರೆ ಅದನ್ನು ಬಿಡಬಾರದೆಂದು ಶ್ರೀ ಕೃಷ್ಣನು ಶಾಸ್ತ್ರದ ರೀತಿಯಲ್ಲೇ ನಡೆಯಬೇಕು, ಶಾಸ್ತ್ರವೇ ಪ್ರಮಾಣವೆಂದು ಗೀತೆಯಲ್ಲೂ ಕೂಡ ಹೇಳಿದ್ದಾನೆ. ಇದನ್ನೇ ಶ್ರೀ ಶಂಕರ ಚರಿತ್ರೆಯಲ್ಲೂ ಹೇಳಿದ್ದಾರೆ.

ನಮ್ಮ ಋಷಿ–ಮುನಿಗಳು ಕಂಡುಕೊಂಡ ಸತ್ಯವನ್ನು ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚೌಕಟ್ಟಿನಲ್ಲಿ ಅಳವಡಿಸಿದ್ದಾರೆ. ಇದು ಇಹಕ್ಕೆ ಸುಖ, ಪರಕ್ಕೆ ಗತಿ ಎಂದು ತಿಳಿದು ಇದನ್ನು ದೈನಂದಿನ ಆಚರಣೆಯ ಮೂಲಕ ಮಾಡಿದಾಗಲೇ ಜೀವನಕ್ಕೆ ಸಾರ್ಥಕತೆ ಸಿಗುವುದೆಂದು ಹೇಳಿದಂತೆ ಅದೇ ಪರಂಪರೆಯಾಗಿ ಬಂದಿದೆ ಆದ್ದರಿಂದ ನಾವು ಇದನ್ನೆಲ್ಲ ಪಾಲಿಸದಿದ್ದರೆ ನಮ್ಮ ಜೀವನಕ್ಕೆ ಒಂದು ಮಾರ್ಗದರ್ಶನವೇ ಇಲ್ಲದೆ ಎಲ್ಲೋ ಹೋಗಿ ಬೀಳಬೇಕಾಗುತ್ತದೆ.

ಧರ್ಮದಿಂದ ದುಡ್ಡನ್ನು ಗಳಿಸಿ (ಸಂಪಾದಿಸಿ) ದಾನ ಧರ್ಮ ಮಾಡುತ್ತಾ ರೀತಿ ನೀತಿಯಿಂದ ಸಾರ್ಥಕ ಬದುಕು ನಡೆಸಿ ಮೋಕ್ಷಕ್ಕೆ ದಾರಿ ಕಂಡುಕೊಳ್ಳಬೇಕು.

ಸ್ನಾನದಿಂದ ಶರೀರ ಶುದ್ಧಿ
ದಾನದಿಂದ ಧನವೃದ್ಧಿ
ಧ್ಯಾನದಿಂದ ಮನಶ್ಶುದ್ಧಿ.

ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳನ್ನು ನಮ್ಮೊಳಗೆ ದಮನ ಮಾಡಬೇಕು. ಕಾಮವನ್ನು ತೃಪ್ತಿಯಿಂದ, ಕ್ರೋಧವನ್ನು ವಿವೇಕದಿಂದ, ಲೋಭವನ್ನು ದಾನದಿಂದ, ಮೋಹವನ್ನು ವೈರಾಗ್ಯದಿಂದ, ಮದವನ್ನು ವಿನಯದಿಂದ, ಮಾತ್ಸರ್ಯವನ್ನು ಸಂತೋಷದಿಂದ ಗೆಲ್ಲಬಹುದೆಂದು ಭಾಗವತದಲ್ಲಿ ವಿಸ್ತಾರವಾಗಿ ಹೇಳಿದ್ದಾರೆ. ಈ ಇಂದ್ರಿಯಗಳನ್ನು ಶಿಸ್ತಿನಿಂದ ಇಡಲು ಶಾಸ್ತ್ರಸಂಪ್ರದಾಯಗಳನ್ನು ಮಹಿಳೆಯರು ಅಳವಡಿಸಿಕೊಳ್ಳಬೇಕು. ಆರೋಗ್ಯದ ಕಡೆ ಹೆಚ್ಚಿನ ಗಮನ ಕೊಡಬೇಕಾಗಿರುವುದರಿಂದ ಕೆಲವು ಮುಂಜಾಗ್ರತೆ ಕ್ರಮಗಳನ್ನೂ ಅನುಸರಿಸಬೇಕು. ಇದು ಶಾಸ್ತ್ರದಲ್ಲೂ ಇದೆ.ಅವುಗಳೆಂದರೆ ಎಂಜಲು, ಮುಸುರೆ, ಮಡಿ, ಮೈಲಿಗೆ ಎಂದು ಹೇಳುತ್ತಾರೆ. ಇದು ತಿಳಿದಿದ್ದರೆ ಆರೋಗ್ಯ ದೃಷ್ಟಿಯಿಂದ ತುಂಬಾ ಒಳ್ಳೆಯದು.

ಎಂಜಲು

ಊಟ ಮಾಡುವಾಗ ನೀರನ್ನು ಎತ್ತಿ ಕುಡಿಯಬೇಕೆಂಬ ನಿಯಮವಿದೆ. ಏಕೆಂದರೆ ನಾವು ತಿನ್ನುವಾಗ ಆಹಾರ ಪದಾರ್ಥಗಳು ತುಟಿಯೊಳಗೆ ಅಂಟಿರುತ್ತದೆ. ಪಾತ್ರೆ ಕಚ್ಚಿ ಕುಡಿದರೆ ಆ ಲೋಟಕ್ಕೆ ಅಲ್ಲಿರುವ ಎಂಜಲು ಅಂಟಿಕೊಳ್ಳುತ್ತದೆ. ಸ್ವಲ್ಪ ಹೊತ್ತಾದಮೇಲೆ ಅದರಲ್ಲಿರುವ ಎಂಜಲಿಗೆ ಗಾಳಿಯಿಂದ ರೋಗಾಣುಗಳು ಬರುವ ಸಾಧ್ಯತೆ ಇರುವುದರಿಂದ ಇದನ್ನು ಹಾಗೆಯೇ ಬಳಸಿದರೆ ಯಾವುದಾದರೂ ರೋಗವಿದ್ದರೆ ಇನ್ನೊಬ್ಬರಿಗೆ ಹರಡುವ ಸಾಧ್ಯತೆ ಇರುತ್ತದೆ. ಅದಕ್ಕೆ ಇದನ್ನು ಎಂಜಲು ಎನ್ನುತ್ತಾರೆ. ಆದ್ದರಿಂದ ಅದನ್ನು ಯಾವುದಕ್ಕೂ ಬೆರಸಬಾರದು ಮತ್ತು ಸ್ವಚ್ಛ ಮಾಡಿಯೇ ಉಪಯೋಗಿಸಬೇಕು.

ಮುಸುರೆ

ನಾವು ಅಡುಗೆ ಮಾಡಿದ ಮೇಲೆ ಬಿಸಿಯಾಗಿಯೇ ತಿನ್ನಬೇಕೆಂಬ ನಿಯಮವಿದೆ ಮತ್ತು ದೇವರಿಗೆ ನೈವೇದ್ಯ ಮಾಡಬೇಕು. ಏಕೆಂದರೆ ದೇವರು ಕೊಟ್ಟದ್ದನ್ನು ಅವನಿಗೇ ಸಮರ್ಪಿಸಿ ತಿನ್ನುವುದು ಸಂಪ್ರದಾಯ ಮತ್ತು ಅದರ ಜೊತೆಗೆ ಆಯುರ್ವೇದದಲ್ಲಿ ಹೇಳಿರುವಂತೆ ಆರೋಗ್ಯದ ದೃಷ್ಟಿಯಿಂದ ಅಡುಗೆ ಮಾಡಿದ 6 ಘಂಟೆಯೊಳಗೆ ತಿನ್ನಬೇಕೆಂದು ವೈದ್ಯರು ಹೇಳುತ್ತಾರೆ. ಶಾಸ್ತ್ರ ಕೂಡ ಅದನ್ನೇ ಹೇಳುತ್ತದೆ. ಕೆಲವರು ಉಪ್ಪಿನಕಾಯಿಯನ್ನೂ ಸಹ ಆಗತಾನೇ ತಯಾರಿಸಿದ್ದನ್ನು ತಿನ್ನುತ್ತಾರೆ.

'ಅನ್ನಂ ಪ್ರಾಣಗತಃ' ಅಂದರೆ ಅನ್ನವು ಜೀವಕ್ಕೆ ಪ್ರಾಣ ಶಕ್ತಿಯನ್ನು ಕೊಡುವುದೆಂದು ಅರ್ಥ. ಅದನ್ನು ಎಲ್ಲೆಂದರೆ ಅಲ್ಲಿ ತಿನ್ನುವ ಹಾಗಿಲ್ಲ. ಪದೇ ಪದೇ ಕೈಯಲ್ಲಿ ಮುಟ್ಟಿದರೆ ಕೈಯನ್ನು ತೊಳೆಯಬೇಕು. ಏಕೆಂದರೆ ಅಕ್ಕಿ ಬೆಂದಮೇಲೆ ಅದರಲ್ಲಿ ಅಂಟು ಇರುತ್ತದೆ. ಇದರಿಂದ ರೋಗಾಣು ಹರಡುವ ಸಾಧ್ಯತೆ ಇರುವುದರಿಂದ ಇದನ್ನು ಮುಸುರೆ ಎನ್ನುತ್ತಾರೆ.

ಮಡಿ

ನಾವು ಅಡುಗೆ ಮಾಡುವಾಗ ಸ್ವಚ್ಛವಾಗಿರಬೇಕು. ಯಾವ ತಿನ್ನುವ ಪದಾರ್ಥಗಳನ್ನು ಮಾಡಬೇಕಾದರೂ ನಾವು ಸ್ನಾನ ಮಾಡಿ ಒಗೆದ (ಶುದ್ಧ) ಬಟ್ಟೆ ತೊಟ್ಟು ದೇವರನ್ನು ಸ್ಮರಿಸಿಕೊಂಡು ಮಾಡಬೇಕು. ಏಕೆಂದರೆ ನಮ್ಮ ದೇಹದಲ್ಲಿ ಬೆವರು ಉತ್ಪತ್ತಿಯಾಗುತ್ತಿರುತ್ತದೆ

ಮತ್ತು ಮನಸ್ಸಿನಲ್ಲಿ ಯಾವುದ್ಯಾವುದೋ ಯೋಚನೆಗಳು ಬರುತ್ತಿರುತ್ತವೆ. ಆದ್ದರಿಂದ ಭಗವಂತನ ನಾಮವನ್ನು ಹೇಳುತ್ತಿದ್ದರೆ ಮನಸ್ಸು ತಿಳಿಯಾಗುತ್ತದೆ. ಇದನ್ನು ನಾವು ಅನುಭವಿಸಿಯೇ ತಿಳಿಯಬೇಕು. ವೈಜ್ಞಾನಿಕವಾಗಿ ಸಹ +ತಜಿ ಡಿಚಿಥಿ ಇರುತ್ತದೆ ಎನ್ನುತ್ತಾರೆ. ಇದೇ ತರಹ ದೇವರ ಪೂಜೆಗೂ ಸಹ ಚೆನ್ನಾಗಿ ಬಟ್ಟೆಯನ್ನು ಒಗೆದು ಒಂದು ಕಡೆ ಹರವಿ ಒಣಸಿಕೊಳ್ಳಬೇಕು ಮತ್ತು ಅದನ್ನೇ ಧರಿಸಿ ಪೂಜೆ ಜಪಗಳನ್ನು ಮಾಡಬೇಕೆಂಬ ನಿಯಮ ಇದೆ. ಕೆಲವರು ಮನಸ್ಸು ಶುದ್ಧವಾಗಿದ್ದರೆ ಸಾಕೆನ್ನುತ್ತಾರೆ. ಆದರೆ ಅಂತರಂಗ, ಬಹಿರಂಗ ಎರಡೂ ಶುದ್ಧವಾಗಿರಬೇಕೆಂದಿದೆ. ದೇವಸ್ಥಾನದಲ್ಲಿ ದೇವರು ಅಲಂಕಾರದಿಂದಿದ್ದು ದೇವಸ್ಥಾನದ ಒಳಗೆ ಸ್ವಚ್ಛವಾಗಿರದಿದ್ದರೆ ಹೇಗೋ ಹಾಗೆ ದೇಹ ಮನಸ್ಸು ಎರಡು ಶುದ್ಧವಾಗಿರಬೇಕೆಂಬ ನಿಯಮವಿದೆ. ಅದರಲ್ಲೂ ವೇದವನ್ನು ಪಠಿಸುವಾಗ, ಜಪ ಮಾಡುವಾಗ, ಶುಭದಲ್ಲಿ ಅಥವಾ ಅಶುಭದಲ್ಲಿ ಶುದ್ಧತೆಗೆ ಮಾನ್ಯತೆ ಕೊಡಲೇಬೇಕು. ಪೂಜೆ, ವ್ರತ, ಹೋಮ ಮುಂತಾದ ಕಾರ್ಯಗಳನ್ನು ಮಾಡುವಾಗ ಈ ನಿಯಮವನ್ನು ಅನುಸರಿಸಬೇಕು.

ಇದಲ್ಲದೆ ನಾವು ಆಸ್ಪತ್ರೆಗೆ ರೋಗಿಗಳನ್ನು ನೋಡಲು ಹೋದಾಗ, ಬಸ್ಸಿನಲ್ಲಿ ಪ್ರಯಾಣ ಮಾಡಿದಾಗ, ಸತ್ತವರನ್ನು ನೋಡಲು ಹೋದಾಗ, ಕ್ಷೌರಿಕನ ಅಂಗಡಿಗೆ ಹೋಗಿ ಮನೆಗೆ ಬಂದಾಗ ತಲೆಯಿಂದ ಸ್ನಾನ ಮಾಡಲೇಬೇಕೆಂಬ ನಿಯಮವಿದೆ. ಏಕೆಂದರೆ ಮೇಲೆ ಹೇಳಿದ ಪರಿಸರದಲ್ಲೆಲ್ಲ ಅಲ್ಲಿರುವ ಗಾಳಿಯಲ್ಲಿ ಬೇರೆ ಬೇರೆ ತರಹದ ರೋಗಾಣುಗಳು ಹರಡಿರುವ ಸಾಧ್ಯತೆಗಳಿರುವುದರಿಂದ ಎಷ್ಟೇ ಹೊತ್ತಾಗಿದ್ದರೂ ಯಾವ ಸಮಯದಲ್ಲಾದರೂ ತಲೆಸ್ನಾನ ಅತ್ಯಂತ ಅವಶ್ಯಕ.

ಇದೇ ರೀತಿ ಮದುವೆ ಮನೆಗಳಲ್ಲಿ ಚಪ್ಪಲಿ, ಬೂಟ್ಸ್‌ಗಳನ್ನೇ ಹಾಕಿಕೊಂಡು ಊಟಕ್ಕೆ ಕುಳಿತಿರುತ್ತಾರೆ. ಇದು ಸಹ ತಪ್ಪು. ಏಕೆಂದರೆ ನಾವು ದಾರಿಯಲ್ಲಿ ಓಡಾಡುವಾಗ ಏನಾದರೂ ತುಳಿದಿರುತ್ತೇವೆ. ಅನ್ನವನ್ನು ಅನ್ನಪೂರ್ಣೆಯೆಂದು ಪೂಜಿಸುವುದರಿಂದ ಮತ್ತು ಊಟ ಮಾಡುವಾಗ ಗಾಳಿಯಲ್ಲಿನ ರೋಗಾಣುಗಳು ಊಟದ ಜೊತೆಯಲ್ಲಿ ಶರೀರಕ್ಕೆ ಸೇರುವ ಸಾಧ್ಯತೆಗಳು ಇರುವುದರಿಂದ ಶುದ್ಧತೆಯಿಂದ ಭೋಜನ ಮಾಡಬೇಕು. ಒಟ್ಟಿನಲ್ಲಿ ಮಡಿಯೆಂದರೆ ಪರಿಶುದ್ಧತೆಯಿಂದ ಇರುವುದು. ಇದನ್ನೆಲ್ಲ ಆಚರಿಸಿ ಆರೋಗ್ಯದಿಂದ 100/105 ವರ್ಷಗಳು ಇರುವವರನ್ನು ಈಗಲೂ ಕಾಣಬಹುದು.

ಉಪವಾಸ

ಭಾರತೀಯರು ಪಾಪಕ್ಕೆ ಪ್ರಾಯಶ್ಚಿತ್ತವಾಗಿ ಪಾಪ ವಿಮೋಚನೆಗಾಗಿ ಏನೂ ತಿನ್ನದೇ ಕೇವಲ ತುಳಸಿ ನೀರನ್ನು ಪ್ರಾಶನ ಮಾಡಿ ಉಪವಾಸವನ್ನು ಕೈಗೊಳ್ಳುವುದುಂಟು. ಇದು ಆರ್ಷೇಯ ಪದ್ಧತಿ. ಪ್ರಾಯಶ್ಚಿತ್ತಕ್ಕಲ್ಲದೆ ದೇವತಾನುಗ್ರಹವನ್ನು ಪಡೆಯಲು ಸಹ ಉಪವಾಸ ವ್ರತವನ್ನು ಯಥೋಚಿತವಾಗಿ ಆಚರಿಸುವುದುಂಟು. ದೇವತಾನುಗ್ರಹದಿಂದ ಸದ್ಗುಣಗಳು, ಶುಚಿರ್ದಕ್ಷ ಕಾರ್ಯಗಳು, ಸಾತ್ವಿಕ ಪ್ರವೃತ್ತಿ, ಶಾಂತಿ, ಆನಂದ ಇವೇ ಮುಂತಾದ ಜೀವೋತ್ತಮ ಗುಣಗಳು ಹೆಚ್ಚುತ್ತವೆ. ಮೈಮನಗಳಲ್ಲಿ ಶುಚಿರ್ಭೂತರಾದ ಉಪವಾಸಿಗರು ಕೈಹಿಡಿದ ಕೆಲಸಗಳೆಲ್ಲವೂ ಹೂವಿನಂತೆ ಹಗುರವಾಗುತ್ತವೆ. ಇದು ಅನೇಕರ ಅನುಭವವಾಗಿದ್ದು ನಮಗೂ ವೇದ್ಯವಾಗುತ್ತದೆ.

ಅನುಭವಸಿದ್ಧ ಮನಸ್ಸನ್ನು ಆತ್ಮೋನ್ನತಿಯ ಕಡೆ, ಅಮೃತತ್ವದ ಕಡೆ ಕೇಂದ್ರೀಕರಿಸಲು ಉಪವಾಸವು ಒಂದು ಸಮರ್ಥ ಮಾಧ್ಯಮವೇ ಸರಿ. ತಿಂದದ್ದು ಹೆಚ್ಚಾದಾಗ ರೋಗಗಳು ಹುಟ್ಟುವುದರಿಂದ (ಅಜೀರ್ಣ ಪ್ರಭವಾ ರೋಗಾಃ) ಉಪವಾಸ ಆರೋಗ್ಯಕ್ಕೆ ಒಳ್ಳೆಯದು. ಇದೆಲ್ಲ ಶಾಸ್ತ್ರಗಳು ಹಾಗೂ ಆಯುರ್ವೇದ ವೈದ್ಯರ ಸಲಹೆಯಷ್ಟೇ ಅಲ್ಲ, ಪಾಶ್ಚಾತ್ಯ ವೈದ್ಯವಿಜ್ಞಾನದ ಮಹಾನ್ ವ್ಯಕ್ತಿ 'ಅಲೆಕ್ಸಿಸ್ ಕಾರಲ್' ರವರು ನೀಡಿದ ಅಭಿಪ್ರಾಯ ಕೂಡ.

ನಮ್ಮ ಪೂರ್ವಿಕರು ಹಾಗೂ ಯೋಗಿಶ್ರೇಷ್ಠರು ಉಪವಾಸಕ್ಕಾಗಿ ನಿಶ್ಚಿತ ದಿನವನ್ನು ವಿಧಿಸಿದ್ದಾರೆ. ಈ ದಿನದ ವಿಶೇಷ ಶಕ್ತಿಯಿಂದಾಗಿ ಮನಸ್ಸು ಬೇಗನೆ ಗುರು-ಹಿರಿಯರ, ದೇವರ ಧ್ಯಾನದಲ್ಲಿ ನೆಲೆಗೊಳ್ಳುತ್ತದೆ. ಉಪವಾಸವಿದ್ದಾಗ ಮನಸ್ಸು ಸ್ವಲ್ಪ ಸ್ಥಿರವಾಗಿರುತ್ತದೆ. ಪ್ರಾಯಶಃ ಮೇಲಿನ ಉದ್ದೇಶದಿಂದಲೇ ಏಕಾದಶಿ ಉಪವಾಸವನ್ನು ಎಲ್ಲ ಪುರಾಣಗಳೂ ಪ್ರತಿಪಾದಿಸಿವೆ. ಈ ವ್ರತ ಮಹಾತ್ಮೆಯಂತೆ ಏಕಾದಶಿಯ ದಿನ ಆಹಾರ ಬಿಟ್ಟು (ಶಾಸ್ತ್ರಾರ್ಥಕ್ಕೆ ತುಳಸಿ ನೀರನ್ನು ಸೇವಿಸಿ) ಬ್ರಹ್ಮಚರ್ಯಾದಿ ನೀತಿಯನ್ನು ಅನುಸರಿಸಬೇಕು. ಇದರಿಂದ ಚಿತ್ತ ಶುದ್ಧಿಯಾಗುತ್ತದೆ. ಅಂದು ನಿಯಮಗಳಿಂದ ಇದ್ದು ಭಗವಂತನ ಅರ್ಚನೆ ಧ್ಯಾನ ಮುಂತಾದ ಸತ್ಕರ್ಮಗಳಿಂದ ಕಳೆದು ಬೆಳಗ್ಗೆ ಪಾರಣೆ ಮಾಡಬೇಕು. ಉಪವಾಸ ಮುರಿಯುವುದಕ್ಕೆ ಸಂಸ್ಕೃತದಲ್ಲಿ ಪಾರಣೆ (ಊಟ ಮಾಡು) ಎಂದರೆ ದಾಟುವುದು. ಇದೆಲ್ಲದರ ಹಿಂದೆ ಈ ವ್ರತಾಚರಣೆಯಲ್ಲಿ ಅಧ್ಯಾತ್ಮಿಕ ಹಾಗೂ ಆರೋಗ್ಯ ರಕ್ಷಕ ಭಾವನೆಗಳು ಇವೆ.

ಪ್ರಸಿದ್ಧರಾದ ರುಕ್ಮಾಂಗದ, ಶ್ರೀರಾಮಚಂದ್ರ, ನಾರದ, ಅಂಬರೀಶ, ಮುಚುಕುಂದ ಮುಂತಾದ ಅನೇಕ ಪುರಾಣ ವ್ಯಕ್ತಿಗಳು ಏಕಾದಶಿವ್ರತದ ಮೂಲಕ ತಮ್ಮ ಅಭೀಷ್ಟಗಳನ್ನು, ಮೋಕ್ಷವನ್ನು ಪಡೆದರೆಂದು ಪುರಾಣಗಳಲ್ಲಿ ಹೇಳಲಾಗಿದೆ.

ಶಿವರಾತ್ರಿ ಉಪವಾಸ

ನಮ್ಮ ಪೂರ್ವದಲ್ಲಿ ಮಾಘಮಾಸದಲ್ಲಿ ಬರುವ ಶಿವರಾತ್ರಿಯಲ್ಲಿ ಕೂಡ ಇದೇ ರೀತಿ ಉಪವಾಸ, ಅಭಿಷೇಕ, ಅರ್ಚನೆ, ಜಾಗರಣೆ, ಪಾರಣೆಗಳನ್ನು ಆಚರಿಸುತ್ತಿದ್ದರು. ಹಿಂದಿನಿಂದಲೂ 'ಮಾಘ ಕೃಷ್ಣ ಚತುರ್ದಶ್ಯಾಂ ಶಿವಪೂಜಾ ಸುದುರ್ಲಭಾಂ' ಎಂಬ ನುಡಿ ಪ್ರಸಿದ್ಧವಾಗಿದೆ. ಉಕ್ತಿಶಿವ ಅಂದರೆ ಸಕಲ ದುರಿತಗಳನ್ನು ದೂರಮಾಡಿ ತನ್ನ ಭಕ್ತರನ್ನು ಕೈ ಹಿಡಿದು ನಡೆಸುವ ದಿವ್ಯ ಶಕ್ತಿಯುಳ್ಳ ಮಹಾದೇವ.

ಶಿವನ ಅಪಾರ ಮಹಿಮೆಗಳು ಅನೇಕಾನೇಕ ಪುರಾಣಗಳಲ್ಲಿ ಉಲ್ಲೇಖಿತವಾಗಿವೆ. 'ಓಂ ನಮಃ ಶಿವಾಯಚ ಶಿವತರಾಯಚ' ಎಂಬುದು ಮಾತಿನ ಮಂತ್ರವಾಗದೆ ಮನದ ತಂತ್ರವಾಗಬೇಕೆಂದು ಈ ಉಪವಾಸದ ಆಚರಣೆ ನಡೆದು ಬಂದಿದೆ. ಈ ಹಲವು ಬಗೆಯ ಉಪವಾಸಗಳಿಂದ ದೈಹಿಕ ಹಾಗೂ ಮಾನಸಿಕ ಸ್ವಾಸ್ಥ್ಯಗಳಲ್ಲದೆ ಅನೇಕಾನೇಕ ರೋಗಗಳಿಗೆಲ್ಲಾ ಉತ್ತಮ ಚಿಕಿತ್ಸಾವಿಧಾನ, ಶಾರೀರಿಕ ಬಾಧೆಗಳಿಗೆ ಉಪಶಮನಕಾರಿ, ಜೀರ್ಣಾಂಗಳಿಗೆ ವಿಶ್ರಾಂತಿ ಕೊಡುವ ದಿವ್ಯ ಸಾಧನ. ನೆಗಡಿ, ಕೆಮ್ಮು ನಿವಾರಣೆಗೆ ಸಂಜೀವಿನಿ; ಜೀವನೋತ್ಸಾಹವನ್ನು ಹೆಚ್ಚಿಸುವ ವರ್ಧಮಾನಾಲಯ, ಜೀರ್ಣಶಕ್ತಿಯನ್ನು ಕುದುರಿಸುವ ಕಾಯಕಲ್ಪ, ವೈರಬುದ್ಧಿಯನ್ನು ಪಚನ ಮಾಡುವ 'ಮಹೇಂದ್ರ

ಶಕ್ತಿ', ಮನಸ್ಸನ್ನು ನಿರ್ಮಲಗೊಳಿಸುವ ಮಿತ್ರ.

ಕಾರ್ತೀಕ ಸೋಮವಾರದ ದಿನವು ಈಶ್ವರನಿಗೆ ಶ್ರೇಷ್ಠ. ಏಕೆಂದರೆ ಸೋಮ (ಚಂದ್ರ) ತಲೆಯ ಮೇಲೆ ಇರುವುದರಿಂದ ಅದು ಅವನಿಗೆ ಇಷ್ಟ ಮತ್ತು ಷಣ್ಮುಖನ ನಕ್ಷತ್ರದ ತಿಂಗಳಾದ್ದರಿಂದ ಅವನ ಮಗ ಷಣ್ಮುಖನಿಗೆ ಕಾರ್ತೀಕ ಮಾಸದ ಸೋಮವಾರ ಪ್ರಿಯವಾಯಿತು.

ಉಪವಾಸವು ಒಂದು ಧಾರ್ಮಿಕ, ನೈತಿಕ, ಲೌಕಿಕ, ಅರ್ಥಪೂರ್ಣ ಆಚರಣೆ, ಪ್ರಕ್ರಿಯೆ. ಪ್ರಾಂಜಲ ಮನಸ್ಸಿನಿಂದ ತಪ್ಪದೇ ಪ್ರತಿದಿನದ ಪ್ರಾರ್ಥನೆ ಪರ್ವಕಾಲದಲ್ಲಿ (ಪುಣ್ಯಕಾಲ) ಉಪವಾಸ ಕೈಗೊಳ್ಳದೆ ಇರುತ್ತಿದ್ದರೆ ನಾನು ಎಂದೋ ಹುಚ್ಚನಾಗಿ ಅಂಡಲೆಯುತ್ತಿದ್ದೆ ಎಂಬ ಮಾತನ್ನು ಮಹಾತ್ಮಾ ಗಾಂಧೀಜಿಯವರು ತಮ್ಮ ಆತ್ಮ ಕಥನದಲ್ಲಿ ಹೇಳಿರುವುದನ್ನು ಇಲ್ಲಿ ಸ್ಮರಿಸಬಹುದು.

ವೈಜ್ಞಾನಿಕವಾಗಿ ಕೂಡಾ ಉಪವಾಸವಿದ್ದಾಗ ಕ್ಯಾನ್ಸರ್ ಸೆಲ್‌ಗಳು ಬೆಳೆಯುವುದಿಲ್ಲ. ನಿಷ್ಠೆಯಿಂದ ಉಪವಾಸಗಳನ್ನು ಮಾಡುತ್ತಿರುವವರಿಗೆ ಈ ಕಾಯಿಲೆ ಬರುವುದು ವಿರಳ. ಆದರೆ ಕೆಲವು ಬಲಹೀನರು, ರಕ್ತದ ಒತ್ತಡ, ಸಿಹಿಮೂತ್ರ ಇರುವವರು, ವಿಶೇಷತಃ ಗರ್ಭಿಣಿಯರು, ಉದರದಲ್ಲಿ ಬೆಳೆಯುತ್ತಿರುವ ಕಂದಮ್ಮಗಳು, ಚಿಕ್ಕಮಕ್ಕಳಿಗೆ ಹಾಲೂಡಿಸುವ ತಾಯಂದಿರು ಮುಂತಾದವರಿಗೆ ಉಪವಾಸ ನಿಷಿದ್ಧ.

ಉಪವಾಸಗಳನ್ನು ಆಚರಿಸಲು ನಮ್ಮ ಶಾಸ್ತ್ರದಲ್ಲಿ ಏಕಾದಶಿ, ವ್ರತಗಳು, ಮನೆ ದೇವರಿಗೆ ಪೂಜೆ ಎಂದೆಲ್ಲ ವಿಧಿಗಳನ್ನು ಮಾಡಿದ್ದಾರೆ. ಆ ದಿನಗಳಲ್ಲಿ ಒಂದು ಹೊತ್ತು ಊಟ, ರಾತ್ರಿ ಫಲಾಹಾರ, ದಿನ ಪೂರ್ತಿ ಉಪವಾಸ, ಹಾಲು ಹಣ್ಣು ಸೇವಿಸುವುದು ಮುಂತಾದ ಸಂಪ್ರದಾಯಗಳು ಭಕ್ತಿಯನ್ನು ಹೆಚ್ಚು ಮಾಡುತ್ತವೆ ಮತ್ತು ಆರೋಗ್ಯ ದೃಷ್ಟಿಯಿಂದಲೇ ಇರುತ್ತವೆ ಎಂದು ಹೇಳುತ್ತಾರೆ.

ಏಕೆಂದರೆ, ದಿನ ನಿತ್ಯವೂ ಆಹಾರವನ್ನು ಸೇವಿಸುವಾಗ ಎಲ್ಲರೂ ಒಂದೇ ಸಮತೋಲನದ ಆಹಾರವನ್ನು ತೆಗೆದುಕೊಳ್ಳುತ್ತಾರೆಂದು ಹೇಳಲಿಕ್ಕಾಗುವುದಿಲ್ಲ. ತೆಗೆದುಕೊಳ್ಳುವ ಆಹಾರದ ಪ್ರಮಾಣವು ಹೆಚ್ಚು ಅಥವಾ ಕಡಿಮೆ ಆಗಬಹುದು. ಆ ಸಂದರ್ಭಗಳಲ್ಲಿ ಕರುಳು ಸೋತುಹೋಗುತ್ತದೆ. ಆಗಾಗ ಸ್ವಲ್ಪ ವಿಶ್ರಾಂತಿ ಕೊಟ್ಟರೆ ಅದು ಮತ್ತೆ ಚೆನ್ನಾಗಿ ಕೆಲಸ ಮಾಡುತ್ತದೆ. ಸ್ವಲ್ಪ ಉಪವಾಸ ಮಾಡುತ್ತಿದ್ದರೆ ಹೊಟ್ಟೆ ಕೆಡುವುದಿಲ್ಲವೆಂಬುದನ್ನು ವೈದ್ಯರೂ ಸಹ ಒಪ್ಪಬಹುದು. 15 ದಿನಗಳಿಗೊಮ್ಮೆ ನಿರಾಹಾರದಿಂದ ಇದ್ದರೆ ಕ್ಯಾನ್ಸರ್ ಮುಂತಾದ ರೋಗಕಾರಕ ಕ್ರಿಮಿಗಳು ನಾಶವಾಗಿ ರೋಗನಿರೋಧಕ ಶಕ್ತಿ ಕೂಡ ಹೆಚ್ಚಾಗುತ್ತದೆ ಎಂಬುದನ್ನು ಈಗ ವಿಜ್ಞಾನಿಗಳೂ ಸಹ ಒಪ್ಪಿಕೊಂಡಿದ್ದಾರೆ.

ಮಹಿಳೆಯರ ಮಾಸಿಕ ರಜ (ಪೀರಿಯಡ್ಸ್)

ಇದಕ್ಕೂ ಸಹ ನಮ್ಮ ಸಂಪ್ರದಾಯದಲ್ಲಿ ಮೂರು ದಿನ ದೂರವಿರಬೇಕು ಎಂಬ ನಿಯಮವಿದೆ. ದೂರವಿರಬೇಕೆಂಬ ಸಂಪ್ರದಾಯಕ್ಕೆ ಕಾರಣವೆಂದರೆ ಮೊದಲನೆಯದಾಗಿ ಅಂದಿನ ದಿನಗಳಲ್ಲಿ ದೇಹದಲ್ಲಿನ ಅಶುದ್ಧವಾದ ಮಲಿನ ರಕ್ತವನ್ನು ಆಚೆಗೆ ಹಾಕುತ್ತಿರುವುದರಿಂದ ಶುದ್ಧತೆಯ ದೃಷ್ಟಿಯಿಂದ ಮನೆಯಲ್ಲಿ ಮಾಸಿಕ ರಜೆಯಲ್ಲಿರುವ ಮಹಿಳೆಯರು ಇತರರಿಂದ ದೂರದಲ್ಲಿರಲಿ ಎಂದು ಕಟ್ಟುಪಾಡು ಮಾಡಿದ್ದಾರೆ. ಹೆಂಗಸರು ಕೋಮಲ ಶರೀರದವರಾಗಿದ್ದು ಆ ದಿನಗಳಲ್ಲಿ

ಅವರ ದೇಹಕ್ಕೆ ಆಯಾಸವಿರುವುದರಿಂದ ಮೂರು ದಿವಸಗಳ ನಂತರವೇ ಸ್ನಾನವನ್ನು ಮಾಡಬೇಕೆಂಬ ನಿಯಮವಿದೆ. ಈ ದಿನಗಳಲ್ಲಿ ಶರೀರದ ವ್ಯವಸ್ಥೆಯಲ್ಲಿ ವ್ಯತ್ಯಾಸಗಳು ಆಗುವುದರಿಂದ ವಿಜ್ಞಾನದ ಪ್ರಕಾರವೂ ವಿಶ್ರಾಂತಿ ಅಗತ್ಯವೆನ್ನಿಸುತ್ತದೆ. ಇದಕ್ಕೆ ನಮ್ಮ ಪುರಾಣದಲ್ಲಿ ಹೀಗೆ ಹೇಳಿದ್ದಾರೆ. ಇಂದ್ರನಿಗೆ ಬ್ರಹ್ಮಹತ್ಯಾದೋಷ ಬಂದಿರುತ್ತದೆ. ಅವನು ಒಂದು ವರ್ಷದ ತನಕ ತಾವರೆ ದಂಟಿನಲ್ಲಿ ಬಚ್ಚಿಟ್ಟುಕೊಂಡು ಆಮೇಲೆ ತಡೆಯಲಾರದೆ ಶಿವ, ವಿಷ್ಣು ಎಲ್ಲರನ್ನೂ ಕೇಳುತ್ತಾನೆ. ಆಗ ಬ್ರಹ್ಮನು ಅವನ ದೋಷವನ್ನು ನಾಲ್ಕು ಭಾಗ ಮಾಡಿ ಅವುಗಳಲ್ಲಿ ತಲಾ ಒಂದನ್ನು ಸ್ತ್ರೀಗೆ, ಅಗ್ನಿ ಪ್ರಥಮ ಜ್ವಾಲೆಗೆ, ನದಿಗಳ ಪ್ರಥಮ ಪ್ರವಾಹ ಮತ್ತು ಪರ್ವತ ವೃಕ್ಷಾದಿ ಪ್ರದೇಶಗಳಲ್ಲಿ ಕೊಡುತ್ತಾನೆ. ಶಾಸ್ತ್ರದ ಪ್ರಕಾರ ಈ ದಿನಗಳಲ್ಲಿ ಸ್ತ್ರೀಯರು ಬ್ರಾಹ್ಮಣನಿಗೆ ನೀರು ಕೂಡ ಕೊಡಬಾರದು ಮತ್ತು ಒಳಗೆ ಬಂದು ಅಡಿಗೆ ಪಾತ್ರೆಗಳನ್ನು ಮುಟ್ಟಬಾರದು ಎಂಬ ನಿಯಮಗಳನ್ನು ರೂಪಿಸಿ ಎಲ್ಲರಿಂದ ಆದಷ್ಟು ದೂರ ಇರಬೇಕೆಂದು ಹೇಳಿದ್ದಾರೆ. ಈ ದಿನಗಳಲ್ಲಿ ಮನಸ್ಸಿಗೂ, ದೇಹಕ್ಕೂ ವಿಶ್ರಾಂತಿ ಇರಬೇಕೆಂದು ವೈದ್ಯರಿಗೂ ಸಹ ಗೊತ್ತಿರುತ್ತದೆ. ಇತ್ತೀಚಿನ ದಿನಗಳಲ್ಲಿ ಇದು ಪಕೃತಿ ಸಹಜವೆಂದು ಹೇಳುತ್ತಾ ಈ ಪದ್ಧತಿಯನ್ನು ತಿರಸ್ಕರಿಸುತ್ತಿದ್ದಾರೆ.

ಅಶೌಚ (ಮೈಲಿಗೆ)

ಇದನ್ನು **ಸೂತಕ** ಎಂದು ಕರೆಯುತ್ತಾರೆ. ಮನೆಯಲ್ಲಿ ಯಾರಾದರೂ ಸತ್ತರೆ ಅವರ ದಾಯಾದಿಗಳು, ಸಂಬಂಧೀಕರು, ಸ್ನೇಹಿತರು ಹಾಗೂ ಹಿತೈಷಿಗಳು ಇರುವುದರಿಂದ ಅವರಿಗೆ ಬೇರೆ ಬೇರೆ ತರಹದ ಸೂತಕ ವಿಧಿಗಳಿರುತ್ತವೆ. ಮುಖ್ಯವಾಗಿ ತಂದೆ, ತಾಯಿ, ಅಣ್ಣತಮ್ಮಂದಿರುಗಳು ನಿಧನರಾದರೆ 10 ದಿನಗಳ ಸೂತಕವಿರುತ್ತದೆ. ಆ ದಿನಗಳಲ್ಲಿ ಮೈಲಿಗೆ ಇರುವುದರಿಂದ ದೇವರ ಪೂಜೆ ಮುಂತಾದ ಯಾವ ಶುಭ ಕೆಲಸಗಳನ್ನೂ ಮಾಡದೆ ಇರಬೇಕು. ಇವರು ರಕ್ತ ಸಂಬಂಧಿಗಳಾಗಿದ್ದು ಮನಸ್ಸಿಗೆ ದುಃಖವಿರುವುದರಿಂದ ಮತ್ತು ಆ ವೇಳೆಯಲ್ಲಿ ಅಪರಕರ್ಮಗಳನ್ನು ಮಾಡುವುದರಿಂದ ಶುಭಕಾರ್ಯಗಳನ್ನು ಆಚರಿಸಬಾರದು. ಆ ಸಂದರ್ಭಗಳಲ್ಲಿ ಮೂರು ದಿನಗಳ ನಂತರ ಮೈಲಿಗೆ ನೀರು ಹಾಕಿಕೊಳ್ಳುವುದು ಮುಂತಾದ ಹಲವಾರು ಪದ್ಧತಿಗಳಿವೆ (ಇದನ್ನು ಪುರೋಹಿತರಿಂದ ತಿಳಿದುಕೊಳ್ಳಬೇಕು).

ಮಹಿಳೆಯರ ಬಾಣಂತಿ ವಿಷಯ (ಪುರುಡು)

ಮಗುವಿಗೆ ಜನ್ಮ ನೀಡಿದ ಮಹಿಳೆಯು ಹೆರಿಗೆಯಾದ ಮೇಲೆ 10 ದಿನ ಪುರುಡಿನಲ್ಲಿರಬೇಕು. ಮಹಿಳೆ ಗರ್ಭಿಣಿಯಾದ ನಂತರ ಅವಳ ಗಂಡ ಶೌಚಕರ್ಮಕ್ಕೆ ಹೋಗದೆ ದೀಕ್ಷೆಯಲ್ಲಿದ್ದು ಹೆರಿಗೆ ಆದ 10ನೆಯ ದಿನ ತೆಗೆಸಿಕೊಳ್ಳುತ್ತಿದ್ದರು. ಹತ್ತನೆಯ ದಿನ ಹಬ್ಬದ ಅಡಿಗೆ ಮಾಡುತ್ತಾರೆ. 11ನೆಯ ದಿನ ದಾಯಾದಿಗಳಿಗೆ ಮತ್ತು ಮಗುವಿನ ಮನೆಯವರಿಗೆ ಪುರುಡು ಹೋಗಿ ಸ್ನಾನ ಮಾಡಿ ಮನೆಯನ್ನು ಸ್ವಚ್ಛ ಮಾಡುವುದು, ಶುದ್ಧ ಪುಣ್ಯಾಹ, ನಾಮಕರಣ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು.

ಕೆಲವು ನಿಯಮಗಳು

ಆಸ್ಪತ್ರೆಯಲ್ಲಿ ಬಾಣಂತಿ ಮತ್ತು ಮಗುವನ್ನು ನೋಡಲು ಬಂದವರು ಚಪ್ಪಲಿ ಹಾಕಿಕೊಂಡೇ ಮಂಚದ ಮೇಲೆ ಕುಳಿತುಕೊಳ್ಳುತ್ತಾರೆ. ಅವರು ಎಲ್ಲೆಲ್ಲಿಂದಲೋ ಬಂದಿರುವುದರಿಂದ ಇದು

ತಪ್ಪು. ಏಕೆಂದರೆ ವಿಜ್ಞಾನವು ಎಷ್ಟೇ ಮುಂದುವರೆದಿದ್ದರೂ ಷೂ ಅಥವಾ ಚಪ್ಪಲಿಯಲ್ಲಿ ರಸ್ತೆಯ ಕೊಳಕು ಇದ್ದೇ ಇರುತ್ತದೆ. ಬಾಣಂತಿ ಮತ್ತು ಮಗು ಇಬ್ಬರಿಗೂ ನಿಶ್ಶಕ್ತಿ ಇರುತ್ತದೆ. ಇದರಿಂದ ರೋಗಗಳು ಹರಡುವ ಸಾಧ್ಯತೆಗಳಿರುವುದರಿಂದ ನಮ್ಮ ಹಿರಿಯರು ಹತ್ತು ದಿನಗಳವರೆಗೂ ಮಗುವನ್ನು ಎತ್ತಿಕೊಳ್ಳಬೇಡ ಎನ್ನುತ್ತಿದ್ದರು. ಹೀಗಾಗಿ ದೂರವೇ ನಿಂತು ಮಗು ಬಾಣಂತಿಯನ್ನು ನೋಡಬೇಕು. ಆದ್ದರಿಂದ ಹನ್ನೊಂದನೆಯ ದಿನ ಮಗು ಮತ್ತು ಬಾಣಂತಿಗೆ ನೀರು ಹಾಕಿ ಶುದ್ಧ ಮಾಡಿದ ಮೇಲೆ ಮಗುವನ್ನು ಎತ್ತಿಕೊಳ್ಳುವುದು ಇಬ್ಬರಿಗೂ ಕ್ಷೇಮ. ಆಗಲೂ ಸಹ ಹೊರಗಿನಿಂದ ಬಂದವರು ಕೈಕಾಲುಗಳನ್ನು ತೊಳೆದುಕೊಂಡು ಬರಬೇಕು. ಆಗ ತಾಯಿ ಮತ್ತು ಮಗು ಇಬ್ಬರಿಗೂ ಯಾವ ಸೋಂಕುಗಳೂ ತಗುಲುವುದಿಲ್ಲ.

ಮುಂದಿನ ಮೂರು ತಿಂಗಳುಗಳ ಕಾಲ ತಾಯಿಗೆ ಹೆಚ್ಚಿನ ವಿಶ್ರಾಂತಿ ಅಗತ್ಯ. ಮಗುವಿನ ಬೆಳವಣಿಗೆಗೆ ತಾಯಿಯ ಹಾಲೇ ಅತ್ಯಂತ ಶ್ರೇಷ್ಠ. ಏಕೆಂದರೆ ಅದರಲ್ಲಿ ರೋಗ ನಿರೋಧಕ ಶಕ್ತಿ, ಆರೋಗ್ಯ ಕೆಡದಂತೆ ಇರುವುದು ಮುಂತಾದ ಗುಣಗಳಿರುತ್ತವೆ. ಮಗು ತಾಯಿಯ ಹಾಲನ್ನು ಕುಡಿಯುವಾಗ ತಾಯಿಯ ಮನಸ್ಸು ಮತ್ತು ದೇಹ ಅತ್ಯಂತ ಸಮಾಧಾನವಾಗಿರಬೇಕು. ಈ ದಿನಗಳಲ್ಲಿ ಆಕೆ ಪುಷ್ಟಿಕರವಾದ ಹಾಗೂ ಸಾತ್ವಿಕ ಆಹಾರವನ್ನು ತೆಗೆದುಕೊಳ್ಳಬೇಕು ಮತ್ತು ಆಕೆಗೆ ಹೆಚ್ಚಿನ ವಿಶ್ರಾಂತಿ ಕೂಡ ಅಗತ್ಯ. ಅವಳ ದೇಹಕ್ಕೆ ಬೇಕಾದ ಲೇಹ್ಯಗಳು, ಹಾಲು, ತುಪ್ಪ, ಸುಣ್ಣ, ವಿಳ್ಳೇದೆಲೆ, ತರಕಾರಿಗಳನ್ನು ತಿನ್ನಬೇಕು. ಆಲೂಗೆಡ್ಡೆ, ಬದನೇಕಾಯಿ, ಕಾಳುಗಳು ಇಂತಹ ಪದಾರ್ಥಗಳನ್ನು ತಿನ್ನಬಾರದು. ಒಟ್ಟಿನಲ್ಲಿ ಮಗು ಕುಡಿಯುವ ತಾಯಿ ಹಾಲು ಪುಷ್ಟಿಕರವಾಗಿದ್ದು ಸುಲಭವಾಗಿ ಜೀರ್ಣವಾಗುವಂತಿರಬೇಕು.

ಈ ರೀತಿಯಾಗಿ ಕನಿಷ್ಠ ಮೂರು ತಿಂಗಳುಗಳಾದರೂ ಬಾಣಂತಿಯರು ಕೋಣೆಯಲ್ಲಿದ್ದು ದೇಹವನ್ನು ಬೆಚ್ಚಗೆ ಇಟ್ಟುಕೊಂಡಿರಬೇಕು. ಮಗುವಿಗೂ ಸಹ ಸ್ವಚ್ಛವಾದ ಹಳೆಯ ಬಟ್ಟೆಗಳನ್ನು ಉಪಯೋಗಿಸಬೇಕು (ಮನೆಯಲ್ಲಿರುವ ಹಳೆ ಬೆಡ್‌ಶೀಟ್, ಪಂಚೆಗಳು, ಸೀರೆ ಮುಂತಾದುವುಗಳು). ಇವುಗಳಲ್ಲಿ ಮಕ್ಕಳ ದೇಹ ಬೆಚ್ಚಗೆ ಇರುತ್ತದೆಂದು ಹಿಂದಿನವರು ಹೇಳುತ್ತಾರೆ). ಹೀಗೆ ಮನೆಯ ಒಳಗಡೆಯೇ ಇರುವುದರಿಂದ ತಾಯಿ ಮಕ್ಕಳ ಆರೋಗ್ಯ ಉತ್ತಮವಾಗಿರುತ್ತದೆ. ಕೈ ಬಳೆ, ಕಾಲಿಗೆ ಗೆಜ್ಜೆ, ಋಳಿ, ಕಾಲುಬಳೆ, ಸೊಂಟಕ್ಕೆ ಉಡಿದಾರ ಮುಂತಾದ ಕೆಲವು ಆಭರಣಗಳನ್ನು ನಮ್ಮ ಹಿಂದಿನವರು ಮಕ್ಕಳಿಗೆ ಹಾಕುತ್ತಿದ್ದರು. ಈಗಿನ ಪರಿಸರದಲ್ಲಿ ಇವೆಲ್ಲ ಕಾಣುತ್ತಿಲ್ಲ. ಇಂತಹ ಆಭರಣಗಳಿಂದ ಕಾಲಿಗೆ ಶಕ್ತಿ ಹಾಗೂ ನರಗಳಿಗೆ ಬಿಗಿ ಬರುತ್ತದೆ. ಮಗು ಕಾಲು ಕೈಗಳನ್ನು ಆಡಿಸುವಾಗ ಸ್ವಲ್ಪ ಭಾರ ಬಿದ್ದರೆ ಕಾಲನ್ನು ಊರಲು ಸುಲಭ, ನರಗಳಿಗೆ ಶಕ್ತಿ ಹೆಚ್ಚಲು ಸಹಾಯವಾಗುತ್ತದೆ. ಗೆಜ್ಜೆಯು ಸೊಂಟದ ಆಕಾರವನ್ನು ಒಂದೇ ಸಮನಾಗಿರುವಂತೆ ಮಾಡುತ್ತದೆ. ಇದು ಅಲಂಕಾರ ಕೂಡ. ಏಕೆಂದರೆ ಯಶೋದೆಯು ಶ್ರೀಕೃಷ್ಣನಿಗೆ ತಲೆಯಿಂದ ಕಾಲುಗಳವರೆಗೂ ಅಲಂಕಾರ ಮಾಡಿ ಸಂತೋಷ ಪಡುತ್ತಿದ್ದಳೆಂದು ನಾವು ಭಾಗವತದಲ್ಲಿ ಓದಿದ್ದೇವೆ. ಹೀಗೆ ಅಲಂಕಾರ ಮಾಡುವುದು ಕೂಡ ಮಕ್ಕಳಿಗೆ ಆರೋಗ್ಯ ಮತ್ತು ಶ್ರೇಯಸ್ಸನ್ನು ಕೊಡುವ ಸಂಪ್ರದಾಯ. ಆಕ್ಯೂಪ್ರೆಶರ್‌ಗೆ ಕೂಡ ಇದು ಹೊಂದುತ್ತದೆ.

ಇದುವರೆಗೆ ಬರೆದ ಸಂಪ್ರದಾಯಗಳು ವೈಜ್ಞಾನಿಕವಾಗಿಯೂ ಸಹ ದೇಹ ಮತ್ತು ಮನಸ್ಸಿನ ಆರೋಗ್ಯಕ್ಕೆ ಅವಶ್ಯಕ.

ಕೆಲವು ನಡವಳಿಕೆಗಳು

ಪಾಪ-ಪುಣ್ಯದ ಭೀತಿ, ಕೆಲಸದಲ್ಲಿ ಶ್ರದ್ಧೆ, ಹಿರಿಯರನ್ನು ಕಂಡರೆ ಮರ್ಯಾದೆ, ತಂದೆ ತಾಯಿಗಳಲ್ಲಿ ಪ್ರೀತಿ ಗೌರವಾದರಗಳನ್ನು ತೋರಿಸುವುದು, ತಮಗಿಂತ ಚಿಕ್ಕ ಮಕ್ಕಳನ್ನು ಪ್ರೀತಿಯಿಂದ ಮಾತನಾಡಿಸುವುದು, ಅಕ್ಕ, ತಂಗಿ, ಅಣ್ಣ, ತಮ್ಮಂದಿರ ಜೊತೆಯಲ್ಲಿ ಸೌಹಾರ್ದದಿಂದ ವರ್ತಿಸುವುದು, ಕಷ್ಟದಲ್ಲಿರುವವರಿಗೆ, ವಯಸ್ಸಾದವರಿಗೆ ಮತ್ತು ಕೈಲಾಗದವರಿಗೆ ಸಹಾಯ ಮಾಡುವುದು ಮುಂತಾದವುಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು.

ಆಧ್ಯಾತ್ಮ ವಿಚಾರಗಳು

ಇದರಲ್ಲಿ ಪೂಜೆ, ಜಪ, ತಪ, ಯಜ್ಞ, ನೇಮ, ನಿಷ್ಠೆ, ವ್ರತ ಮುಂತಾದವುಗಳಿವೆ.

ಪೂಜೆ

ವೇದ, ಮಂತ್ರಗಳನ್ನು ಹೇಳಿಕೊಂಡು ಪೂಜೆಯನ್ನು ಮಾಡಬೇಕು. ಮುಖ್ಯವಾಗಿ ಮನೆಯಲ್ಲಿ ಹಿರಿಯರು ಯಾವ ದೇವರನ್ನು ನಂಬಿ ಹಿಂದಿನಿಂದ ಪೂಜಿಸಿರುತ್ತಾರೋ ಆ ದೇವರಿಗೆ ಹಾಗೂ ಅದಕ್ಕೆ ಸಂಬಂಧಪಟ್ಟ ಪಂಚಾಯತನ ಪೂಜೆಯನ್ನು ಎಲ್ಲರೂ ಮಾಡುತ್ತಾರೆ. ಇದರಲ್ಲಿ ಶಿವ ಪಂಚಾಯತನ, ವಿಷ್ಣು ಪಂಚಾಯತನ, ಗಣಪತಿ ಪಂಚಾಯತನವೆಂದು ಇರುತ್ತದೆ. ಪೂಜೆ ಮಾಡಲು ಗಣಪತಿ, ಅಂಬಿಕ, ವಿಷ್ಣು, ಸೂರ್ಯ ಸಾಲಿಗ್ರಾಮ ಪ್ರತಿಮೆಗಳು ಇರುತ್ತವೆ. ಶಿವ ಪಂಚಾಯತನವಾದರೆ ಶಿವನನ್ನು, ವಿಷ್ಣು ಪಂಚಾಯತನವಾದರೆ ವಿಷ್ಣುವನ್ನು ಮಧ್ಯದಲ್ಲಿ ಇಟ್ಟು ಇನ್ನು ಮಿಕ್ಕ ನಾಲ್ಕು ದೇವರುಗಳ ವಿಗ್ರಹಗಳನ್ನು ಬೇರೆ ಬೇರೆ ದಿಕ್ಕಿನಲ್ಲಿ ಶಾಸ್ತ್ರ ರೀತಿಯಲ್ಲಿ ಇಟ್ಟು ಪೂಜಿಸುತ್ತಾರೆ. ಬೆಳಿಗ್ಗೆ ಸ್ನಾನ ಮುಂತಾದ ನಿತ್ಯ ಕರ್ಮಗಳನ್ನು ಮುಗಿಸಿ ಶುದ್ಧವಾದ ಮಡಿ ಬಟ್ಟೆ ಉಟ್ಟುಕೊಂಡು ಹಣೆಯಲ್ಲಿ ಅವರವರ ಮನೆಯ ಪದ್ಧತಿಯ ಲಾಂಛನವನ್ನು ಧರಿಸಿಕೊಂಡು ಮನಸ್ಸನ್ನು ನಿರ್ಮಲವಾಗಿಟ್ಟುಕೊಂಡು ದೇವರ ಮನೆಯಲ್ಲಿ ದೇವರನ್ನು ಪೂಜಿಸುತ್ತಾರೆ. ಇದು ದೇವರ ಪ್ರಾರ್ಥನೆಯಾದ್ದರಿಂದ ಎಲ್ಲಾ ಮತದವರು ಅವರ ಅವರ ಪದ್ಧತಿಯಲ್ಲಿ ಪೂಜೆ ಮಾಡುತ್ತಾರೆ. ಹೀಗೆ ಪೂಜೆ ಮಾಡುವುದನ್ನು ನಾವೆಲ್ಲರೂ ರೂಢಿಸಿಕೊಳ್ಳಬೇಕು. ಇದು ಧರ್ಮ. ಇಲ್ಲದಿದ್ದರೆ ಕಷ್ಟಪರಂಪರೆ ಬರುತ್ತದೆಂದು ಹಿಂದಿನವರು ಹೇಳುತ್ತಿದ್ದರು. ಪೂಜಾ ವಿಧಾನವನ್ನು ಪುರೋಹಿತರಿಂದ ತಿಳಿದುಕೊಳ್ಳಬೇಕು.

ಜಪ

ಪೂಜೆಗೆ ಸಮಯವಿಲ್ಲದಿದ್ದರೆ ಇದನ್ನಾದರೂ ಮಾಡಬಹುದು. ಶುದ್ಧವಾದ ಆಸನದಲ್ಲಿ (ಮಣೆ, ಚಾಪೆ ಅಥವಾ ಯಾವುದಾದರೂ ಸುಖಾಸನ) ಕುಳಿತು ಏಕಾಗ್ರತೆಯಿಂದ ಗುರುಗಳ, ಅಥವಾ ಹಿರಿಯರ ಮಾರ್ಗದರ್ಶನದಲ್ಲಿ ಉಪದೇಶ ಪಡೆದ (ಗಾಯತ್ರಿ ಮುಂತಾದ) ಮಂತ್ರವನ್ನು ರುದ್ರಾಕ್ಷಿ, ಸ್ಫಟಿಕ, ಹವಳ, ತುಳಸಿಮಣಿ ಮುಂತಾದವುಗಳ ಜಪ ಮಾಲೆಯನ್ನಿಟ್ಟುಕೊಂಡು ತಮಗೆ ಸಾಧ್ಯವಾದಷ್ಟು ಜಪವನ್ನು ಮಾಡಬಹುದು. ಸಾಧಾರಣವಾಗಿ ಇಂತಹ ಮಾಲೆಯಲ್ಲಿ ಕನಿಷ್ಠ 108 ಮಣಿಗಳಿರುತ್ತವೆ. ಅದನ್ನು ಒಂದೊಂದೇ ಮಂತ್ರದಿಂದ ಎಣಿಸುವುದೇ ಜಪ.

ತಪ

ಇದೂ ಸಹ ಜಪವೇ ಆದರೂ ದೀರ್ಘಕಾಲ ಜಪದಲ್ಲೇ ಮಗ್ನರಾಗಿರುವುದಕ್ಕೇ ತಪ ಅಥವಾ ತಪಸ್ಸು ಎನ್ನುತ್ತಾರೆ. ಹಿಂದೆ ಈ ತರಹ ತಪಸ್ಸುಗಳನ್ನು ಮಾಡಿ ದೇವಾಧಿದೇವತೆಗಳನ್ನು ಪ್ರತ್ಯಕ್ಷ ಮಾಡಿಕೊಂಡ ಕಥೆಗಳು ನಮ್ಮ ಪುರಾಣಗಳಲ್ಲಿ ಬೇಕಾದಷ್ಟಿವೆ. ಧೃವ, ಮಾರ್ಕಂಡೇಯಾದಿಗಳಿಂದ ಹಿಡಿದು ಅನೇಕಾನೇಕ ಮಹಾಮಹಿಮರು ತಪಸ್ಸು ಮಾಡಿ ಪುಣ್ಯ ಗಳಿಸಿದ್ದಾರೆ. ಪೂಜೆ ಜಪ, ಯಜ್ಞ ವ್ರತ ಇವುಗಳನ್ನು ಮಾಡಲು ಕಾರ್ಯವಿಧಿಗಳಿದ್ದು ಅವನ್ನು ನೇಮ, ನಿಷ್ಠೆ ಎನ್ನುತ್ತಾರೆ.

ವ್ರತ

ನೇಮ ನಿಷ್ಠೆಗಳಿಂದ ಪೂಜಾಸಾಮಗ್ರಿ ಮುಂತಾದ ಪರಿಕರಗಳನ್ನು ಹೊಂದಿಸಿಕೊಂಡು ಪೂಜೆ ಮಾಡುವುದೇ ವ್ರತ. ಶ್ರೀ ಸತ್ಯನಾರಾಯಣ ವ್ರತ, ಶ್ರೀ ಗಣಪತಿ ವ್ರತ, ಶ್ರೀ ಅನಂತಪದ್ಮನಾಭಸ್ವಾಮಿ ವ್ರತ, ಗೌರಿ ವ್ರತ ಹೀಗೆ ಬೇಕಾದಷ್ಟು ವ್ರತಗಳು ನಮ್ಮಲ್ಲಿವೆ. ಪೂಜೆ ಆದ ನಂತರ ಬ್ರಾಹ್ಮಣ ಭೋಜನ, ದಾನ, ಧರ್ಮ ನಮಸ್ಕಾರ ಮುಂತಾದವುಗಳು ಇರುತ್ತವೆ. ಇವುಗಳನ್ನು ಶಾಸ್ತ್ರ, ಸಂಪ್ರದಾಯಗಳಂತೆ ಸಿದ್ಧ ಮಾಡಿಕೊಂಡು ಪುರೋಹಿತರ ಸಮ್ಮುಖದಲ್ಲಿ ನಡೆಸಬೇಕು.

ಯಜ್ಞ

ಯಾವ ದೇವತೆಗಳಿಗೆ ಹೋಮ ಮಾಡಬೇಕೆಂದು ಸಂಕಲ್ಪ ಮಾಡಿಕೊಂಡಿರುತ್ತೇವೆಯೋ ಆ ದೇವತೆಗಳನ್ನು ಕುರಿತು ಸರಿಯಾದ ಮಂತ್ರಗಳಿಂದ ಜಪವನ್ನು ಮಾಡಿ ಆಮೇಲೆ ಆ ದೇವತೆಗಳಿಗೆ ಮೂಲಮಂತ್ರಗಳಿಂದ ಹೋಮ ಮಾಡುವುದೇ ಯಜ್ಞ.

ಯಜ್ಞಮಾಡುವ ಬಗೆ

ಇಟ್ಟಿಗೆಗಳಿಂದ ಚೌಕಾಕಾರದಲ್ಲಿ ಕುಂಡಗಳನ್ನು ಮಾಡಿ ಅದರಲ್ಲಿ ಅಗ್ನಿಯನ್ನು ಸ್ಥಾಪಿಸಿ ಆಯಾ ದೇವತೆಗಳ ಕಳಶಗಳಿಗೆ ಪೂಜೆ ಜಪಗಳನ್ನು ಮಾಡಿ ಆಯಾ ದೇವತೆಗಳ ಮೂಲ ಮಂತ್ರದಿಂದ 4 ದಿಕ್ಕುಗಳಿಗೂ 4 ಜನ ಋತ್ವಿಜರು ಕುಳಿತು ಪುರೋಹಿತರ ಸಮ್ಮುಖದಲ್ಲಿ ಅವರು ಹೇಳಿದಂತೆ ತುಪ್ಪ, ಚರು ಮುಂತಾದ ಹವಿಸ್ಸನ್ನು ಅಗ್ನಿಗೆ ಅರ್ಪಿಸಿದ ಮೇಲೆ ಯಜ್ಞವು ಪೂರ್ಣವಾಗುತ್ತದೆ. ಇದು ಪೂರ್ಣವಾದ ನಂತರ ದಾನ, ಭೋಜನ ಕೂಡ ಇರುತ್ತದೆ. ಇವುಗಳನ್ನು ಶಾಸ್ತ್ರ ಸಂಪ್ರದಾಯ ರೀತಿಯಲ್ಲಿಯೇ ಮಾಡುತ್ತಾರೆ.

ವಿವಾಹದ ಶಾಸ್ತ್ರ, ಸಂಪ್ರದಾಯ

ವಿವಾಹವೆಂದರೆ ಜೀವನದಲ್ಲಿ ವಿಶೇಷವಾದ ಜವಾಬ್ದಾರಿಯನ್ನು ಹೊರುವುದು, ಪತ್ನಿಯ ಜೊತೆ ಸಂಸಾರ ಮಾಡುವುದು, ಧಾರ್ಮಿಕ ಕಾರ್ಯಗಳಿಗೆ ಮತ್ತು ಸಂತಾನೋತ್ಪತ್ತಿಗಾಗಿ ಎಂಬ ಅರ್ಥ ಬರುತ್ತದೆ.

ಇದರಲ್ಲಿ 8 ವಿಧಗಳಿವೆ – 1. ಬ್ರಾಹ್ಮ, 2 ದೈವ, 3 ಆರ್ಷೇಯ 4. ಪ್ರಜಾಪತ್ಯ, 5. ಅಸುರ, 6. ಗಾಂಧರ್ವ, 7. ರಾಕ್ಷಸ, 8. ಪೈಶಾಚಿಕ. ನಮ್ಮಲ್ಲಿ ಸಾಮಾನ್ಯವಾಗಿ ಬ್ರಾಹ್ಮ ವಿವಾಹ ರೂಢಿಯಲ್ಲಿದೆ.

ವಿವಾಹ ವಿಚಾರ

ಮದುವೆಯು ಮನುಷ್ಯನಿಗೆ ಒಂದು ಮಹತ್ವದ ಘಟ್ಟ. ಅದು ಸಾಮಾಜಿಕವೂ ಹೌದು, ವೈಯಕ್ತಿಕವೂ ಹೌದು. ಕಾಡುಮೃಗಗಳಂತಿದ್ದ ಮಾನವರು ಮದುವೆಯಾಗಿ ಗೃಹಸ್ಥರು, ಗೃಹಿಣಿಯರು ಆದ ಪ್ರಕ್ರಿಯೆಗಳು ನಾಗರಿಕ ಸಂಸ್ಕೃತಿಗಳ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದು ಸಹಜವೇ ಆಗಿದೆ.

ವ್ಯಕ್ತಿಯ ಜೀವನದಲ್ಲಂತೂ ಮದುವೆಯೊಂದು ಮುಖ್ಯವಾದ ಘಟನೆ. ಭಾರತದಲ್ಲಿ ವಿವಾಹವು ಒಂದು ಪವಿತ್ರ ವಿಧಿ. ಸಪ್ತಪದಿಯಲ್ಲಿ ಹೇಳುವ ಮಂತ್ರಗಳು ಅರ್ಥವತ್ತಾಗಿ ಹಾಗೂ ಸುಖ ಸಂತೋಷಗಳಿಂದ ಬಾಳುವ ರೀತಿಯನ್ನು ತೋರಿಸುತ್ತವೆ ಮತ್ತು ಪ್ರೀತಿ ಸಾಮರಸ್ಯ, ಸಹಬಾಳ್ವೆಗಳ ಸಂದೇಶವನ್ನು ಸಾರುತ್ತವೆ. ಸಪ್ತಪದಿ ಮಂತ್ರಗಳು ಹೀಗಿವೆ.

1. ವಧುವೇ ಅನ್ನಕ್ಕಾಗಿ ಒಂದು ಹೆಜ್ಜೆ ಇಡು. ಅದರಲ್ಲಿ ನನ್ನನ್ನು ಅನುಸರಿಸುವವಳಾಗು
2. ಬಲದ ವೃದ್ಧಿಗಾಗಿ ಎರಡನೆಯ ಹೆಜ್ಜೆಯನ್ನಿಡು
3. ಧನದ ಸಮೃದ್ಧಿಗಾಗಿ ಮೂರನೆಯ ಹೆಜ್ಜೆಯನ್ನಿಡು
4. ಮಾಯೆಯನ್ನು ಮೆಟ್ಟಿ ನಡೆಯಲು ನಾಲ್ಕನೆಯ ಹೆಜ್ಜೆಯನ್ನಿಡು
5. ಸಂತಾನ ಲಾಭಕ್ಕಾಗಿ ಐದನೆಯ ಹೆಜ್ಜೆಯನ್ನಿಡು
6. ಒಳಿತುಂಟು ಮಾಡಲು ಆರನೆಯ ಹೆಜ್ಜೆಯನ್ನಿಡು
7. ಪರಸ್ಪರ ಅರಿತು ನಡೆಯಲು ಏಳನೆಯ ಹೆಜ್ಜೆಯನ್ನಿಡು (ಇದು ಕೊನೆಯದಾದರೂ ಅತಿ ಮುಖ್ಯವಾದುದು)

ವಿವಾಹದ ವಿಧಿ ವಿಧಾನಗಳು

ಲಗ್ನಪತ್ರಿಕೆ

ಮೊದಲನೆಯದಾಗಿ ಗಂಡು ಹೆಣ್ಣು ವಿವಾಹಕ್ಕೆ ಪರಸ್ಪರ ಒಪ್ಪಿಕೊಂಡ ಮೇಲೆ ಮೇಲೆ ವರನ ಮನೆಯವರು ಮತ್ತು ವಧುವಿನ ಮನೆಯವರು (ವಧು-ವರ ಸಮ್ಮುಖದಲ್ಲಿ) ನಿಶ್ಚಿತಾರ್ಥ ಅಥವಾ ಲಗ್ನಪತ್ರಿಕೆಯನ್ನು ಮಾಡುತ್ತಾರೆ. ಅಂದರೆ ಒಳ್ಳೆಯ ಮುಹೂರ್ತದಲ್ಲಿ ಲಗ್ನದಿನಾಂಕ ಮತ್ತು ಲಗ್ನಕಾಲವನ್ನು ನಿಶ್ಚೈಸುವುದು ಎಂದು ಇದರ ಅರ್ಥ. ಪುರೋಹಿತರು ವಧು-ವರರ ಜಾತಕ ನೋಡಿ ಇವುಗಳನ್ನು ನಿಶ್ಚೈಸಿ ಬರೆಯುವುದೇ ಲಗ್ನ ಪತ್ರಿಕೆ ಸಮಾರಂಭ.

ಇದರಲ್ಲಿ ಎರಡು ವಿಧಾನಗಳಿವೆ: 1. ಸರಳ 2. ವೈಭವ (ಈಗಿನ ಕಾಲದಲ್ಲಿ ರೂಢಿಸಿಕೊಂಡಿರುವುದು)

1. **ಸರಳ :** ಒಂದು ಸ್ಥಾನದಲ್ಲಿ (ವಧು ಅಥವಾ ವರನ ಮನೆ) ವಧು ಮತ್ತು ವರ ಇಬ್ಬರ ಕಡೆಯಲ್ಲಿನ ದೊಡ್ಡವರು ಸೇರಿ ಪುರೋಹಿತರ ಸಮ್ಮುಖದಲ್ಲಿ ಗಣಪತಿಯನ್ನು ಇಟ್ಟು ತುಪ್ಪದ ದೀಪ ಹಚ್ಚಿ ಅದಕ್ಕೆ ಪೂಜೆ ಮಾಡಿ ಲಗ್ನಪತ್ರಿಕೆಯನ್ನು ಬರೆಯುತ್ತಿದ್ದರು ಮತ್ತು ಸಿಹಿ ಊಟ ಏರ್ಪಡಿಸಿ ಕೊಬ್ಬರಿ ಸಕ್ಕರೆ ಹಂಚುತ್ತಿದ್ದರು. ವರಪೂಜೆಯಲ್ಲಿ ಈ ಪತ್ರಿಕೆಯನ್ನು ಬೀಗರುಗಳು ಪರಸ್ಪರ ಬದಲಾಯಿಸಿಕೊಳ್ಳುತ್ತಿದ್ದರು.

2. ವೈಭವ : ಎರಡು ಕಡೆಯ ನೆಂಟರೆಲ್ಲರನ್ನೂ ಕರೆದು ಎಲ್ಲರೂ ಒಂದು ಛತ್ರದಲ್ಲಿ ಸೇರಿ ಲಗ್ನಪತ್ರಿಕೆ ವಿಧಿ ವಿಧಾನಗಳನ್ನು ನೆರವೇರಿಸಿ ವರನಿಗೂ ವಧುವಿಗೂ ಉಡುಗೊರೆಗಳನ್ನು ಕೊಡುತ್ತಾರೆ.

ಲಗ್ನಪತ್ರಿಕೆ ಆದ ನಂತರ ಮನೆಗಳಿಗೆ ಸುಣ್ಣ ಬಣ್ಣ ಮಾಡಿಸುತ್ತಾರೆ ಮತ್ತು ಒಳ್ಳೆಯ ದಿನ ನೋಡಿ ಅರಿಸಿನ, ಕುಂಕುಮ ಮುಂತಾದ ಮಂಗಳದ್ರವ್ಯಗಳನ್ನು ತಂದು ಅನಂತರ ಲಗ್ನಪತ್ರಿಕೆ ಮುದ್ರಣ, ಹಂಚುವುದು, ವಿವಾಹಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳುವುದು ಮುಂತಾದ ಶುಭ ಕಾರ್ಯಗಳನ್ನು ಆರಂಭ ಮಾಡುತ್ತಾರೆ. ಲಗ್ನಪತ್ರಿಕೆಯನ್ನು ಒಂದು ಲಕೋಟೆಯಲ್ಲಿ ಇಟ್ಟು ಸ್ವಲ್ಪ ತುಪ್ಪ, ಕುಂಕುಮ ಕಲೆಸಿ ಲಕೋಟೆಯ ನಾಲ್ಕು ಮೂಲೆ ತುದಿಗಳಿಗೆ ಮಾತ್ರ ಹಚ್ಚುವುದು ಶುಭದ ಸಂಕೇತ. ಒಂದು ಲಗ್ನಪತ್ರಿಕೆಯನ್ನು ದೇವರ ಮುಂದೆ ಇಟ್ಟು ಪೂಜೆ ಮಾಡಿ ಮನೆದೇವರಿಗೆ ಅರ್ಪಿಸಿ ಆಮೇಲೆ ಎಲ್ಲರಿಗೂ ಹಂಚಬೇಕು. ಮೊದಲು ಯಾರಾದರೂ ಹಿರಿಯರಿಗೆ ಕೊಟ್ಟು ನಮಸ್ಕಾರ ಮಾಡಿ ಆಶೀರ್ವಾದ ಪಡೆದುಕೊಳ್ಳಬೇಕು.

ಸೂಚನೆ : ಲಗ್ನಪತ್ರಿಕೆ ಆದ ನಂತರ ಆಶೌಚ (ಯಾರಾದರೂ ಕಾಲವಾದರೆ) ಬಂದರೆ ಆ ಜಾಗಕ್ಕೆ ಹೋಗುವುದು ನಿಷಿದ್ಧ. ಹಿರಿಯರ ಶ್ರಾದ್ಧವಿದ್ದರೆ ಆ ಕಾರ್ಯ ಆದ ನಂತರವೇ ಲಗ್ನಪತ್ರಿಕೆಯನ್ನು ಮಾಡಬೇಕು.

ಲಗ್ನಪತ್ರಿಕೆಯ ನಂತರದ ಕಾರ್ಯಗಳು

ಮೊದಲು ಲಗ್ನಪತ್ರಿಕೆಯನ್ನು ಕೊಟ್ಟು ಆಮಂತ್ರಿಸುವವರನ್ನು ಆಮಂತ್ರಿಸಿ ದೂರಿನ ಊರಿನವರಿಗೆ ಅಂಚೆ ಮೂಲಕ ಕಳುಹಿಸಬೇಕು. ಈ ಸಮಯದಲ್ಲೇ ವಧು ವರರಿಗೆ ಕೊಡಬೇಕಾದ ಒಡವೆ ವಸ್ತುಗಳನ್ನು ತಂದುಕೊಂಡು ಮದುವೆಯ ಧಾರ್ಮಿಕ ಮತ್ತು ಲೌಕಿಕ ಕಾರ್ಯಕ್ರಮಗಳಿಗೆ ಬೇಕಾದ ಪದಾರ್ಥಗಳ ಸಿದ್ಧತೆ ಮಾಡಿಕೊಂಡಿದ್ದರೆ ವಿವಾಹದ ದಿನದಲ್ಲಿನ ಒತ್ತಡ ಕಡಮೆಯಾಗುತ್ತದೆ. ಹೊರಪ್ರದೇಶದಿಂದ/ಹೊರದೇಶದಿಂದ ಬಂದು ಮದುವೆ ಮಾಡುವವರಾದರೆ ಹತ್ತಿರದ ನೆಂಟರ ಸಹಾಯ ಪಡೆದು ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಒಟ್ಟಿನಲ್ಲಿ ವಿವಾಹ ಕಾಲದಲ್ಲಿ ಗಡಿಬಿಡಿ ಇಲ್ಲದೆ ಎಲ್ಲರೂ ಸಂತೋಷದಿಂದ ಇರುವುದು ಮುಖ್ಯ.

ಚಪ್ಪರ ಪೂಜೆ ಮತ್ತು ದೇವರ ಸಮಾರಾಧನೆ

ಸಾಮಾನ್ಯವಾಗಿ ಈ ಶಾಸ್ತ್ರಗಳನ್ನು ಮದುವೆಯ ಹಿಂದಿನ ದಿನ ಮಾಡುತ್ತಾರೆ. ಮದುವೆಗೆ ಮೂರು ಅಥವಾ ನಾಲ್ಕು ದಿನಗಳಷ್ಟು ಮುಂಚಿತವಾಗಿಯೂ ಮಾಡುವುದುಂಟು. ಒಳ್ಳೆಯ ದಿನ ನೋಡಿ ಇವುಗಳನ್ನು ಮಾಡಬೇಕು. ಮನೆಯ ಮುಂದೆ ನಾಲ್ಕು ಕಂಬಗಳನ್ನು ನಾಲ್ಕು ದಿಕ್ಕಿಗೂ ನೆಡಬೇಕು. ಮೇಲೆ ಗಳುಗಳನ್ನು ಇಡುವುದು ಸಂಪ್ರದಾಯ. ನಂತರ ಗಳುಗಳನ್ನು ಹಗ್ಗದಿಂದ ಕಟ್ಟಿ ತೆಂಗಿನ ಗರಿಗಳನ್ನು ಅದರ ಮೇಲೆ ಹರಡುವಾಗ ಒಂದು ಗರಿಯ ಗಂಟು ಪೂರ್ವಕ್ಕೂ ಇನ್ನೊಂದು ಗರಿಯ ಗಂಟು ಉತ್ತರಕ್ಕೂ ಇರುವಂತೆ ಹರಡಿ ಮಿಕ್ಕ ಗರಿಗಳನ್ನು ಚಪ್ಪರದ ಮೇಲೆ ಹರಡಬೇಕು. ಕಂಬಗಳನ್ನು ಬಾಳೆ ಕಂಬ ಮತ್ತು ಮಾವಿನ ಸೊಪ್ಪಿನಿಂದ ಅಲಂಕರಿಸಿ ಹೂವನ್ನು ಸುತ್ತಲೂ ಕಟ್ಟಿ, ಚಪ್ಪರವನ್ನು ಶಕ್ತ್ಯಾನುಸಾರ ಅಲಂಕರಿಸಿ ಮನೆಯ ಬಾಗಿಲಿಗೆ ಮಾವಿನ ಎಲೆಯ ತೋರಣವನ್ನು ಕಟ್ಟಿ ಹೂವಿನಿಂದ ಅಲಂಕರಿಸಬೇಕು.

ಅಣಿತಟ್ಟೆ

ಇದು ಮುಖ್ಯವಾದುದು. ಮದುವೆ ಮುಗಿಯುವವರೆಗೆ ಇದು ಜೊತೆಯಲ್ಲೇ ಇರುತ್ತದೆ. ಒಂದು ದೊಡ್ಡ ಬೆಳ್ಳಿ ತಟ್ಟೆ ತೆಗೆದುಕೊಂಡು ಐದು ಬೆಳ್ಳಿ ಬಟ್ಟಲುಗಳನ್ನು ಅದರೊಳಗೆ ಸುತ್ತಲೂ ಇಡಬೇಕು. ಅವುಗಳಲ್ಲಿ ಅರಿಶಿನ, ಕುಂಕುಮ, ಮಂತ್ರಾಕ್ಷತೆ, ಚಂದ್ರ, ಅಡಿಕೆ ಇವುಗಳನ್ನಿಟ್ಟು ಒಂದು ಗಂಧದ ಬಟ್ಟಲನ್ನು ಇಡಬೇಕು. ಬಟ್ಟಲುಗಳ ಪಕ್ಕದಲ್ಲಿ ಸ್ವಲ್ಪ ವಿಳ್ಳೇದೆಲೆ ಹೂವನ್ನು ಇಡಬೇಕು. ಇದೇ ಅಣಿ ತಟ್ಟೆ. ಅಣಿತಟ್ಟೆ ಜೊತೆಯಲ್ಲಿ ಎರಡು ದೀಪಗಳನ್ನು ಸಿದ್ಧಪಡಿಸಿಕೊಳ್ಳಬೇಕು.

ಕಳಸ ಕನ್ನಡಿ


ಸ್ವಲ್ಪ ಚಿಕ್ಕದಾದ ಒಂದು ತಟ್ಟೆಯನ್ನು ತೆಗೆದುಕೊಂಡು ಅದರಲ್ಲಿ ಮಂತ್ರಾಕ್ಷತೆಯನ್ನು (ಅಕ್ಕಿಕಾಳಿಗೆ ಸ್ವಲ್ಪ ತುಪ್ಪ ಕುಂಕುಮ ಬೆರೆಸಿದರೆ ಕೆಂಪು ಮಂತ್ರಾಕ್ಷತೆ ಆಗುತ್ತದೆ) ಹಾಕಿ ಸುತ್ತಲೂ ಹರಡಿ ಮಧ್ಯದಲ್ಲಿ ಸ್ವಲ್ಪ ಚಿಕ್ಕದಾದ ಚೊಂಬು (ಥಾಲಿ) ಇಟ್ಟು ಅದಕ್ಕೆ ನೀರು ಮಂತ್ರಾಕ್ಷತೆ ಹಾಕಿ ಅದರೊಳಗೆ 5 ವಿಳ್ಳೇದೆಲೆಗಳನ್ನು ತುದಿ ಮೇಲೆ ಮಾಡಿ ಎಲೆಯ ಹಿಂಭಾಗ ಚೊಂಬಿನೊಳಗೆ ಇರುವಂತೆ ಸುತ್ತಲೂ ಒಂದರ ಪಕ್ಕ ಒಂದು ಇರುವಂತೆ ಇಡಬೇಕು. ಎಲ್ಲ ಎಲೆಗಳ ಅಳತೆ ಒಂದೇ ಇರಲಿ. ಈ ಚೊಂಬಿನ ಕಂಠಕ್ಕೆ ಹೂ ಸುತ್ತಿ ಕರಿಮಣಿ ತಾಳಿಯಿಂದ ಅಲಂಕರಿಸಬೇಕು.



ಸೂಚನೆ : ಚೊಂಬಿನ ಸುತ್ತಲೂ ಮೇಲೆ ಕೆಳಗೆ ಬೆಟ್ಟಿನಿಂದ ಸುಣ್ಣದ ಪಟ್ಟೆ ಸವರಬೇಕು. ಹರಡಿರುವ ಅಕ್ಷತೆ ಜೊತೆಗೆ ಅರಳು ಇದ್ದರೆ ಅದನ್ನೂ ಬೆರಸಿ ತಟ್ಟೆಗೂ ಸಹ ಹೊರಗಡೆ, ಒಳಗಡೆ + ಗುರುತಿನಂತೆ ಸುಣ್ಣ ಸವರಿ ಚೊಂಬಿನೊಳಗೆ ಅಕ್ಷತೆಯನ್ನು ಹಾಕಿ ಚೊಂಬಿನ ಮುಂದೆ ಒಂದು ಚಿಕ್ಕ ಕನ್ನಡಿಯನ್ನು ಚೊಂಬಿಗೆ ತಾಕುವಂತೆ ಒರಗಿಸುವುದು. ಇದು ವರನ ತಂಗಿ ಅಥವಾ ವಧುವಿನ ಮನೆಗಳ ಪದ್ಧತಿಯಂತೆ ಅಣಿತಟ್ಟೆಯವರ ಜೊತೆಯಲ್ಲೇ ಇರಬೇಕು. ಅಣಿತಟ್ಟೆಯನ್ನು ಬೀಗಿತ್ತಿ ಅಂದರೆ ವರನ ಅಥವಾ ವಧುವಿನ ತಾಯಿ ಹಿಡಿದುಕೊಳ್ಳಬೇಕು.

ದೇವರ ಸಮಾರಾಧನೆ

ವಧು ಮತ್ತು ವರ ಇಬ್ಬರ ಮನೆಯಲ್ಲೂ ಈ ಕಾರ್ಯವನ್ನು ಮಾಡುವ ದಿನ ಬೆಳಗ್ಗೆ ಬೇಗನೆ ಎದ್ದು ಮನೆಯನ್ನೆಲ್ಲ ಸಾರಿಸಿ ರಂಗವಲ್ಲಿ ಇಡಬೇಕು. ಮನೆ ಹಾಲ್‌ನಲ್ಲಿ ಪೂರ್ವಕ್ಕೆ ಎದುರಾಗಿ ಒಂದು ಹಸೆ ಮಣೆಯನ್ನು ಹಾಕಿ ಅದರ ಮುಂದೆ ಸುತ್ತಲೂ ರಂಗೋಲಿ ಇಟ್ಟು ಹಸೆ ಮಣೆಯ ಮೇಲೆ ಒಂದು ಚಿಕ್ಕ ಜಮಖಾನೆ, ಶಾಲು ಅಥವಾ ಯಾವುದಾದರೂ ಬಟ್ಟೆಯನ್ನು ಅದರ ಅಂಚು ಮುಂದೆ ಬರುವಂತೆ ಹಾಸಬೇಕು.



ಎಣ್ಣೆಶಾಸ್ತ್ರ

ನಂತರ ವಧು/ವರರ ತಾಯಿ, ತಂದೆ, ಕಳಸಗಿತ್ತಿ ಈ ನಾಲ್ಕು ಜನರು (ಹಸೆಮಣೆಗೆ ಬರುವ ಮೊದಲು) ಆಣೆತಟ್ಟೆ, ಕಳಶ ಕನ್ನಡಿಗಳ ಸಮೇತ ದೇವರ ಮನೆಗೆ ಹೋಗಿ ದೇವರಿಗೆ ನಮಸ್ಕಾರ ಮಾಡಿ ಹಸೆಮಣೆಯ ಮೇಲೆ ಬರಬೇಕು. ವಧುವಿನ/ವರನ ತಂದೆ ಹೆಗಲಮೇಲೆ ಶಲ್ಯ ಹೊದ್ದು ಪಂಚೆ ಉಟ್ಟಿರಬೇಕು. ಎಲ್ಲರೂ ಬಲಗಾಲನ್ನು ಮುಂದಿಟ್ಟು ಕುಳಿತುಕೊಳ್ಳುವ ಪದ್ಧತಿ ಇದೆ. ಇದಕ್ಕೆ ಮೊದಲು ದೇವರ ಮುಂದೆ ಮತ್ತು ಹಸೆಮಣೆಯ ಮುಂದೆ ದೀಪಗಳನ್ನು ಹಚ್ಚಿಡಬೇಕು. ಬಲಗಡೆಯಿಂದ ಆರಂಭಿಸಿ ಕುಳಿತಿರುವ ಎಲ್ಲರ ಹಣೆಗೂ ಒಬ್ಬ ಹಿರಿ ಮುತ್ತೈದೆ ಕುಂಕುಮವನ್ನು ಇಡಬೇಕು. ಎರಡು ವಿಳ್ಳೇದೆಲೆ (ಪಟ್ಟಿ) ಅಡಕೆ ಇಟ್ಟು ಎಲ್ಲರಿಗೂ ಮುಟ್ಟಿಸಬೇಕು.

ಒಂದು ಬಟ್ಟಲಲ್ಲಿ ಸ್ವಲ್ಪ ಅರಿಸಿನ ಕೊಬ್ಬರಿ ಎಣ್ಣೆ ಹಾಕಿಕೊಂಡು ಒಂದು ಹೂವಿನಿಂದ ಅದನ್ನು ಅದ್ದಿಕೊಂಡು ಎಲ್ಲರ ತಲೆಗೆ ಮೂರು ಬಾರಿ ಹಚ್ಚಿ, ಕೈ ಕಾಲುಗಳಿಗೆ ಅರಿಸಿನವನ್ನು ಮೂರು ಸಲ ಹಚ್ಚಿ ಒಂದು ತಟ್ಟೆಯಲ್ಲಿ ಕೆಂಪು ನೀರನ್ನು (ಅರಿಸಿನ ಸುಣ್ಣವನ್ನು ನೀರಿಗೆ ಸೇರಿಸಿ ಬಾಟಲಿಯಲ್ಲಿ ತುಂಬಿಸಿಟ್ಟಿದ್ದರೆ ಆರತಿ ಮಾಡುವಾಗಲೆಲ್ಲ ಅದನ್ನು ಸ್ವಲ್ಪ ಸ್ವಲ್ಪ ಹಾಕಿಕೊಳ್ಳಬಹುದು) ಹಾಕಿಕೊಂಡು ಇಬ್ಬರು ಮುತ್ತೈದೆಯರು ತಟ್ಟೆ ಹಿಡಿದುಕೊಂಡು ಆರತಿ ಮಾಡಬೇಕು. ಎಣ್ಣೆ ಶಾಸ್ತ್ರ ಮತ್ತು ಆರತಿ ಎರಡಕ್ಕೂ ಹಾಡುಗಳನ್ನು ಹೇಳಿಕೊಂಡು ಆರತಿ ಎತ್ತಬೇಕು. ಈ ಶಾಸ್ತ್ರದ ಹಾಡುಗಳನ್ನು ಕೊನೆಯ ಪುಟಗಳಲ್ಲಿ ಮುದ್ರಿಸಲಾಗಿದೆ. ಕೆಲವರ ಮನೆಯಲ್ಲಿ ಆರತಿ ಮಾಡಿದ ನಂತರ ಎಣ್ಣೆಶಾಸ್ತ್ರ ಮಾಡುವ ಪದ್ಧತಿ ಇದೆ. ಆರತಿ ಮಾಡಿಸಿಕೊಂಡವರೆಲ್ಲರೂ ತಟ್ಟೆಗೆ ದಕ್ಷಿಣೆ ಹಾಕುತ್ತಾರೆ. ಎಣ್ಣೆಶಾಸ್ತ್ರದ ನಂತರ ನೀರು ಹಾಕಿಕೊಂಡು ತಾಯಿ ಮತ್ತು ಮಗ (ಮಗಳು) ಸಾಧಾರಣವಾಗಿರುವ ಬಟ್ಟೆ ಹಾಕಿಕೊಂಡರೆ ಒಳ್ಳೆಯದು. ಏಕೆಂದರೆ ಇದಾದ ನಂತರ ಮಲ್ನೀರಿನ ಶಾಸ್ತ್ರ ಇದೆ. ಅಷ್ಟು ಹೊತ್ತಿಗೆ ಪುರೋಹಿತರು ಬಂದಿರಬೇಕು.

ಮಲ್ನೀರು

ಈ ಸಂಪ್ರದಾಯದಲ್ಲಿ ವಧುವಿನ ತಾಯಿಗೆ ಅವರ ತವರು ಮನೆಯಿಂದ ಸೀರೆ ಕುಪ್ಪಸ ಹಾಗೂ ಹುಡುಗಿಗೆ ಏನಾದರು ಕಣ ತಂದಿರಬೇಕು. ತಟ್ಟೆಯಲ್ಲಿ ಅವುಗಳನ್ನೂ ಮೇಲೆ ವಿಳ್ಳೇದೆಲೆ ಪಟ್ಟಿಯನ್ನೂ ಇಟ್ಟು ಓದಿಸಿಕೊಡಲು ಸಿದ್ಧಮಾಡಿಕೊಳ್ಳಬೇಕು. ಈಗ ಸ್ನಾನದ ಕೊಠಡಿ ಅಥವಾ

ಚಪ್ಪರದ ಕೆಳಗೆ ಒಂದು ಮಣೆ ಹಾಕಿ ತಾಯಿ ಮತ್ತು ವಧುವನ್ನು ಪೂರ್ವದಿಕ್ಕಿಗೆ ನಿಲ್ಲಿಸಿ ಮಣೆಯ ಮುಂಭಾಗದಲ್ಲಿ ನಾಲ್ಕು ಕಡೆ ಎರಡೆರಡು ವಿಳ್ಳೇದಲೆ, ಅಡಕೆ, ದಕ್ಷಿಣೆ ಮತ್ತು ನೆನೆಸಿದ ಸ್ವಲ್ಪ ಕಡಲೆಬೇಳೆಯನ್ನು ಇಡಬೇಕು. ಐದು ಲೋಟಗಳನ್ನು ತೆಗೆದುಕೊಂಡು ಅವುಗಳ ಸುತ್ತ ಎರಡು ಪಟ್ಟಿ ಸುಣ್ಣ ಹಚ್ಚಿ, ಅವುಗಳಲ್ಲಿ ಅರ್ಧ ಲೋಟ ಓಕಳಿ (ಅರಿಸಿನ ಸುಣ್ಣದ ನೀರು) ಮತ್ತು ಒಂದು ದಕ್ಷಿಣೆ ಹಾಕಿ ಅವುಗಳನ್ನು ಚಪ್ಪರದ ಕೆಳಗೆ ತಾಯಿ ಮತ್ತು ವಧು ನಿಂತಿರುವ ಮಣೆಯ ಸುತ್ತ ಐದು ಕಡೆಗಳಲ್ಲಿ ಇಡಬೇಕು. ಮಧ್ಯದಲ್ಲಿ ಇಟ್ಟಿರುವ ಒಂದು ಲೋಟದಿಂದ ಆರಂಭಿಸಿ ಒಂದು ದೊಡ್ಡ ಹಸಿ ದಾರವನ್ನು ಎಲ್ಲ ಲೋಟಗಳಿಗೂ ಸುತ್ತಬೇಕು. ಐದು ಜನ ಮುತ್ತೈದೆಯರು ಒಂದೇ ಸಮಯದಲ್ಲಿ ಈ ಐದು ಲೋಟಗಳನ್ನು ಎತ್ತಿ ಹಿಡಿದುಕೊಂಡು ಒಂದು ಉಂಗುರವನ್ನು ಒಬ್ಬರ ನಂತರ ಇನ್ನೊಬ್ಬರು ಬಲಗೈಯಲ್ಲಿ ಇಟ್ಟುಕೊಂಡು ತಾಯಿಯ ಬೆನ್ನಿನ ಮೇಲೆ ತಾವು ಹಿಡಿದಿರುವ ಲೋಟದ ನೀರನ್ನು ಸುರಿಯಬೇಕು. ಇದು ಬಗ್ಗಿದ ಮಗಳ ಬೆನ್ನಿಗೂ ಬೀಳುತ್ತದೆ. ಪ್ರತಿ ಮುತ್ತೈದೆಯೂ ಈ ಕಾರ್ಯವನ್ನು ಮಾಡಿದ ನಂತರ ವಧುವಿನ ಕಡೆಯ ಒಬ್ಬರು ಲೋಟದಲ್ಲಿದ್ದ ದಕ್ಷಿಣೆಯನ್ನು ಮುತ್ತೈದೆಗೆ ಕೊಟ್ಟು ಅವರ ಕೈಲಿರುವ ಉಂಗುರವನ್ನು ತೆಗೆದುಕೊಂಡು ಮುಂದಿನ ಮುತ್ತೈದೆಗೆ ಕೊಡಬೇಕು. ಹೀಗೆ ಐದು ಮುತ್ತೈದೆಯರಿಂದ ಮಲನೀರು ಶಾಸ್ತ್ರ ಆದಮೇಲೆ ತಾಯಿ ಮತ್ತು ಮಗಳ ಹಣೆಗೆ ಕುಂಕುಮ ಇಟ್ಟು ಆರತಿ ಮಾಡಿ ತೌರು ಮನೆಯ ಸೀರೆಯನ್ನು (ಈ ಸೀರೆಯನ್ನು ನಾಂದಿಗೆ ಮತ್ತು ಮಾರನೆಯ ದಿನ ಧಾರೆ ಎರೆಯುವಾಗ ಉಟ್ಟುಕೊಳ್ಳಬೇಕು) ಪುರೋಹಿತರು ಆಶೀರ್ವಾದ ಮಾಡಿ ಕೊಡಬೇಕು. ಇದಾದ ಮೇಲೆ ವಧು ಮತ್ತು ವಧುವಿನ ತಾಯಿ ಶುಭ್ರವಸ್ತ್ರಗಳನ್ನು ಧರಿಸಬೇಕು. ನಂತರ ಹೂವೀಳ್ಯ. ಈ ಎಲ್ಲ ಶಾಸ್ತ್ರಗಳನ್ನೂ ವರನ ಕಡೆಯವರೂ ಮಾಡಬೇಕು. ಈ ವಿಧಿಗಳನ್ನು ಆಚರಿಸುವಾಗ ವಧುವಿನ/ವರನ ತಂದೆ ಪಂಚೆ ಉಟ್ಟುಕೊಂಡು ಶಲ್ಯ ಹೊದ್ದಿರಬೇಕು. ಇದು ನಮ್ಮ ದಕ್ಷಿಣದ ಪದ್ಧತಿ. ಮದುವೆ ಮನೆ ಎಂದರೆ ಬಣ್ಣ ಬಣ್ಣದ ಜರಿಸೀರೆ, ಪಂಚೆ, ಶಲ್ಯ ಇವುಗಳಾಗಿದ್ದು ನೋಡಲು ಇವು ಸುಂದರ ಮತ್ತು ಲಕ್ಷಣವಾಗಿರುತ್ತವೆ. ಇದ್ದರೆ ಒಡವೆಗಳನ್ನೂ ಧರಿಸಬಹುದು.

ಹೂವೀಳ್ಯ

ಇದು ಸುಮಂಗಲಿ ಪೂಜೆ, ಅರಿಸಿನ ಕುಂಕುಮ ಕೊಡುವುದು ಎಂಬ ಸಂಪ್ರದಾಯ. ಅವರ ಅವರ ಮನೆಯ ಪದ್ಧತಿಯಂತೆ ಹಿರಿಯರನ್ನು ಕೇಳಿ ಒಂಬತ್ತು ಜನ ಸುಮಂಗಲಿಯರಿಗೆ ಅಥವಾ ಬಂದವರಿಗೆಲ್ಲ (ಕನಿಷ್ಠ ಐದು ಜನ) ಸುಮಂಗಲಿ ಪೂಜೆಯನ್ನು ಮಾಡುತ್ತಾರೆ.

ಮಾಡಬೇಕಾದ ವಿಧಾನ

ನೀವು ಎಷ್ಟು ಸುಮಂಗಲಿಯರಿಗೆ ಹೂವೀಳ್ಯ ಕೊಡುವಿರೋ ಅಷ್ಟು ಸಂಖ್ಯೆಯ ತಟ್ಟೆಗಳನ್ನು (ಸ್ಟೀಲ್, ಪ್ಲಾಸ್ಟಿಕ್ ತಟ್ಟೆ, ಬುಟ್ಟಿ, ಅಡಕೆ ತಟ್ಟೆ ಯಾವುದಾದರೂ ಸರಿ) ಹೊಂದಿಸಿಕೊಳ್ಳಬೇಕು. ಪ್ರತಿಯೊಂದರಲ್ಲಿ ಇಡಬೇಕಾದ ಪದಾರ್ಥಗಳೆಂದರೆ ಐದು ಬಗೆಯ ಹಣ್ಣುಗಳು (ಎರಡು ಬಾಳೆಹಣ್ಣು, ಕಿತ್ತಳೆ ಮೋಸಂಬಿ, ಸೇಬು, ದ್ರಾಕ್ಷಿ, ಹಲಸು, ದಾಳಿಂಬೆ, ಸೀತಾಫಲ ಮುಂತಾಗಿ ಆಯಾ ಕಾಲದಲ್ಲಿ ಸಿಕ್ಕುವ ಹಣ್ಣುಗಳು), ತಂಬಿಟ್ಟು, ಚಿಗಳಿ, ಐದು ವಿಳ್ಳೇದೆಲೆ, ನಾಲ್ಕು ಬಳೆಗಳು, ಅಡಿಕೆ, ತೆಂಗಿನಕಾಯಿ, ಅನುಕೂಲಕ್ಕೆ ತಕ್ಕಂತೆ ದಕ್ಷಿಣೆ ಮತ್ತು ಪಾನಕ. ಲೋಟಗಳಿಗೆ ಸ್ವಲ್ಪ ಹಾಲನ್ನು ಹಾಕಿ ಇಟ್ಟುಕೊಳ್ಳಬೇಕು. ಅರಿಸಿನ ಕುಂಕುಮವನ್ನು ಬಟ್ಟಲಲ್ಲಿ ಇಟ್ಟುಕೊಂಡು ಅರಿಸಿನವನ್ನು ಅದರ


ಕೈಗಳಿಗೆ ಕೊಡಿ ಕುಂಕುಮ, ಚಂದ್ರ ಇಡಿ ಹೂವು ಕೊಡಿ. ಇದಕ್ಕೆ ಮೊದಲು ಚಪ್ಪರದ ಕೆಳಗೆ ಮಣೆ ಹಾಕಿ ಎಲ್ಲರಿಗೂ ಕಾಲಿಗೆ ಅರಿಸಿನ ನೀರಿನಿಂದ ತೊಳೆದು (ಒಂದು ಬಕೆಟ್ ನೀರಿಗೆ ಅರಿಸಿನ ಹಾಕಿ ನೀರು ಇಟ್ಟುಕೊಳ್ಳಿ) ಕಾಲಿಗೆ ಅರಿಸಿನ ಕುಂಕುಮ ಹಚ್ಚಿ ಹೂವು ಇಡಿ, ಹಣೆಗೂ ಕುಂಕುಮ ಇಟ್ಟು ಒಳಗೆ ಕಳಿಸಿ. ಎಲ್ಲರದ್ದೂ ಕಾಲು ತೊಳೆದು ಮುಗಿದ ಮೇಲೆ ಪೂರ್ವ ಮತ್ತು ಉತ್ತರ ಆಸನದಲ್ಲಿ (ಚಾಪೆ, ಮಣೆ) ಕೂರಿಸಿ ಮೇಲೆ ಹೇಳಿದಂತೆ ಸಿದ್ಧಮಾಡಿರುವ ತಟ್ಟೆಗಳನ್ನು ಕೊಡಿ. ಅಷ್ಟುಹೊತ್ತಿಗೆ ಹಸಮಣೆಯ ಹತ್ತಿರ ಹೋಮ, ನಾಂದಿ ಪೂಜೆ ಆರಂಭವಾಗುತ್ತದೆ. ಅದನ್ನು ಪುರೋಹಿತರು ಮಾಡಿಸುತ್ತಾರೆ.

ನಾಂದಿ

ನಾಂದಿ ಎಂದರೆ ಮನೆ ದೇವರಿಗೆ ಮತ್ತು ಹಿರಿಯರಿಗೆ ಪೂಜೆ ಮಾಡುವುದು. ಕನಿಷ್ಠ ಎರಡು ಅಡಿ ಉದ್ದದ ಒಂದು ಕೋಲಿಗೆ ಹೊಸ ಹತ್ತಿ ಸೀರೆ ಉಡಿಸಿ ರವಿಕೆ ಕಣ ಮತ್ತು ತಾಳಿ ಕರಿಮಣಿ ಸಹ ಕಟ್ಟಬೇಕು. ನಮ್ಮ ನಮ್ಮ ಮನೆ ಪದ್ಧತಿಯಂತೆ ಒಂದು ಸೊಪ್ಪಿನ ಕೊನೆಯನ್ನು (ಮಾವು, ಲಕ್ಕಿ ಹೀಗೆ ಬೇರೆ, ಬೇರೆ ಸೊಪ್ಪುಗಳು) ಕಟ್ಟಿ ಒಂದು ತಟ್ಟೆಯಲ್ಲಿ ಅಕ್ಕಿ, ಎರಡು ತೆಂಗಿನಕಾಯಿ, ವಿಳ್ಳೇದೆಲೆ ಪಟ್ಟಿ (ಅಡಿಕೆ ವಿಳ್ಳೇದೆಲೆ ಸೇರಿಸಿ ಮಾಡುವುದು), ಅರಿಸಿನದ ಕೊಂಬು, ಐದು ಬೆಲ್ಲದ ಅಚ್ಚುಗಳು, ಬಳೆ ಬಿಚ್ಚೋಲೆ, ಕರಿಮಣಿ, ಅರಿಸಿನ ಕುಂಕುಮದ ಪೊಟ್ಟಣ ಮತ್ತು ಹದಿನಾರು ಬಟ್ಟಲು ಅಡಿಕೆ ಇಟ್ಟು ಈ ತಟ್ಟೆಯ ಮೇಲೆ ಮನೆದೇವರ ಕೋಲನ್ನು ಇಡಬೇಕು. ಇದನ್ನು ಪುರೋಹಿತರು ಅಣಿ ಮಾಡುತ್ತಾರೆ. ಇದರ ಪೂಜೆ ಆದಮೇಲೆ ಇದನ್ನು ಯಜಮಾನರು (ತಂದೆ) ಚಪ್ಪರದ ಪೂಜೆಗೆ ತೆಗೆದುಕೊಂಡು ಹೋಗಿ ಆಮೇಲೆ ದೇವರ ಮುಂದೆ ಇಡಬೇಕು. ಚಪ್ಪರದ ಪೂಜೆ ಮಾಡುವಾಗ ಅದರ ಮೇಲೆ ಒಂದು ಒಬ್ಬಟ್ಟು ಹಾಕುವುದು. ಚಪ್ಪರದ ಪೂಜೆ ಮುಗಿಸಿ ಬರುವಾಗ ಹೊಸ್ತಿಲು ಬಾಗಿಲುಗಳಿಗೆ ಗೆಜ್ಜೆ, ವಸ್ತ್ರ ಇಟ್ಟು ಪೂಜೆ ಮಾಡಿ ಆರತಿ ಮಾಡಬೇಕು. ಮದುವೆ ಮುಗಿದ ಮೇಲೆ ತಟ್ಟೆಯಲ್ಲಿರುವ ಪದಾರ್ಥವನ್ನು ಪುರೋಹಿತರಿಗೆ ಕೊಟ್ಟು ಸೀರೆಯನ್ನು ಮನೆಯವರೇ ಇಟ್ಟುಕೊಳ್ಳುವುದು.

ಗೋದಿಕಲ್ ಶಾಸ್ತ್ರ

ಈ ಸಂಪ್ರದಾಯ ಏನೆಂದರೆ ಹಿಂದೆ ವಿವಾಹದ ಶುಭ ಕೆಲಸಕ್ಕೆ ಮುನ್ನ ಅರಿಸಿನ ಕುಟ್ಟಿ, ಹಪ್ಪಳ ಸಂಡಿಗೆ ಮುಂತಾದುವುಗಳನ್ನು ಮಾಡುವಾಗ ಒಂದು ಬೆನಕನನ್ನು ಹಸುವಿನ ಸಗಣಿಯಲ್ಲಿ ತ್ರಿಕೋನಾಕಾರದಲ್ಲಿ ಮಾಡಿ ಇದಕ್ಕೆ ಗರಿಕೆ ಹುಲ್ಲನ್ನು ಸಿಕ್ಕಿಸಿ ಮಧ್ಯದಲ್ಲಿ ಕುಂಕುಮ ಇಡುತ್ತಿದ್ದರು.



ಇದನ್ನು ಒಂದು ಚಿಕ್ಕ ತಟ್ಟೆಯಲ್ಲಿಟ್ಟುಕೊಂಡು ನಂತರ ಎರಡು ಬಣ್ಣದ ಕೋಲು, ಬೀಸುವ ಕಲ್ಲು (ಚನ್ನಪಟ್ಟಣದ ಮರದ ಆಟದ ಸಾಮಾನಿನ ಜೊತೆ ಇರುತ್ತದೆ) ಇವುಗಳನ್ನು ಸಹ ಗಣಪತಿ

ಪಕ್ಕದಲ್ಲಿಟ್ಟು ಎಲ್ಲವುದಕ್ಕೂ ಅರಿಸಿನ ಕುಂಕುಮ ಗೆಜ್ಜೆ ವಸ್ತ್ರ, ಧೂಪ, ದೀಪ, ನೈವೇದ್ಯ ಮಾಡಿ ನಂತರ ಒಂದು ಬಟ್ಟಲಲ್ಲಿ ರವೆ ಅಥವಾ ಅಕ್ಕಿಹಿಟ್ಟನ್ನು ತೆಗೆದುಕೊಂಡು ಸ್ವಲ್ಪ ನೀರು ಹಾಕಿ ಕಲೆಸಿ (ಗಟ್ಟಿಯಾಗಿ) ಇಟ್ಟುಕೊಳ್ಳಬೇಕು. ಈಗ ಐದು ಜನ ಮುತ್ತೈದೆಯರು ಗೋಧಿಕಲ್ ಸಂಪ್ರದಾಯದ ಹಾಡು ಹೇಳಿಕೊಂಡು (ಸುವ್ವಿ, ಸುವ್ವಮ್ಮ ಲಾಲಿ ಸುವ್ವಲಾಲಿ, ಶ್ರೀನಿವಾಸ ಪದ್ಮಾವತಿ ಕಲ್ಯಾಣ ಸುವ್ವಿ....) ಅರಿಸಿನದ ಬಟ್ಟಲಲ್ಲಿ ಬಣ್ಣದ ಕೋಲಿನಿಂದ ಮೆತ್ತಗೆ ಕುಟ್ಟಿದ ಶಾಸ್ತ್ರ ಮಾಡಿ ಬೀಸುವ ಕಲ್ಲಿಗೆ ಸ್ವಲ್ಪ ಹಿಟ್ಟನ್ನು (ರವೆ) ಹಾಕಿ ಐದು ಜನ ಬೀಸಿ ಕಲಸಿಟ್ಟ ಹಿಟ್ಟಿನಿಂದ ಸಂಡಿಗೆ ತರಹ ಗುಂಡಗೆ ಮಾಡಿ ಹೆಬ್ಬರಳಲ್ಲಿ ಒತ್ತಿ ಇಟ್ಟು ಅದಕ್ಕೆ ಅರಿಸಿನ ಕುಂಕುಮ ಪೂಜೆ ಮಾಡಬೇಕು. ವಧುವಿನ ತಾಯಿ ಗಣಪತಿ ಪೂಜೆ ಮಾಡಬೇಕು. ಇದಾದ ನಂತರ ಐದು ಜನ ಅರಿಸಿನ ಕುಟ್ಟಿದ ಮುತ್ತೈದೆಯರಿಗೆ ಅರಿಸಿನ ಕುಂಕುಮ ಎಲೆ ಅಡಿಕೆ ಕೊಡಬೇಕು. ವಧುವಿನ ಮನೆಯಲ್ಲಿ ಇದೆಲ್ಲವನ್ನೂ ಮಾಡಿ ವಧುವಿಗೆ ಹುಟ್ಟುತಾಳಿ ಕಟ್ಟಿ ತವರು ಮನೆಯವರು ಕೊಡುವ ಒಡವೆಗಳನ್ನು ಹಾಕಿ ವಧುವಿಗೆ ಮುಗುಳು ಮಾಡುವುದು.

ಮುಗುಳು ಮಾಡುವ ವಿಧಾನ


ಒಂದು ತಟ್ಟೆಯಲ್ಲಿ ಅಕ್ಕಿಯನ್ನು ಹರಡಿ ಅದರಲ್ಲಿ ಒಂದು ತೆಂಗಿನಕಾಯಿ ಎಲೆ ಅಡಕೆ ಇಟ್ಟು ಅಕ್ಕಿ ಒಳಗೆ ಒಂದು ಉಂಗುರವನ್ನು ಮುಚ್ಚಿಡಬೇಕು. ವಧುವಿನ ತಾಯಿಯು ತನ್ನ ತೊಡೆಯ ಮೇಲೆ ಈ ತಟ್ಟೆಯನ್ನು ಇಟ್ಟುಕೊಂಡು ವಧುವನ್ನು ಪಕ್ಕದಲ್ಲಿ ಕೂರಿಸಿಕೊಂಡು ಮಗಳನ್ನು 'ಕಂಡೆಯಾ, ಮುತ್ತಿನಂಥಾ ಗಂಡನನ್ನು ಕಂಡೆಯಾ' ಎಂದು ಹೇಳುತ್ತಾ ಅವಳಿಂದ ತಟ್ಟೆಯೊಳಗಿನ ಉಂಗುರವನ್ನು ಹುಡುಕಿಸಿ ತೆಗೆಯಬೇಕು. ಈ ತರಹ ಮೂರು ಸಲ ಮಾಡಿ ಆ ತಟ್ಟೆಯನ್ನು ತಾಯಿಯ ಮಡಿಲಿಗಿಟ್ಟು ವಧುವಿಗೆ ಮತ್ತು ತಾಯಿಗೆ ಆರತಿ ಮಾಡಬೇಕು. ವರನ ಮನೆಯಲ್ಲೂ ಈ ಶಾಸ್ತ್ರ ಮಾಡಬೇಕು. ವರನ ಮನೆಯಲ್ಲಿ ಈ ಶಾಸ್ತ್ರ ಆದಮೇಲೆ ವಧುವಿಗೆ ತಂದಿರುವ ಒಡವೆ ವಸ್ತ್ರಗಳನ್ನು ಅಲ್ಲೇ ಒಂದು ಮಣೆಯ ಮೇಲಿಟ್ಟು ಅದಕ್ಕೂ ಪೂಜೆ ಮಾಡಿ ತಾಳಿ ಕರಿಮಣಿ ಇಡಬೇಕು. ಮುಂದೆ ಮುತ್ತೈದೆಯರು ಮತ್ತು ಬ್ರಾಹ್ಮಣರಿಗೆ ಭೋಜನ ಉಪಚಾರ ಮಾಡಬೇಕು.

ವರನ ಮನೆಯಲ್ಲಿ ಕರಿಮಣಿ ಪೋಣಿಸುವ ಶಾಸ್ತ್ರ

ಸಾಯಂಕಾಲ ವರನ ಮನೆಯವರು ತಾಳಿ ಕರಿಮಣಿಯನ್ನು ಮುತ್ತೈದೆಯರ ಕೈಯಲ್ಲಿ ಪೋಣಿಸಬೇಕು. ಎರಡು ಎಳೆ ಜನಿವಾರದ ದಾರ ತೆಗೆದುಕೊಂಡು ಅದಕ್ಕೆ ಅರಿಸಿನ ಅದ್ದಿದ ನೀರನ್ನು ಚನ್ನಾಗಿ ಸವರಿ ಎರಡು ಎಳೆಯನ್ನು ಎಷ್ಟು ಉದ್ದ ಬೇಕೋ ಅಷ್ಟಕ್ಕೆ ತೆಗೆದುಕೊಳ್ಳಬೇಕು. ಆ ದಾರವನ್ನು ತೊಡೆಯ ಮೇಲೆ ಚೆನ್ನಾಗಿ ಹೊಸೆಯಬೇಕು. ಈಗ ದೇವಿ ಸ್ಮರಣೆ ಮಾಡುತ್ತಾ ತಾಳಿ ಗುಂಡನ್ನು ಪೋಣಿಸಬೇಕು. ತಾಳಿಗುಂಡು ಜಾರದಂತೆ ಎರಡು ಕಡೆಯೂ ಗಂಟು ಹಾಕಿ ಇಡಬೇಕು. ದಾರಕ್ಕೆ ಪೋಣಿಸಿದ ತಾಳಿಯು ಕಂಠದವರೆಗೆ ಮಾತ್ರ ಇರಬೇಕು. ತಾಳಿ ಪೋಣಿಸಿದವರಿಗೆ ಎಲೆ ಅಡಿಕೆ ದಕ್ಷಿಣೆ ಕೊಡಬೇಕು. ಧಾರೆ ತಾಳಿಗೆ ಕರಿಮಣಿ ಪೋಣಿಸಬಾರದು. ನಾಗೋಲಿ ತಾಳಿಗೆ ಕರಿಮಣಿ ಪೋಣಿಸಬೇಕು. ಇದಾದ ನಂತರ ವರ ವಧುವಿನ ಕಡೆಯವರು ಗೌರಿ ಪೂಜೆಗೆ ಬೇಕಾದ ಸಿದ್ಧತೆ ಮಾಡಿಕೊಳ್ಳಬೇಕು. ಮರದ ಜೊತೆಯನ್ನು ವಧುವಿನ ಕಡೆಯವರು 5 ಜೊತೆ ವರನ ಕಡೆಯವರು 2 ಜೊತೆ ಸಿದ್ಧ ಮಾಡಿಕೊಳ್ಳಬೇಕು.

ಮೊರದ ಬಾಗಿನ

ಇದಕ್ಕಾಗಿ ಎರಡು ಹೊಸ ಮೊರಗಳನ್ನು ತಂದು ತೊಳೆದು, ಅರಿಶಿನದ ನೀರನ್ನು ಬಟ್ಟೆಯಲ್ಲಿ ಅದ್ದಿಕೊಂಡು ಮರಗಳ ಒಳಗೆ ಮತ್ತು ಹೊರಗೆ **X** ಆಕಾರದಲ್ಲಿ ಹಚ್ಚಿ, ಮೊರದ ಮಧ್ಯದಲ್ಲಿ ಚೌಕಾಕಾರದ ರೀತಿಯಲ್ಲಿ ಕುಂಕುಮ ಮತ್ತು ಚಂದ್ರ ಇಡಬೇಕು. ಇದು ಸರಳ ಸಂಪ್ರದಾಯ. ಈಗ ಅಲಂಕಾರ ಮಾಡಿರುವ ಮೊರಗಳೇ ಸಿಗುತ್ತವೆ. ಅದಕ್ಕಾದರೂ ಬಾಗಿನ ಇಟ್ಟು ಕೊಡಬಹುದು.



ಮೊರದ ಅಲಂಕಾರ ಮುಗಿದ ಮೇಲೆ ಒಂದು ಮೊರವನ್ನು ಪೂರ್ವ ದಿಕ್ಕಿಗೆ ಮುಂಭಾಗ ಬರುವ ಹಾಗೆ ಇಟ್ಟು ಇದಕ್ಕೆ ಬಾಳೆ ಎಲೆಯನ್ನು ಅದರ ಚಿಕ್ಕ ಅಗ್ರದ ತುದಿಯು ನಮ್ಮ ಎಡಕ್ಕೆ ಬರುವ ಹಾಗೆ ಹಾಕಿ ಅಥವಾ ಮುತ್ತುಗದ ಎಲೆ ಹಾಕಿ ಅದಕ್ಕೆ ಸ್ವಲ್ಪ ಹಾಲನ್ನು ಹೂವಿನಲ್ಲಿ ಅದ್ದಿ ಪ್ರೋಕ್ಷಿಸಿ ಒಂದು ಕಡೆ ಇಟ್ಟುಕೊಳ್ಳಬೇಕು.

ಬಾಗಿನದ ಸಾಮಾನುಗಳು

ಅಕ್ಕಿ, ಕಡಲೇಬೇಳೆ, ಉದ್ದಿನಬೇಳೆ, ಹೆಸರುಬೇಳೆ, ತೊಗರಿಬೇಳೆ, ಬೆಲ್ಲ, ರವೆ ಮತ್ತು ಸ್ವಲ್ಪ ಉಪ್ಪನ್ನು ಬೇರೆ ಬೇರೆ ಕವರುಗಳು ಅಥವಾ ಡಬ್ಬಿಗಳಿಗೆ ಹಾಕಿ ಪ್ಯಾಕ್ ಮಾಡಿ ಮೊರದ ಒಳಗೆ ಇಡಬೇಕು. ಇದರ ಜೊತೆಯಲ್ಲಿ ಒಂದು ತೆಂಗಿನಕಾಯಿ, 5 ಬಗೆಯ ಹಣ್ಣುಗಳು, ಕೈ ಬಳೆ, ಎರಡು ವಿಳ್ಳೇದೆಲೆ, ಅಡಿಕೆ ಮತ್ತು ದಕ್ಷಿಣೆ ಇಡಬೇಕು. ಮಂಗಳ ದ್ರವ್ಯಗಳಾದ ಬಳೆ, ಬಿಚ್ಚೋಲೆ, ಕರಿಮಣಿ ಕನ್ನಡಿ, ಬಾಚಣಿಗೆ, ಅರಿಸಿನ, ಕುಂಕುಮ ಇವುಗಳನ್ನೆಲ್ಲ ಹಾಕಿದ ಪೊಟ್ಟಣಗಳೇ ಸಿಕ್ಕುವುದರಿಂದ ಆ ಪೊಟ್ಟಣಗಳನ್ನೂ ಉಳಿದ ಸಾಮಾನುಗಳ ಜೊತೆಯಲ್ಲಿ ಕೊಂಡು ತರಬಹುದು. ಗೆಜ್ಜೆ ವಸ್ತ್ರ, ಹೂಬತ್ತಿ, ಮಂಗಳಾರತಿ ಬತ್ತಿ ಇವುಗಳನ್ನೂ ಒಂದು ಪೊಟ್ಟಣಕ್ಕೆ ಹಾಕಿ ಇಡಬೇಕು. ಚಂದ್ರ ಮತ್ತು ಮಂತ್ರಾಕ್ಷತೆ ಇವುಗಳನ್ನು ಕಾಗದದ ತುಂಡುಗಳಲ್ಲಿ ಸುತ್ತಿ ಅಥವಾ ಚಿಕ್ಕ ಚಿಕ್ಕ ಪೊಟ್ಟಣಗಳಲ್ಲಿ ಹಾಕಿ ಇಡಬೇಕು.

ಇನ್ನೊಂದು ಮೊರವನ್ನು ಪಶ್ಚಿಮದ ದಿಕ್ಕಿಗೆ ತಿರುಗಿಸಿ ಈ ಮೊರದ ಮೇಲೆ ಮುಚ್ಚಿದಾಗ ಬಾಗಿನ ಸಿದ್ಧವಾಗುತ್ತದೆ. ಬಾಗಿನ ಕೊಡುವಾಗ ವಿಳ್ಳೇದೆಲೆ ಅಡಿಕೆ ದಕ್ಷಿಣೆ ಮತ್ತು ಯಾವುದಾದರೂ ಹಣ್ಣನ್ನು ಇಟ್ಟು ಬಾಗಿನ ಕೊಡುವ ಮುತ್ತೈದೆಯವರ ಮುಂದೆ ಇಡಬೇಕು. ಅವರಿಗೆ ಅರಿಸಿನ, ಕುಂಕುಮ, ಹೂಗಳನ್ನು ಕೊಟ್ಟು ನಿಮ್ಮ ಸೆರಗನ್ನು ನಿಮ್ಮ ಮೇಲೆ ಹೊದ್ದುಕೊಂಡು ಅದನ್ನೇ ಮರದ ಮೇಲೆ ಮುಚ್ಚಿಕೊಳ್ಳಬೇಕು. ಹೀಗೆ ಬಾಗಿನ ಕೊಡುವವರು 'ಮುತ್ತೈದೆ ಮುತ್ತೈದೆ ಬಾಗಿನ ತಗೋ' ಎಂದು ಹೇಳಬೇಕು. ತೆಗೆದುಕೊಳ್ಳುವವರು "ಸಾವಿತ್ರಿ ಸಾವಿತ್ರಿ ಬಾಗಿನ ಕೊಡು" ಎಂದು ಹೇಳಬೇಕು.

ಈ ಬಾಗಿನದಲ್ಲಿ ಸೀರೆ, ಕುಪ್ಪಸದ ಕಣ, ಅರಿಸಿನ ಕುಂಕುಮದ ಬಟ್ಟಲುಗಳು (ಬೆಳ್ಳಿ, ಹಿತ್ತಾಳೆ) ಮುಂತಾದವನ್ನೂ ಅಮ್ಮನವರ ವಿಗ್ರಹಗಳನ್ನೂ ಒಳಗೆ ಇಡಬಹುದು.

ಗೌರಿ ಪೂಜೆ ಮುಗಿದ ನಂತರ ವರನ ಕಡೆಯವರು ಹುಡುಗಿಯ ತಾಯಿಗೆ ಬಾಗಿನ ಕೊಡಬೇಕು. ಅದೇ ರೀತಿ ವಧುವು ವರನ ತಾಯಿಗೆ ಬಾಗಿನ ಕೊಟ್ಟು ವರನ ಅಕ್ಕ ತಂಗಿಯರಿಗೂ ಮತ್ತು ಗೌರಿ ಪೂಜೆ ಮಾಡಿಸಿದವರಿಗೂ ಕೊಡಬೇಕು. ಇನ್ನೊಂದು ಬಾಗಿನವನ್ನು ಅರುಂಧತಿ ನಕ್ಷತ್ರಕ್ಕೆ ಎಂದು ಪುರೋಹಿತರಿಗೆ ಕೊಡಬೇಕು. ಏಕೆಂದರೆ ವಸಿಷ್ಠರ ಪತ್ನಿಯಾದ ಅರುಂಧತಿಗೆ ಬಾಗಿನ ಏಕೆ ಕೊಡಬೇಕೆಂದರೆ ಆಕೆ ಮಹಾಸಾಧ್ವಿ, ವಸಿಷ್ಠರಿಗೆ ಸಂಸಾರದಲ್ಲಿ ಬೇಸರವಾದಾಗ ಈ ಸಂಸಾರವನ್ನು ಬಿಟ್ಟು ಆತ್ಮೋದ್ಧಾರ ಮಾಡಿಕೊಳ್ಳಿ ಎಂದು ಮನಸ್ಸನ್ನು ಬದಲಾಯಿಸಿದ ಪತಿವ್ರತೆ. ಹಿಂದೆ ವಧುವಿಗೆ ಅರುಂಧತಿ ನಕ್ಷತ್ರವನ್ನು ತೋರಿಸುತ್ತಿದ್ದರು.

ಈ ಎಲ್ಲಾ ಸಾಮಾನುಗಳನ್ನೂ ಮತ್ತು ಅಣಿತಟ್ಟೆ, ಕನ್ನಡಿ ಕಳಶ, ವರನ ಮನೆಯವರು ವಧುವಿಗೆ ಕೊಡಬೇಕಾದ ಸಾಮಾನಗಳು ವಧುವಿನ ಮನೆಯವರು ವರನಿಗೆ ಕೊಡಬೇಕಾದ ಸಾಮಾನುಗಳನ್ನೂ ಒಂದು ಕಡೆ ಇಟ್ಟುಕೊಳ್ಳಬೇಕು. ವರನ ಕಡೆಯವರು ವರಪೂಜೆಗೆ ಹೋಗುವಾಗ ವರನು ಪ್ಯಾಂಟ್ ಶರ್ಟ್ ಹಾಕಿಕೊಂಡಿದ್ದರೆ ಆತನ ಹೆಗಲ ಮೇಲೆ ಒಂದು ಶಲ್ಯವನ್ನು ಹಾಕಿ, ಹಣೆಗೆ ಕುಂಕುಮ ಇಟ್ಟು ಕತ್ತಿಗೆ ಒಂದು ಸರ ಮತ್ತು ಹೂವಿನ ಹಾರವನ್ನು ಹಾಕಿ ಕೈಯಲ್ಲಿ ಅರಿಶಿನ ಹಚ್ಚಿದ ತೆಂಗಿನ ಕಾಯಿ ಕೊಡಬೇಕು.

ವರ ಮತ್ತು ವಧುವಿನ ತಂದೆಯವರೂ ಸಹ ಹೆಗಲ ಮೇಲೆ ಶಲ್ಯ ಹಾಕಿಕೊಂಡಿರಬೇಕು. ವರನ ಕಡೆಯವರು ವರ ಪೂಜೆಗೆ ಬರುವ ಮೊದಲು ವಧುವಿನ ಮನೆಯವರು ಒಂದು ತಟ್ಟೆಯಲ್ಲಿ ಅರಳು, ಹಾರ, ಒಂದು ಅರಿಸಿನ ಹಚ್ಚಿದ ತೆಂಗಿನಕಾಯಿ ಇವುಗಳನ್ನು ಸಿದ್ಧಮಾಡಿಕೊಂಡು ಮಂಗಳ ವಾದ್ಯ ಸಮೇತ ಚಪ್ಪರದ ಹತ್ತಿರವೇ ವರನ ಕಡೆಯವರನ್ನು ಬರಮಾಡಿಕೊಂಡು ಅರಳನ್ನು ಅವರ ಮೇಲೆ ಹಾಕಿ ವರನಿಗೆ ಹೂವಿನ ಹಾರ ಹಾಕಿ, ತೆಂಗಿನ ಕಾಯಿ ಕೊಟ್ಟು ಅಲ್ಲಿರುವವರಿಗೆಲ್ಲ ಚಿಕ್ಕ ಹೂಹಾರ ಹಾಕಿ ವರನಿಗೆ ಹಸ್ತಲಾಘವ ಕೊಟ್ಟು ಒಳಗೆ ಕರೆತರಬೇಕು. ವರನ ಕಡೆಯವರು ಇಳಿದುಕೊಳ್ಳುವ ಕೊಠಡಿಯಲ್ಲಿ ವಧುವಿಗೆ ಕೊಡುವ ಸಾಮಾನುಗಳನ್ನು ಜೋಡಿಸಿಟ್ಟಿರಬೇಕು. ಆಮೇಲೆ ವರ ಪೂಜೆ ಸಂದರ್ಭದಲ್ಲಿ ಉಡುಗೊರೆ, ಐದು ಕೊಬ್ಬರಿ ಬಟ್ಟಲುಗಳನ್ನು ಕೊಟ್ಟು ವರನಿಗೆ ಆರತಿಮಾಡಬೇಕು.

ಒಂದು ತಟ್ಟೆಯಲ್ಲಿ ಅರಶಿನ ಕುಂಕುಮದ ಬಟ್ಟಲಿಟ್ಟು ವಧುವಿಗೆ ಅರಿಶಿನ ಕುಂಕುಮ ಮತ್ತು ಸೀರೆ ಕುಪ್ಪಸ ಕೊಡಬೇಕು. ವಧು ಆ ಸೀರೆಯನ್ನು ಉಟ್ಟ ನಂತರ ಇನ್ನೊಂದು ತಟ್ಟೆಯಲ್ಲಿ ಐದು ಕೊಬ್ಬರಿ, ಕಡಲೆ, ಐದು ಅಚ್ಚು ಬೆಲ್ಲ ಮತ್ತು ಅಲಂಕಾರ ಸಾಮಗ್ರಿಗಳನ್ನು ವಧುವಿಗೆ ಕೊಡಬೆಕು. ನಂತರ ವಧುವಿಗೆ ಆರತಿ ಮಾಡಬೇಕು.

ಮುಹೂರ್ತದ ದಿನ

ಬೆಳಿಗ್ಗೆ ಎರಡು ಕಡೆಯವರೂ ಸ್ವಲ್ಪ ಬೇಗನೆ ಎದ್ದು ಧಾರೆಗೆ ಸಿದ್ಧತೆ ಮಾಡಿಕೊಳ್ಳಬೇಕು. ಒಂದು ಕಡೆ ವಧುವಿಗೆ ಅವರ ಮನೆಯವರು ಗೌರಿ ಪೂಜೆ ಮಾಡಿಸಬೇಕು. ಇನ್ನೊಂದು ಕಡೆ ಮುತ್ತೈದೆಯರು ಗಂಗೆಯನ್ನು ತರಬೇಕು. ಅಂದರೆ ನಾಲ್ಕು ಬೆಳ್ಳಿ ಚೊಂಬು ಮತ್ತು ಒಂದು ಬಿಂದಿಗೆ (ವಧುವಿಗೆ ಕೊಡುವ) ತೆಗೆದುಕೊಂಡು ಹತ್ತಿರವಿರುವ ನಲ್ಲಿ (ಅಥವಾ ಬಾವಿ) ಹತ್ತಿರ ಹೋಗಿ ಅದರ ಕೆಳಗೆ ಈ ಪಾತ್ರೆಗಳನ್ನೆಲ್ಲ ಇಡಬೇಕು. ನಂತರ ನಲ್ಲಿಯನ್ನು ತೊಳೆದು ಗಂಗೆ ಪೂಜೆಯ ಸಂಕಲ್ಪವನ್ನು ಮಾಡಿ ಆ ನಲ್ಲಿಗೆ ಅರಿಸಿನ, ಕುಂಕುಮ, ಗೆಜ್ಜೆವಸ್ತ್ರ, ಅಕ್ಷತೆ ಇವುಗಳನ್ನು

ಹಚ್ಚಿ, ಧೂಪ, ದೀಪ ನೈವೇದ್ಯ ಮತ್ತು ಮಂಗಳಾರತಿ ಮಾಡಿದ ನಂತರ ಕೆಳಗಿರುವ ಬಿಂದಿಗೆ, ಚಂಬುಗಳಲ್ಲಿ ನೀರು ತುಂಬಿಸಿಕೊಂಡು ಅವುಗಳಿಗೂ ಸ್ವಲ್ಪ ಪೂಜೆ ಮಾಡಿ ಅವುಗಳ ಕಂಠಕ್ಕೆ ಹೂ ಸುತ್ತಬೇಕು.

ನೀವು ಮಂಗಳವಾದ್ಯದ ಸಮೇತ ಗಂಗೆ ಪೂಜೆಗೆ ಬರುವಾಗ ಒಂದು ಹೊಸ ಮೊರದಲ್ಲಿ ವಧುವಿಗೆ ಧಾರೆ ಎರೆಯಲು ಅಕ್ಕಿಯನ್ನು (ಪುರೋಹಿತರು ಹೇಳಿದಷ್ಟು) ಹಾಕಿ ತನ್ನಿ. ಅದರ ಮೇಲೂ ನೀರು ಚುಮುಕಿಸಬೇಕು. ನೀವು ಪೂಜೆ ಮುಗಿಸುವ ಹೊತ್ತಿಗೆ ಅಕ್ಕಿಯ ಮೇಲಿನ ನೀರು ಸೋರಿರುತ್ತದೆ. ಇದನ್ನು ಧಾರೆ ಮಂಟಪಕ್ಕೆ ತರಬೇಕು. ಅಲ್ಲಿರುವ ಎಲ್ಲ ಮುತ್ತೈದೆಯರಿಗೂ ಕುಂಕುಮ ಕೊಡಬೇಕು. ಈ ಎಲ್ಲ ಮುತ್ತೈದೆಯರನ್ನು ಮಂಗಳವಾದ್ಯದೊಡನೆ ವಿವಾಹ ಮಂಟಪಕ್ಕೆ ಕರೆತರಬೇಕು. ಈ ಎಲ್ಲ ಕಾರ್ಯಗಳಲ್ಲಿ ವಧುವಿನ ತಾಯಿ ಕೂಡ ಇರಬೇಕು.

ಕಾಶಿಯಾತ್ರೆ

ಗಂಡಿನ ಕಡೆಯವರು ವಧುವಿಗೆ ಗೌರಿ ಪೂಜೆ ಮಾಡಿಸಿದ ನಂತರ ಕಾಶಿಯಾತ್ರೆ. ಪೂಜೆಯಾದ ನಂತರ ವರನ ತಾಯಿಗೆ ಮೊರದ ಬಾಗಿನವನ್ನು ಕೊಡಿಸಬೇಕು (ಏಕೆಂದರೆ ಮದುವೆಯ ನಂತರ ವಧು ಅತ್ತೆಗೆ ಬಾಗಿನ ಕೊಡುವ ಹಾಗಿಲ್ಲ). ಗೌರಿ ಪೂಜೆಯಾದ ನಂತರ ವಧುವಿನ ತಾಯಿ ವಧುವಿಗೆ ಒಂದು ತುತ್ತು ಹಾಲು ಅನ್ನವನ್ನು ಹಾಕಬೇಕು. ಧಾರೆಗೆ ಕರೆದುಕೊಂಡು ಹೋಗುವವರೆಗೆ ವಧು ಗೌರಿ ಧ್ಯಾನ ಮಾಡುತ್ತಾ ಇರಬೇಕು.

ಧಾರೆ

ಧಾರೆ ನಡೆಯುವ ಸಮಯದಲ್ಲಿ ವಧುವಿನ ಕಡೆಯವರು ಅಕ್ಕಿ ಹಿಟ್ಟು ಅಥವಾ ಗೋಧಿ ಹಿಟ್ಟಿಗೆ ಸ್ವಲ್ಪ ಅರಿಸಿನ ಹಾಕಿ ಗಟ್ಟಿಯಾಗಿ ಕಲೆಸಿ ಅದನ್ನು ಒಂದು ತಟ್ಟೆಗೆ 16 ದೀಪದ ಆಕಾರ ಮಾಡಿ, ಆ ದೀಪವನ್ನು ಹಚ್ಚಿ ಹಿಡಿದುಕೊಳ್ಳಬೇಕು. ಧಾರೆ ಮುಗಿದು ಮಾಂಗಲ್ಯ ಧಾರಣೆ ಆದ ಮೇಲೆ ಮತ್ತೈದೆಯರು ವಧುವಿನ ಕೊರಳಲ್ಲಿರುವ ಗಂಟಿಗೆ ಅರಿಸಿನ ಮತ್ತು ಕುಂಕುಮ ಇಟ್ಟು ಮುತ್ತೈದೆಯಾಗಿರು ಎಂದು ಹರಸಿ ಅಕ್ಷತೆ ಹಾಕಿ ಬರಬೇಕು.

ಸಾಗೋಲಿ

ಪುರೋಹಿತರು ಹೇಳಿದ ಹಾಗೆ ಐದು ಬಾಳೆ ಎಲೆಗಳನ್ನು ಒಂದರ ಮುಂದೆ ಒಂದು ಇಟ್ಟು ಅದರಲ್ಲಿ ಕಡ್ಲೇಬೇಳೆ, ಹಪ್ಪಳ, ಎಲೆ ಅಡಿಕೆ ಇಟ್ಟು ದೀಪ ಹಚ್ಚಬೇಕು. ವಧುವಿನ (ಅಣ್ಣ, ತಮ್ಮ) ತಮ್ಮ ಯಾರಾದರೂ ಒಬ್ಬರು 1 ಚಾಕುವಿಗೆ ಹೂ ಸುತ್ತಿ ನಿಂಬೆ ಹಣ್ಣು ತುದಿಗೆ ಸಿಕ್ಕಿಸಿ ಅದನ್ನು ಹಿಡಿದುಕೊಳ್ಳಬೇಕು. ಇನ್ನು 5 ಜನ ಮುತ್ತೈದೆಯರು ಮತ್ತು ವಧುವಿನ ತಾಯಿ ಇಷ್ಟು ಜನರು ಮಧ್ಯದಲ್ಲಿ ಒಂದು ಕಳಸ ಇಟ್ಟು, ಇದನ್ನು ಸುತ್ತುತ್ತಾರೆ ಇದಕ್ಕೆ ಹೊಳಲು ಸುತ್ತುವುದೆಂದೇ ಹೇಳುತ್ತಾರೆ.

ಸಪ್ತಪದಿ

ಇದರಲ್ಲಿ ವಧು–ವರರು 7 ಹೆಜ್ಜೆಗಳನ್ನು ದಾಟಿ ಅದರ ಒಂದೊಂದು ಹೆಜ್ಜೆಗೂ ಒಂದು ಸಂಕಲ್ಪ ಮಾಡುತ್ತಾರೆ (ಇದನ್ನು ಪುರೋಹಿತರು ಮಾಡಿಸುತ್ತಾರೆ) ಸಪ್ತಪದಿ ತುಳಿದ ಮೇಲೆ ಹೆಣ್ಣಿನ ಗೋತ್ರ ಬದಲಾಗುತ್ತದೆ.

1) ಒಂದನೇ ಹೆಜ್ಜೆಗೆ ಅನ್ನಕ್ಕಾಗಿ ನನ್ನನ್ನು ಅನುಸರಿಸುವವಳಾಗು

2) ಎರಡನೇ ಹಜ್ಜೆ ಬಲವೃದ್ಧಿಗಾಗಿ

3) ಮೂರನೇ ಹೆಜ್ಜೆ ಧನದ ಸಮೃದ್ಧಿಗಾಗಿ

4) ನಾಲ್ಕನೇ ಹೆಜ್ಜೆ ಮಾಯೆಯನ್ನು ಮೆಟ್ಟಿ ನಡೆಯಲು

5) ಐದನೇಯ ಹೆಜ್ಜೆ ಸಂತಾನ ಲಾಭಕ್ಕಾಗಿ

6) ಆರನೇ ಹೆಜ್ಜೆ ಒಳಿತು ಉಂಟುಮಾಡಲು

7) ಏಳನೇ ಹೆಜ್ಜೆ ಪರಸ್ಪರ ಅರಿತು ನಡೆಯಲು

ಉರುಟಣೆ ಉಯ್ಯಾಲೆ

ಇವೆಲ್ಲ ಹಿಂದೆ ನಡೆಯುತ್ತಿತ್ತು. ವರನ ಕೈಯಲ್ಲಿ ಚೆಂಡು ಕೊಟ್ಟು ಎದುರು-ಬದರು ಕುಳಿತು ಆಡುವುದು, ಉಯ್ಯಾಲೆ, ಹಪ್ಪಳವನ್ನು ಇಬ್ಬರೂ ಒಬ್ಬರಿಗೊಬ್ಬ್ರು ಬೆನ್ನಿಗೆ ಇಟ್ಟು ಗುದ್ದುವುದು. ಇದು ಮನರಂಜನೆಯ ಪ್ರದರ್ಶನ ಇರಬಹುದು. ಈಗ ಇದೆಲ್ಲ ಕಣ್ಮರೆಯಾಗಿದೆ.

ಭೂಮದ ಊಟ

ವರ ಮತ್ತು ವಧುವಿಗೆ ಜೊತೆಯಲ್ಲಿ ಊಟ ಹಾಕುವುದೇ ಭೂಮದ ಊಟ. ಒಂದು ಉದ್ದವಾದ ಮಣೆಹಾಕಿ ಅದರ ಮೇಲೆ ಹೊಸ ಬಟ್ಟೆ (ಶಾಲು, ಟವೆಲ್) ಹಾಕಿ ಅದರ ಮುಂದೆ ನಾಲ್ಕು ಬಾಳೆ ಎಲೆಯನ್ನು ಒಂದರಮೇಲೊಂದು ಹಾಕಿ ಅಡುಗೆಯನ್ನು ಬಡಿಸುತ್ತಾರೆ. ಅದಕ್ಕೆ ಮೊದಲು ಎಲೆಯ ಸುತ್ತ ಚಿತ್ತಾರದ ರಂಗವಲ್ಲಿ ಬರೆದು ಎರಡು ದೀಪಗಳನ್ನು ಹಚ್ಚಿಡಬೇಕು. ಇಬ್ಬರನ್ನೂ ಕೂಡಿಸಿ ಎಲೆಯ ಮೇಲೆ ಭಕ್ಷ್ಯಗಳನ್ನು ಅಂದರೆ ಉಂಡೆ, ಚಕ್ಕುಲಿ, ಚಿರೋಟಿ, ಫೇಣಿ, ಒಬ್ಬಟ್ಟು, ಮೈಸೂರುಪಾಕು ಮುಂತಾದುವುಗಳನ್ನು ಬಡಿಸಿ ಪರಿಶೇಚನೆ ಮಾಡಿದ ಮೇಲೆ ಹುಡುಗಿ ತಂದೆ ವರನಿಗೆ ತುಪ್ಪದ ಆಪೋಶನ ಹಾಕಬೇಕು. ಹಣೆಗೆ ಕುಂಕುಮ ಇಟ್ಟು ಆರತಿ ಮಾಡಿ ಆಮೇಲೆ ಊಟ ಮಾಡುವಾಗ ಒಬ್ಬರ ಎಲೆ ಪದಾರ್ಥವನ್ನು ಇನ್ನೊಬ್ಬರಿಗೆ ತಿನ್ನಿಸುವ ಪದ್ಧತಿ (ಅಂದರೆ ಇಬ್ಬರೂ ಒಂದೇ ಎಂದು ತಿಳಿದುಕೊಳ್ಳಲು).

ಊಟದ ಮಧ್ಯದಲ್ಲಿ ಒಂದು ಚಿಕ್ಕ ತಪ್ಪಲೆ, ಸೌಟು ತಂದು ಅದರಲ್ಲಿ ಪಾಯಸ ಹಾಕಿ (ತಪ್ಪಲೆಗೆ ಸುಣ್ಣ ಹಚ್ಚಿರಬೇಕು) ಅದನ್ನು ವಧುವಿನ ತಾಯಿಯು ವರನಿಗೆ ಬಡಿಸಲು ಹೋಗಬೇಕು. ಬಡಿಸುವಾಗ ವರನು ಕೈಹಿಡಿದುಕೊಳ್ಳಬೇಕು ಮತ್ತು ಅವರು ಕೈಬಿಡಿಸಿಕೊಳ್ಳಲು ಯತ್ನಿಸುತ್ತಾ ತಮ್ಮ ಯಜಮಾನರ ಹೆಸರು ಹೇಳಬೇಕು. ಇವೆಲ್ಲಾ ಸುಮ್ಮನೆ ತಮಾಷೆಗೆ, ಪರಸ್ಪರ ಆತ್ಮೀಯತೆ ಹೆಚ್ಚಲು ಇರಬೇಕು. ಇದಾದ ನಂತರ ಮನೆ ತುಂಬಿಸಿಕೊಡುವುದು.

ವಧುವನ್ನು ಹಸೆಯ ಮೇಲೆ ಕೂರಿಸಿ ವಧುವಿನ ಮನೆಯಿಂದ ಏನೇನು ತಿಂಡಿಗಳನ್ನು ಕೊಡಬೇಕು ಎಂದು ಸಿದ್ಧಪಡಿಸಿಕೊಂಡಿರುತ್ತಾರೋ (ಹುರಿಗಾಳು, ಚಕ್ಕುಲಿ, ಕೋಡುಬಳೆ ಹಾಗೂ ಕಡಲೆ, ಕಡ್ಲೆಕಾಯಿ, ಎಳ್ಳು, ಪುರಿ, ಪುಳ್ಳಂಗಾಯಿ ಪದಾರ್ಥಗಳಿಂದ ಮಾಡಿದ ಐದು ಬಗೆಯ ಉಂಡೆಗಳು) ಅವೆಲ್ಲವನ್ನೂ ತಟ್ಟೆಗಳಲ್ಲಿ ಇಡಬೇಕು. ಅರಿಸಿನ, ಕುಂಕುಮ, ಸೀರೆ, ಕುಪ್ಪುಸದ ಕಣ, ಹೂ, ಹಣ್ಣು, ಅರಿಸಿನದ ಕೊಂಬು, ಐದು ಸೇರು ಅಕ್ಕಿ, ಐದು ಅಚ್ಚು ಬೆಲ್ಲ ಇವುಗಳನ್ನು ಬೇರೆ ಬೇರೆ ತಟ್ಟೆಗಳಲ್ಲಿಟ್ಟು ಮಡಿಲು ತುಂಬಬೇಕು. ಒಂದು ತಟ್ಟೆಯಲ್ಲಿ ಒಂದು ಚಿಕ್ಕ ತೊಟ್ಟಿಲು ಇಟ್ಟು ಎರಡು

ಚಂದನದ ಗಂಡು ಹೆಣ್ಣು ಬೊಂಬೆಗಳಿಗೆ ಅಲಂಕಾರ ಮಾಡಿ ಪುರೋಹಿತರಿಗೆ ಮುಂದೆ ಇಡಬೇಕು. ಪುರೋಹಿತರು ಅವುಗಳನ್ನು ತೊಟ್ಟಿಲ ಒಳಗೆ ಇಟ್ಟು ವಧು ವರರ ಕೈಲಿ ತೂಗಿಸುತ್ತಾರೆ.

ವಧುವಿನ ಕಡೆಯವರು ವಧುವನ್ನು ವರನ ಮನೆಗೆ ಕರೆದುಕೊಂಡು ಬರುವ ಹೊತ್ತಿಗೆ ವರನ ಮನೆಯ ಬಾಗಿಲ ಮುಂದೆ ಎರಡು ಕಡೆ ದೀಪಗಳನ್ನು ಹಚ್ಚಿಟ್ಟಿರಬೇಕು. ಹೊಸ್ತಿಲಿನ ಮೇಲೆ ಒಂದು ಅಕ್ಕಿ ಅಳೆಯುವ ಸೇರಿಗೆ ಮುಕ್ಕಾಲು ಭಾಗ ಅಕ್ಕಿ ತುಂಬಿ ಇದರ ಮೇಲೆ ಒಂದು ಬೆಲ್ಲದ ಅಚ್ಚನ್ನು ಇಡಬೇಕು. ಅದರ ಮೇಲೆ ಒಂದು ನಿಂಬೆ ಹಣ್ಣು ಇಟ್ಟಿರಬೇಕು. ವಧು ವರ ಇಬ್ಬರೂ ಬಂದಾಗ ಪುರೋಹಿತರು ಮಂತ್ರ ಹೇಳಿದ ಮೇಲೆ ವಧು ಸೇರನ್ನು ತನ್ನ ಬಲ ಹೆಜ್ಜೆಯಿಂದ ಜೋರಾಗಿ ತಳ್ಳಿ ಮನೆಯ ಒಳಗಡೆ ಬರಬೇಕು. ಆಗ ಇಬ್ಬರೂ ಕೈ ಹಿಡಿದುಕೊಂಡಿರಬೇಕು. ಇವಳು ಲಕ್ಷ್ಮಿ ತರಹ ಮನೆಗೆ ಬಂದು ಐಶ್ವರ್ಯ, ಸಂಪತ್ತು ತುಂಬಿ ಚಲ್ಲಲಿ ಮತ್ತು ಮನೆಯವರ ಯೋಗಕ್ಷೇಮಗಳನ್ನು ನಿರ್ವಹಿಸಲಿ ಎಂದು ಇದರ ಅರ್ಥ.

ಮನೆಯ ಒಳಗೆ ಬಂದ ಮೇಲೆ ಇಬ್ಬರೂ ದೇವರ ಮನೆಗೆ ಹೋಗಿ ದೇವರಿಗೆ ಕೈಮುಗಿದು ನಮಸ್ಕಾರ ಮಾಡಿ ಅಮ್ಮಿನ ಕಂದಲು (ಲಕ್ಷ್ಮಿ ಕಂದಲು) ತೆಗೆದು ನೋಡಬೇಕು. ವರನ ತಾಯಿ ಅದಕ್ಕೆ ಮೊದಲೇ ಚಿನ್ನದ ಆಭರಣ ಅಥವಾ ದುಡ್ಡನ್ನು ಹಾಕಿರಬೇಕು. ನಂತರ ದೇವರ ಗೂಡಿನ ಮೇಲೆ ಚಟ್ಟು ಬಡಿಯಬೇಕು. ಇದಾದ ಮೇಲೆ ಸೊಸೆಯು ತನ್ನ ಕೈಯನ್ನು ಅತ್ತೆಯ ಸೆರಗಿಗೆ ಒರಸಬೇಕು. ಚಟ್ಟು ಬಡಿಯುವುದಂದರೆ ಅರಿಸಿನ, ಸುಣ್ಣದ ನೀರನ್ನು ಕೈಯಲ್ಲಿ ಅದ್ದಿಕೊಂಡು ಅಂಗೈಯನ್ನು ನೇರವಾಗಿ ಇಟ್ಟುಕೊಂಡು ಐದು ಸಲ ತೋರಿಸಿರುವ ರೀತಿ ಗೋಡೆಗೆ ಒತ್ತಬೇಕು.



ವಧುವನ್ನು ಒಪ್ಪಿಸುವುದು

ವಧುವಿನ ಕಡೆಯವರು ವಧುವಿಗೆ ಕೊಟ್ಟಿರುವ ಬೆಳ್ಳಿ ಸಾಮಾನು, ತಿಂಡಿಗಳು ಮುಂತಾದ ಎಲ್ಲ ಸಾಮಾನುಗಳನ್ನೂ ತೆಗೆದುಕೊಂಡು ಹಸೆಯ ಮಣೆಯ ಮುಂದೆ ಇಡಬೇಕು. ಈಗ ಹೆಣ್ಣನ್ನು ವರನ ಕಡೆಯ ದೊಡ್ಡವರಿಗೆ (ವರನ ತಂದೆ ತಾಯಿ ಮುಂತಾದವರು) ವಧುವನ್ನು ಒಪ್ಪಿಸಿ ಕೊಡುತ್ತಾರೆ ಮತ್ತು ಅವರು ಕೊಟ್ಟಿರುವ ಬೊಂಬೆಗಳನ್ನು ತೊಡೆಯ ಮೇಲೆ ಮಲಗಿಸಿ ಶಾಸ್ತ್ರ ಮಾಡಿ ಬಟ್ಟೆಯಲ್ಲಿಟ್ಟು ತೂಗುತ್ತಾರೆ. ಒಳ್ಳೆಯ ಸಂತಾನವಾಗಲೆಂದು ಇದರ ಅರ್ಥವಾಗಿದೆ. ಇದಾದ ಮೇಲೆ ವಧುವಿನ ಕಡೆಯವರಿಗೆ ಕುಡಿಯುವುದಕ್ಕೆ ಪಾನೀಯಗಳನ್ನು ಮತ್ತು ತಾಂಬೂಲ ಕೊಟ್ಟು ಉಪಚರಿಸಬೇಕು. ಈಗಿನ ಕಾಲದಲ್ಲಿ ಮದುವೆ ದಿನ ಸಾಯಂಕಾಲ ರಿಸಪ್ಷನ್ ಮಾಡುತ್ತಾರೆ. ಇದು ಸಂಪ್ರದಾಯದಲ್ಲಿಲ್ಲವಾದ್ದರಿಂದ ಇದರ ಬಗ್ಗೆ ವಿವರಣೆ ಬರೆದಿಲ್ಲ.

ಮೊದಲ ರಾತ್ರಿ

ಇದನ್ನು ಸಹ ಲಕ್ಷ್ಮಿನಾರಾಯಣ ಸ್ವರೂಪವೆಂದು ಒಂದು ರೂಂನಲ್ಲಿ ಮಂಚಕ್ಕೆ ಅಲಂಕಾರ ಮಾಡಿ ಹೊಸ ಹಾಸಿಗೆ ಅದಕ್ಕೆ ಬೇಕಾದ ಬೆಟ್‌ಶೀಟ್ ರಗ್ಗು ಇದನ್ನೆಲ್ಲ ತಂದು ಹಾಸಿರುತ್ತಾರೆ. ಇದರ ಜೊತೆಗೆ ಹೂವಿನ ಅಲಂಕಾರಗಳನ್ನು ಮಾಡಿ ಜೊತೆಗೆ ಹಾಲು, ಹಣ್ಣು, ಚಕ್ಕುಲಿ, ಉಂಡೆಗಳ ಗೋಪುರಗಳನ್ನು ಇಟ್ಟು ಒಳ್ಳೆ ಸುಗಂಧದ ಊದಿನ ಕಡ್ಡಿಗಳನ್ನು ಹಚ್ಚುತ್ತಾರೆ. ವಧು-ವರರನ್ನು ಹಾಸಿಗೆ ಮೇಲೆ ಕೂಡಿಸಿ ಇಬ್ಬರಿಗೂ ಹಣೆಗೆ ಕುಂಕುಮ ಇಟ್ಟು ಆರತಿ ಮಾಡಿ ವಧುವಿಗೆ ಸೀರೆ ಓದಿಸಿ ಆಮೇಲೆ ಒಂದು ಚಿಕ್ಕ ಮಗುವನ್ನು ಹಾಸಿಗೆಯಲ್ಲಿ ಮಲಗಿಸುತ್ತಾರೆ. ಇದರ ಅರ್ಥ ಮುಂದೆ ಬರಬೇಕಾದ ಸಂತಾನವು ಪವಿತ್ರವಾಗಿರಲೆಂದು ಒಳ್ಳೆ ಗುಣಗಳನ್ನು ಹೊಂದಿರಲಿ ಎಂಬುದಾಗಿದೆ.

ಬೀಗರ ಔತಣ

ಮಾರನೆಯ ದಿನ ವರನ ಮನೆ ಅಥವಾ ಛತ್ರದಲ್ಲಿ ಬೀಗರ ಔತಣ ಏರ್ಪಡಿಸುತ್ತಾರೆ ಮತ್ತು ಊಟದ ನಂತರ ಉಡುಗೊರೆ ಕೊಡುತ್ತಾರೆ. ಇಲ್ಲಿಗೆ ಮದುವೆ ಮುಗಿಯುತ್ತದೆ.

ಕಿವಿಮಾತು

ಮದುವೆ ಎಂದರೆ ಗಂಡು ಹೆಣ್ಣು ಪರಸ್ಪರರನ್ನು ಅರಿತುಕೊಂಡು ಹೆಣ್ಣು ನಮ್ಮ ಧರ್ಮದಂತೆ ಗಂಡನ ಮನೆಯ ಪ್ರತಿಯೊಂದು ಚಟುವಟಿಕೆಯಲ್ಲೂ ಭಾಗಿಯಾಗಿ ಮನೆಯನ್ನು ಉದ್ಧಾರ ಮಾಡಿ ತವರು ಮನೆಗೆ ಕೀರ್ತಿ ತರಬೇಕು. ವಿದ್ಯಾವಂತನೂ, ಕೀರ್ತಿವಂತನೂ ಆದ ಮಗನನ್ನು ಹೆತ್ತ ತಂದೆ ತಾಯಿಗಳು ವಂಶಾಭಿವೃದ್ಧಿಯನ್ನೇ ಗುರಿಯಾಗಿಟ್ಟು ಕೊಂಡಿರುತ್ತಾರೆ. ಆದರೆ ಮನುಷ್ಯನು, ದೇವ, ಋಷಿ, ಪಿತೃ ಋಣವನ್ನು ತೀರಿಸಲು ಗೃಹಸ್ಥಾಶ್ರಮವು ಅತಿ ಮುಖ್ಯವಾದುದು. ಜೀವನದಲ್ಲಿ ಅತಿ ವೈಭವದ ಹಾಗೂ ಮರೆಯಲಾಗದ ಅತಿ ದೊಡ್ಡ ಸಮಾರಂಭವೆಂದರೆ ವಿವಾಹವೇ ಆಗಿದೆ. ದೊಡ್ಡವರು ಚಿಕ್ಕವರನ್ನು ಈ ವಿವಾಹ ಬಂಧನದಲ್ಲಿ ಸೇರಿಸಲು ಅತಿ ಕುತೂಹಲಗಳಾಗಿರುತ್ತಾರೆಂದೇ ಹೇಳಬಹುದು. ಈ ಗೃಹಸ್ಥಾಶ್ರಮಕ್ಕೆ ಗೃಹವೇ ಆಧಾರ. ಈ ಸಂಸಾರ ರಥಕ್ಕೆ ಗಂಡು ಹೆಣ್ಣು ಇಬ್ಬರೂ ಎರಡು ಸಮಾನ ಚಕ್ರಗಳು. ಯಾವ ಒಂದು ಚಕ್ರ ಊನವಾದರೂ ಸಂಸಾರ ರಥವು ಜರುಗುವುದು ಕಷ್ಟ. ಈ ಎರಡು ಚಕ್ರಗಳಲ್ಲಿ ಮೇಲು ಕೀಳೆಂಬ ಭೇದವಿಲ್ಲ. ಸ್ತ್ರೀಗೆ ಸಮಾನ ಹಕ್ಕಿಲ್ಲವೆಂದು ಹೇಳುವ ನಾವು ಒಂದು ದೃಷ್ಟಿಯಿಂದ ನಮ್ಮ ಹಕ್ಕುಗಳನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲವೇನೋ ಎಂದೆನಿಸುತ್ತದೆ.

ಗಂಡು ಹೆಣ್ಣುಗಳ ಸಹಕಾರ ಜೀವನವೇ ಸಂಸಾರ. ಈ ಸಾಗರಕ್ಕೆ ಧುಮುಕುವ ಮುನ್ನ ಹೆಣ್ಣು ಮತ್ತು ಗಂಡುಗಳಿಗೆ ವಿಧಿಸುವ ಧರ್ಮದ ಕಟ್ಟಳೆಯ ವಿಧಿ ವಿಧಾನಗಳೇ 'ವಿವಾಹ'. ಇಂತಹ ವಿವಾಹಕ್ಕೆ ಅಳವಡಿಸಿರುವ ಶಾಸ್ತ್ರ ಸಂಪ್ರದಾಯಗಳು ಅತಿ ಮಹತ್ವದಿಂದಲೇ ಕೂಡಿವೆ ಮತ್ತು ಇದರ ಜೊತೆಯಲ್ಲಿ ಹಾಡುವ ಹಾಡುಗಳು ಹೆಂಗಸರಿಗೆ ಅತಿ ಮುಖ್ಯ ಅಂಗವಾಗಿವೆ. ಈ ಹಾಡುಗಳು ಕಾಲ ಕ್ರಮದಲ್ಲಿ ನಿಂತುಹೋಗಿ ಅರ್ಥವಿಲ್ಲದ ಮೈಕ್‌ಗಳು, ಚಕಪಕ ಉರಿಯುವ ವಿದ್ಯುದ್ದೀಪಗಳೇ ಅಲ್ಲದೆ ಹೆಂಗಳೆಯರಿಗೆ ಇತ್ತೀಚಿನ ಅಲಂಕಾರವಾದ ಉಡಿಗೆ ತೊಡಿಗೆಗಳನ್ನು ತೊಡಬೇಕೆಂಬ ಚಿಂತೆಯೇ ಆಗಿರುತ್ತದೆ. ಹಿಂದಿಗಿಂತ ಹೆಚ್ಚಿನ ಹಣ ಪೋಲಾದರೂ ಒಂದೇ ದಿನದ ಮದುವೆಯಲ್ಲಿ ಶಾಸ್ತ್ರಗಳ ಆಚರಣೆಗೆ ಸಮಯವೇ ಸಾಲದಾಗಿದೆ. ಒಂದು ಸಣ್ಣ ಶಾಸ್ತ್ರವೂ

ಗೊತ್ತಿಲ್ಲದೆ ಒಂದು ವಿಧವಾದ ಗದ್ದಲ, ಗೊಂದಲ ಢಾಂಬಿಕತೆಯ ಮದುವೆಗಳೇ ನಡೆಯುವ ಪರಿಪಾಠವಾಗಿಬಿಟ್ಟಿದೆ. ಶಾಸ್ತ್ರ ಸಂಪ್ರದಾಯದಂತೆ ಮಲ್ ನೀರು, ಗೋಧಿಕಲ್ ಶಾಸ್ತ್ರ, ಮನೆ ತುಂಬಿಸಿಕೊಡುವುದು ಇವೆಲ್ಲ ಇವೆ. ಹೆಣ್ಣು ತೌರು ಮನೆ ಬಿಟ್ಟು ಹೋಗುವಾಗ ಕರುಳು ಮಿಡಿಯುತ್ತದೆ ಮತ್ತು ತವರಿನ ಉಡುಗೊರೆ ಮೂರು ಕಾಸಿನದರೂ ಅವಳ ಪಾಲಿಗೆ ಬೆಲ ಕಟ್ಟಲಾದಷ್ಟು ದೊಡ್ಡದಾಗಿರುತ್ತದೆ. ತೌರಿನ ಹಾರೈಕೆಯೇ ಅವಳಿಗೆ ಶ್ರೀರಕ್ಷೆ. 'ಗೃಹಿಣಿಗೆ ಮುಪ್ಪಾದರೂ ತೌರಿಗೆ ಮುಪ್ಪಿಲ್ಲ' ಎಂಬುದು ಜನಪದ ಕವಿಯ ಅನಿಸಿಕೆ. ಇದರ ಅರ್ಥವೇ ಮಲ್ ನೀರು. ಇದೇ ರೀತಿ ಎಲ್ಲ ಶಾಸ್ತ್ರಕ್ಕೂ ಅರ್ಥಗಳಿವೆ.

ಹಸೆ ಕರೆದ ಹಾಡು (ಹೆಣ್ಣಿಗೆ)

ರಾಗ : ಖರಹರಪ್ರಿಯ; ಆದಿತಾಳ

ಗಿರಿ ನಂದನೀ ಬಾರೇ ಹಸೇಗೆ ॥
ಕರುಣಾಕರೀ ಪರಮೇಶ್ವರಿ ॥ ಪಲ್ಲವಿ ॥
ಶರಣಾಗತ ರಕ್ಷಕಿಯೆ
ಶರಧೀಶಯನಗನುಜೆಯೇ ಗಿರಿಜೆಯೇ ॥ ಅನುಪಲ್ಲವಿ ॥
ಇಂದುಧರನ ತಂದೆಯಾಗದೊಳ್ ।
ನಿಂದಿಸುತ್ತಲಿರೆ । ನೊಂದು ಮನದೊಳು ।
ಅಂದು ಅಗ್ನಿಯೊಳ್ । ನಿಂದು ದಹಿಸಿ ಬಂದೆ
ಚಂದದಿ ಗಿರಿರಾಜನೊಳ್ ಜನಿಸಿದೆ ॥ 1 ॥
ಮಾರಹರನರ್ಧಾಂಗಿಯೇ । ನಾರಿಮಣಿಯೇ ನೀ
ಘೋರಕಾನನ । ಸೇರಿ ಬಳಲಿದೆ
ಮಾರಜನಕ ವೆಂಕಟೇಶನ ಸಹೋದರಿಯೆ
ಮಾರವೈರಿ ಬಂದಿಹಾ । ಬಾರೆ ನೀ ॥

ಹಸೆ ಕರೆದ ಹಾಡು (ಗಂಡಿಗೆ)

ರಾಗ ಕುರಂಜಿ ಆದಿತಾಳ

ಮುರಳೀಧರಾ । ಪರಮ ದಯಾಕರ ॥ ಪಲ್ಲವಿ ॥
ಹೊಳೆವ ಪೀತಾಂಬರ । ಕೊರಳ ತುಳಸೀ ಹಾರ
ಧರಿಸಿದೆ ಶಂಖ ಚಕ್ರ । ಗದಾಬ್ಜಕರ ॥ 1 ॥
ಗರುಡ ಹನುಮಂತರು । ಭರದಿ ಸೇವಿಪರೂ
ಮುರಳಿ ಮೋಹ ಕರುಣಾ । ಸಿರಿ ರಮಣಾ ॥2॥

ಆರತಿ ಹಾಡು

ಆರತಿ ಮಾಡಿ ಶ್ರೀ ದೇವಿಗೆ, ಭೂದೇವಿಗೆ
ಶ್ರೀನಿವಾಸನಿಗೆ ಜಯ ಆರತಿ ಮಾಡಿ
ದಶರಥ ಕಂದನ ಸೀತಾರಾಮಗೆ
ವಿಶ್ವಭರಿತ ಪರಿಪಾಲಗೇ - ಜಯ ॥ಆರತಿ॥

ಎಣ್ಣೆ ಒತ್ತಿದ ಹಾಡು

ರಾಗ : ಜಂಜೂಟ **ಮಿಶ್ರಛಾಪು**

ಒತ್ತಿದರೆಣ್ಣೆಯ ಹರಿಗೇ । ನರಹರಿಗೆ ದೊರೆಗೆ
ಕೇಸರಿ ರೂಪನಿಗೆ । ಕೇಸರಂಜನ ತೈಲಗಳ
ವಸುದೇವ ಸುತಗೇ । ಹರಿಗೇ ದೊರೆಗೇ ॥1॥
ಕಾಮಿನಿಯರೆಲ್ಲ ಕೂಡಿ । ಕಾಮನಯ್ಯನಶಿರದಿ ॥
ಪ್ರೇಮದಿಂದಲಿ ಸುತ್ರಾಮ ಶ್ರೀ ಹರಿಗೇ ॥2॥

ಗರ್ಭಿಣಿ

ತಾಯಿಯಾಗುವುದು ಒಂದು ಮಹತ್ತರ ಘಟ್ಟ.. ಅವಳ ಮಾನಸಿಕ ಮತ್ತು ದೈಹಿಕ ಆರೋಗ್ಯಕರ ದೃಷ್ಟಿಯಿಂದ ಮುಖ್ಯವಾಗಿರುತ್ತದೆ. ಗರ್ಭಿಣಿಗೆ ಏಳನೆಯ ತಿಂಗಳಲ್ಲಿ ಸೀಮಂತ, ಬಳೆ ತೊಡಿಸುವುದು ಅರಿಸಿನ ಕುಂಕುಮ ಕೊಡುವುದು ಮುಂತಾದವುಗಳನ್ನು ಮಾಡುವುದು ಸಂಪ್ರದಾಯ. ಇದನ್ನು ಇಬ್ಬರ ಮನೆಯವರೂ ಈ ರೀತಿ ಮಾಡುತ್ತಾರೆ. ಒಂದು ಒಳ್ಳೆಯ ದಿನವನ್ನು ನೋಡಿ ಇಬ್ಬರನ್ನೂ ಹಸೆಯ ಮೇಲೆ ಕೂರಿಸಿ ಎಣ್ಣೆ ಶಾಸ್ತ್ರಮಾಡಿ ನೀರು ಹಾಕಬೇಕು. ಗರ್ಭಿಣಿಯನ್ನು ಹಸೆ ಮೇಲೆ ಕೂಡಿಸಿ ಬಳೆ, ಸೀರೆ, ಕುಪ್ಪಸಗಳನ್ನು ಕೊಟ್ಟು ಬಳೆ ತೊಡಿಸುತ್ತಾರೆ. ಅವಳ ಕೈಯಲ್ಲೂ ಸಹ ಐದು ಜನ ಮುತ್ತೈದೆಯರಿಗೆ ಬಳೆ, ಕಣ, ತೆಂಗಿನಕಾಯಿ ಹಣ್ಣು ವಿಳ್ಳೇದೆಲೆ ದಕ್ಷಿಣೆ ಇವುಗಳನ್ನು ಕೊಡುತ್ತಾರೆ.

ಗರ್ಭಿಣಿ ಮತ್ತು ಅವಳ ಗಂಡನನ್ನು ಹಸೆಯ ಮೇಲೆ ಕೂರಿಸಿ ಫಲಪೂಜೆ ಆರತಿ ಮಾಡುತ್ತಾರೆ. ಊಟ ವಗ್ಯೆರೆ ಮುಗಿದ ನಂತರ ಸಾಯಂಕಾಲ ಗರ್ಭಿಣಿ ಒಬ್ಬಳನ್ನೇ ಸುತ್ತಲೂ ರಂಗೋಲಿ ಇಟ್ಟು ಅಲಂಕರಿಸಿದ ಹಸೆಮೇಲೆ ಕೂರಿಸುತ್ತಾರೆ. ಅರಿಸಿನ ಕುಂಕುಮ ಕೊಟ್ಟು ಹೂ, ಹಣ್ಣು, ಕೊಬ್ಬರಿ ಗಿಟುಕು (ಕಾಯಿ ಕೊಡುವುದಿಲ್ಲ), ಬಗೆಬಗೆಯ ತಿಂಡಿಗಳಾದ ಚಕ್ಕುಲಿ, ತೇಂಗೊಳಲು, ಮುಚ್ಚೋರೆ, ಹುರುಕಲು, ಉಂಡೆಗಳು, ಪುರಿಉಂಡೆ, ಪುಳ್ಳಂಗಾಯಿ ಉಂಡೆ ಮುಂತಾದವುಗಳನ್ನು ತಟ್ಟೆಗಳಲ್ಲಿಟ್ಟು ಗರ್ಭಿಣಿಗೆ ಅರಿಸಿನ, ಕುಂಕುಮ ಕೊಡಲು ಮತ್ತು ಬಾಗಿನ ಕೊಡಲು ಮುತ್ತೈದೆಯರನ್ನೆಲ್ಲ ಆಹ್ವಾನಿಸುತ್ತಾರೆ. ಗರ್ಭಿಣಿಗೆ ಉಡುಗೊರೆ ಮುಂತಾದವುಗಳನ್ನು ಕೊಟ್ಟ ನಂತರ, ಅವರುಗಳು ಮತ್ತು ಹೆಣ್ಣಿನ ತಾಯಿ ಗರ್ಭಿಣಿಗೆ ಬಗೆ ಬಗೆಯ ತಿಂಡಿಗಳಾದ ಚಕ್ಕಲಿ, ತೇಂಗೊಳಲು, ಮುಚ್ಚಾರೆ, ಹುರಿಗಾಳು ಐದು ಬಗೆ ಉಂಡೆಗಳು ಮತ್ತು ಹಣ್ಣುಗಳನ್ನು ತಟ್ಟೆಯಲ್ಲಿ ಇಟ್ಟು ಮಡಿಲು ತುಂಬುತ್ತಾರೆ. ಬಂದವರಿಗೆ ತಾಂಬೂಲ ಮತ್ತು ಬಾಗಿನ ಕೊಡುತ್ತಾರೆ. ಆಮೇಲೆ ಅವರುಗಳು ಕದಲಾರತಿ ಮಾಡಿ ಆಶೀರ್ವಾದ ಮಾಡುತ್ತಾರೆ.

ಆರೈಕೆ (ಔಷಧ ಕೊಡುವುದು)

ಮೂರನೆಯ ಅಥವಾ ಐದನೆಯ ತಿಂಗಳಲ್ಲಿ ಮಗುವಿಗೆ ನಂಜು (ಚವೆ) ಆಗದಿರಲೆಂದು ನಾಟಿ ಔಷಧಿಯನ್ನು (ಆಲದ ಬೀಳು, ತೆಂಗಿನ ಹೊಂಬಾಳೆ ಮುಂತಾದವುಗಳು) ಕೊಡುತ್ತಾರೆ. ಇಲ್ಲದಿದ್ದರೆ ಪ್ರತಿ ತಿಂಗಳು ವೈದ್ಯರ ಹತ್ತಿರ ತೋರಿಸಿ ಔಷಧೋಪಚಾರ ಮಾಡಬೇಕು. ಶುಕ್ರವಾರ, ಮಂಗಳವಾರ ಎಣ್ಣೆ ನೀರು ಹಾಕಿ ರಾತ್ರಿ ಮಲಗುವಾಗ ಕೇಸರಿಹಾಲು ಕೊಡಬೇಕು. ನೀರು ಹಾಕಿದ ತಕ್ಷಣ ಹಾಲಿಗೆ ಚಂದನ, ಕೇಸರಿ ಬೆರಸಿ ಕುಡಿಯಲು ಕೊಡಬಹುದು. ವೈದ್ಯರ ಸಲಹೆಯನ್ನು ಪಡೆದು ಕುಡಿಯಲು ಬಾರ್ಲಿ, ಎಳನೀರುಗಳನ್ನು ಕೊಡಬಹುದು. ವಿಶ್ರಾಂತಿಯೂ ಸಹ ಅಗತ್ಯ. ದಿನ ತುಂಬಿದ ದಿವಸಗಳಲ್ಲಿ ಮನೆಯಲ್ಲಿ ಜೀರಿಗೆ, ಬೆಣ್ಣೆ ಮುಂತಾದವನ್ನು ಇಟ್ಟುಕೊಂಡು ನೋವು ಬಂದಾಗ ಬೆಣ್ಣೆ ಹಾಕಿದ ಕಷಾಯ ಮಾಡಿ ಒಂದೆರಡು ಬಾರಿ ಕುಡಿಯಲು ಕೊಡಬೇಕು.

ಹೆರಿಗೆ ಆದ ನಂತರ

ಗಂಡು ಮಗು ಹುಟ್ಟಿದರೆ ಮನೆಯಲ್ಲಿ ಗಂಟೆ ಬಾರಿಸುತ್ತಾರೆ. ಮೂರನೆಯ ಮತ್ತೆ ಐದನೆಯ ದಿನ ಬಾಣಂತಿ ಮಗುವನ್ನು ನೋಡಲು ಬಂದವರಿಗೆ ಕೊಬ್ಬರಿ, ಸಕ್ಕರೆ ಹಂಚುವ ಪದ್ಧತಿ ಇದೆ.

ಕೆಲವು ಸಂಪ್ರದಾಯಗಳು

ಕೊಯ್ಲು ಮುತ್ತೈದೆ ಅಂದರೆ ಮದುವೆಯಾಗದ ಹುಡುಗಿಯನ್ನು ಆಮಂತ್ರಿಸಿ ಉದ್ದವಿರುವ ಒಂದು ಗುಂಡು ಕಲ್ಲಿಗೆ ಸುಣ್ಣ ಹಚ್ಚಿ ಬೇವಿನ ಸೊಪ್ಪು ಕಟ್ಟಿಡಿ. ಒಂದು ಕಡೆ ರಂಗೋಲೆ ಹಾಕಿ ಅದರ ಮೇಲೆ ಮಣೆ ಹಾಕಿ ಕೊಯ್ಲು ಮುತ್ತೈದೆ ಮತ್ತು ಬಾಣಂತಿಯನ್ನು ಕೂರಿಸಿ ಗುಂಡು ಕಲ್ಲನ್ನು ಆ ಹುಡುಗಿ ಕೈಗೆ ಕೊಟ್ಟು ಆರತಿ ಮಾಡಿ. ಆ ದಿನ ಬೆಳಿಗ್ಗೆ ಮಗುವಿನ ತಂದೆ ಕ್ಷೌರ ಮಾಡಿಸಿಕೊಂಡು ನೀರು ಹಾಕಿಕೊಳ್ಳಬೇಕು ಹೆಣ್ಣು ಮಗುವಾದರೆ ಇಲ್ಲ. ಇಡ್ಲಿ (ಗಂಡು ಮಗುವಾದರೆ ಮಡಿಸಿದ ಮಗ್ಗಲು ಕಡುಬು) ಮಾಡಿ. ಆರತಿ ಆದ ಮೇಲೆ ಮುತ್ತೈದೆಯರಿಗೆ ನೆಂಟರಿಗೆ ಪಾಯಸ, ಕಡುಬು, ನೆನಸಿದ ಕಡಲೆಬೇಳೆ ಇವುಗಳನ್ನು ಕೊಡುತ್ತಾರೆ.

ಹನ್ನೊಂದನೆಯ ದಿನದಂದು ಬೆಳಗ್ಗೆ ಮನೆಯ ಅಂಗಳದಲ್ಲಿ ಮಣೆ ಹಾಕಿ ರಂಗವಲ್ಲಿ ಇಟ್ಟು ನಾಲ್ಕು ಕಡೆಗಳಿಗೂ (ದಿಕ್ಕುಗಳು) ವಿಳ್ಳೇದೆಲೆ ಅಡಕೆ, ನೆನೆಸಿದ ಕಡಳೇಕಾಳು, ಕಲಸಿದ ಶುಂಠಿ ಮತ್ತು ಬೆಲ್ಲದ ಪುಡಿಯನ್ನು ಇಡಬೇಕು. ಐದು, ಹತ್ತು ಕಡಳೇಕಾಳುಗಳನ್ನು ಇಟ್ಟು ಮಣೆಯ ಮುಂದೆ ಒಂದು ಎಲೆ ಅಡಕೆ ಇಟ್ಟು ಆಮೇಲೆ ಬಾಣಂತಿ ಮಗುವನ್ನು ಕೂಡಿಸಿ ಈಶಾನ್ಯ ದಿಕ್ಕಿನಿಂದ ಹಾಲಿನ ಅರ್ಘ್ಯವನ್ನು ಕೊಡಬೇಕು. ಕೈಯಲ್ಲಿ ಚಾಕು, ಬೇವಿನ ಸೊಪ್ಪು ಹಿಡಿದು ಅದರಿಂದ ಅರ್ಘ್ಯ ಕೊಟ್ಟು ಓಕುಳಿಯಿಂದಲೂ ಅರ್ಘ್ಯ ಕೊಡಬೇಕು. ಕೊಯ್ಲಿ ಮುತ್ತೈದೆಗೂ ಇದೇ ರೀತಿ ಮೊದಲೇ ಮಾಡಿಸಿ ಆರತಿ ಮಾಡಿ ಇಬ್ಬರನ್ನೂ ಒಳಗೆ ಕರೆತರಬೇಕು.

ಮೊದಲು ಮಗುವಿಗೆ, ಬಾಣಂತಿಗೆ ಕಾಯಿಸಿದ ನೀರು ಹಾಕಿ ಸ್ನಾನಮಾಡಿಸಬೇಕು. ಮಗುವನ್ನು ಮಣೆಯ ಮೇಲೆ ಮಲಗಿಸಿ ಒಂದು ಜರಡಿಗೆ ಚಿನ್ನದ ಉಂಗುರವನ್ನು ಹಾಕಿ ಅದರಿಂದ ನೀರನ್ನು ಮಗುವಿನ ಮೇಲೆ ಮೆಲ್ಲಗೆ ಹಾಕಬೇಕು. ಅನಂತರ ಮಗುವನ್ನು ಎತ್ತಿಕೊಂಡು ಮೈ ಒರೆಸಿ. ಸಾಂಬ್ರಾಣಿಯಿಂದ ಕಾಯಿಸಬೇಕು (ಮಗುವನ್ನು ಹೊಗೆಗೆ ಹಿಡಿಯಬೇಕು). ಸಾಮಾನ್ಯವಾಗಿ

ಒಂದು ಹೊಸ ಮೊರದಲ್ಲಿ ಬಟ್ಟೆಗಳನ್ನು ಹಾಸಿ ಅದರ ಮೇಲೆ ಮಗುವನ್ನು ಮಲಗಿಸಿ, ಬೆಚ್ಚಗೆ ಹೊದ್ದಿಸಿ, ದೇವರ ಮುಂದೆ ಈ ಮೊರವನ್ನು ಇಟ್ಟು ಗಂಟೆ ಬಾರಿಸಬೇಕು. ಮೊರದಲ್ಲಿ ಮಗುವಿನ ತಲೆಯ ಕಡೆ ಒಂದು ಪುಸ್ತಕ ಇಡಬೇಕು.

ಒಂದು ಹೇರಳೆ ಹಣ್ಣನ್ನು ಇಬ್ಭಾಗಮಾಡಿ ಹೋಳಿನ ಒಳಗೆ ಅರಿಸಿನದ ಪುಡಿ, ಜೀರಿಗೆ ಪುಡಿ ಇವುಗಳನ್ನು ಹಾಕಿ ಅದನ್ನು ಒಲೆ ಮೇಲೆಟ್ಟು ಬಿಸಿಮಾಡಿ ಅದನ್ನೂ ಬಾಣಂತಿ ತಲೆಗೆ ತಿಕ್ಕಬೇಕು. ಮಾವು, ಬೇವು, ದಾಳಿಂಬೆ, ನೇರಳೆ ಮುಂತಾದ ಇತರೆ ಔಷಧಿ ಸಸ್ಯಗಳ ಎಲೆಗಳನ್ನು ಹಾಕಿ ಕಾಯಿಸಿದ ನೀರನ್ನು ಬಾಣಂತಿಗೆ ಹಾಕಬೇಕು. ಸಾಂಬ್ರಾಣಿ ಇಂದ ತಲೆ ಕಾಯಿಸಬೇಕು. ಆಗ ಬೆಲ್ಲ, ಶುಂಠಿ ಪುಡಿ ಇವುಗಳಿಗೆ ತುಪ್ಪ ಹಾಕಿ ಕಲಸಿ ಒಂದು ಗಜ್ಜುಗದ ಗಾತ್ರ ನುಂಗಲು ಕೊಡಬೇಕು. ನೀರು ಹಾಕಿದ ತಕ್ಷಣ ಒಳ್ಳೆ ಅರಿಸಿನ ಕಲೆಸಿ ಚಿಕ್ಕ ಉಂಡೆ ಮಾಡಿ ಅದನ್ನೂ ನುಂಗಲು ಕೊಡಬೇಕು. ಇದು ಆಂಟಿಬಯೋಟಿಕ್‌ನಂತೆ ವರ್ತಿಸುತ್ತದೆ; ನಂಜುಹರವೆಂದು ಹೇಳುತ್ತಾರೆ.ಅ ನಂತರ ಎಲೆ ಅಡಿಕೆ ಸುಣ್ಣ ತಿನ್ನಲು ಕೊಟ್ಟು ಮಲಗಿಸಬೇಕು. ಸ್ವಲ್ಪ ಸಿಹಿಸಜ್ಜಿಗೆ ತಿನ್ನಲು ಕೊಡಬಹುದು. ನಂತರ ಆ ದಿನವೇ ಶುದ್ಧ ಪುಣ್ಯಾರ್ಚನೆ, ನಾಮಕರಣ ಇತ್ಯಾದಿಗಳನ್ನು ಮಾಡುತ್ತಾರೆ.

ಬಾಣಂತಿ ಆರೈಕೆಗಳು

ಮಗುವನ್ನು ಹೆತ್ತದಿನ ಕಾಳು ಜೀರಿಗೆ ಕಷಾಯ ಮಾಡಿ ಒಂದೆರಡು ಚಮಚ ಕುಡಿಯಲು ಕೊಡಬೇಕು. ಒಂದನೇ ದಿನ ರವೆಗಂಜಿ, ಎರಡನೆಯ ಮತ್ತು ಮೂರನೆಯ ದಿನಗಳು ರಾತ್ರಿ ಮೆಣಸಿನ ಸಾರು, ಅನ್ನ ಹಾಗೂ ಬೆಳಗ್ಗೆ ಕಟ್ಟಿನ ಸಾರು, ಅನ್ನ ಕೊಡಬೇಕು. ಎರಡು ಮೂರು ದಿನಗಳು ಲವಂಗದ ಕಷಾಯವನ್ನು ಕೊಡಬೇಕು. ಹನ್ನೊಂದನೆಯ ದಿನ ಬಾಣಂತಿಯು ತಿನ್ನಲು ಶುಂಠಿ, ಬೆಲ್ಲ ಮತ್ತು ತುಪ್ಪ ಕಲೆಸಿ ಮಾಡಿದ ಚಿಕ್ಕ ಉಂಡೆಯನ್ನು ಕೊಡಬೇಕು. ಹನ್ನೆರಡನೆಯ ದಿನ ಮೆಣಸನ್ನು ನುಣ್ಣಗೆ ಪುಡಿ ಮಾಡಿ ಸಕ್ಕರೆ, ತುಪ್ಪ ಹಾಕಿ ಕಲೆಸಿ ಕೊಡಬೇಕು. ಹದಿಮೂರನೆಯ ದಿನ ಇಂಗನ್ನು ಬಿಸಿ ಮಾಡಿ ತುಪ್ಪ ಸಕ್ಕರೆ ಹಾಕಿ ವಿಳ್ಳೇದೆಲೆಯಲ್ಲಿಟ್ಟು ಕೊಡಬಹುದು. ಹದಿನಾಲ್ಕನೆಯ ದಿನ ಜೇನುತುಪ್ಪ, ತುಪ್ಪ ಕಲಿಸಿ ಕೊಡಬೇಕು. ಹದಿನೈದನೆಯ ದಿನ ಬೆಳ್ಳುಳ್ಳಿ ಹುರಿದು ತುಪ್ಪ, ಸಕ್ಕರೆಯಲ್ಲಿ ಕಲಸಿ ಕೊಡಬೇಕು. ನಂತರ ಬಾಣಂತಿಲೇಹ ಮಾಡಿ ಕೊಡಬೇಕು. ಶುಂಠಿಪುಡಿ, ಕಾಟಿ ಬೆಲ್ಲ, ಮುಂತಾದ ಸುಮಾರು 21 ರಿಂದ 25 ನಾರು ಬೇರುಗಳನ್ನು ಪುಡಿಮಾಡಿ ಅದನ್ನು ಬೆಲ್ಲದ ಪಾಕಕ್ಕೆ ಹಾಕಿ ನಿಂಬೆ, ಹೇರಳೆ, ಕಬ್ಬು ಒಂದೆಲಗ ಸೊಪ್ಪಿನ ರಸಗಳನ್ನು ಹಾಕಿ, ಅನಂತರ ತುಪ್ಪ ಹಾಕಿ ಬಾಣಂತಿಲೇಹ ಮಾಡುವ ಪದ್ಧತಿ ಇದೆ.

ಅರ್ಧ ಕೆ.ಜಿ. ಲೇಹಕ್ಕೆ ಬೇಕಾಗುವ ಸಾಮಾನುಗಳು: ಚಿಟಿಕೆ ಕುಂಕುಮ. ಅರಿಶಿನ, ಒಣಶುಂಠಿ ಪುಡಿ 100 ಗ್ರಾಂ, ಆರು ಹೇರಳೆ ಹಣ್ಣಿನ ರಸ, ಬೆಲ್ಲ 1 ಕೆ.ಜಿ, 100 ಗ್ರಾಂ ಜೇನು, 2 ಸೇರು ಬೆಣ್ಣೆ ಕಾಯಿಸಿದ ತುಪ್ಪ, ಆಗತಾನೆ ಅರೆದ ಒಂದು ಪಾವು ಕಬ್ಬಿನ ಹಾಲು, ಜೀರಿಗೆ 50 ಗ್ರಾಂ, ಮೊರಾಟ ಮೊಗ್ಗು 25 ಗ್ರಾಂ, ಲವಂಗ 50 ಗ್ರಾಂ, ಹಸಿ ಶುಂಠಿ ರಸ 25 ಗ್ರಾಂ, ಕಲ್ಲುನಾರು 25 ಗ್ರಾಂ, ವಾಲೇ ಬೆಲ್ಲ ಒಂದು ಬಾರ್, ಅತಿ ಮಧುರ 1 (ಒಂದು), ಸಾಂಬಾರ ಬೀಜ 50 ಗ್ರಾಂ, ಲವಂಗ ಪತ್ರೆ 5 ಗ್ರಾಂ, ಸಣ್ಣ ರಾಷ್ಮೆ 2 ಗ್ರಾಂ, ಚಕ್ಕೆ 50 ಗ್ರಾಂ, ವಾಯುವಿಳಂಗ 50 ಗ್ರಾಂ, ಪರಂಗಿ ಚಕ್ಕೆ 5 ಗ್ರಾಂ, ವಾಮಕ್ಕಿ 10 ಗ್ರಾಂ, ಕರಿ ಜೀರಿಗೆ 25 ಗ್ರಾಂ, ಬಾಲ ಮೆಣಸು 25 ಗ್ರಾಂ, ಬಜೆ ಒಂದು ಚೂರು, ಸಬ್ಬಸಿಗೆ ಬೀಜ 25 ಗ್ರಾಂ, ಅತಿಬಜೆ 25 ಗ್ರಾಂ, ಮೆಣಸು 50 ಗ್ರಾಂ, ಕಾಳೇಶ್ ಪತ್ರೆ 5 ಗ್ರಾಂ,

ಜಾಕಾಯಿ 1, ಜಾಯಿ ಪತ್ರೆ 1, ಅಳಲೇಕಾಯಿ 2, ಬಾದಾಮಿ 50 ಗ್ರಾಂ, ಕೆಂಪು ಕೇಸರಿ 50 ಗ್ರಾಂ, ಒಣ ದ್ರಾಕ್ಷಿ 25 ಗ್ರಾಂ, ಉತ್ತುತ್ತೆ 25 ಗ್ರಾಂ, ಬಾದಾಮಿ, ಒಣದ್ರಾಕ್ಷಿ. ಉತ್ತುತ್ತೆ ಬಿಟ್ಟು ಉಳಿದವುಗಳನ್ನು ತುಪ್ಪದಲ್ಲಿ ಹುರಿದು ಪುಡಿ ಮಾಡಿಟ್ಟುಕೊಳ್ಳಬೇಕು.

ಒಲೆಯ ಮೇಲೆ ಅಗಲವಾದ ಪಾತ್ರೆ ಇಟ್ಟು ಕಬ್ಬಿನ ರಸ, ಜೇನು ತುಪ್ಪ, ಶುಂಠಿರಸ, ಬೆಲ್ಲ, ಕಲ್ಲುಸಕ್ಕರೆ, ಹೇರಳೆ ಹಣ್ಣಿನ ರಸ ಹಾಕಿ ಪಾಕಬರುವಂತೆ ತೊಳೆಸಬೇಕು. ನಾರು ಪಾಕ ಬಂದಾಗ ಪುಡಿ ಹಾಕಿ ತುಪ್ಪ ಹಾಕಿ ಕೂಡಿಸಬೇಕು. ಲೇಹ ಪಾತ್ರೆ ಬಿಡುವಂತಾದಾಗ ಬಾದಾಮಿ, ಒಣ ದ್ರಾಕ್ಷಿ, ಉತ್ತುತ್ತೆ (ಹಿರಿದು) ಪುಡಿ ಮಾಡಿ (ಸಣ್ಣ ಸಣ್ಣ ಚೂರು) ಬೆರೆಸಿ ಕೈಯಾಡಿಸಿ ಕೊನೆಗೆ ಚಿಟುಕಿ ಕುಂಕುಮ ಮತ್ತು ಅರಿಶಿನ ಹಾಕಿ ಕೆಳಗಿಳಿಸಿ, ಆರಿದ ನಂತರ ಡಬ್ಬಿಯಲ್ಲಿ ತುಂಬಿಟ್ಟರೆ ಒಂದು ವರ್ಷದವರೆಗೆ ಕೆಡುವುದಿಲ್ಲ. ಮೇಲ್ಕಂಡ ಸಾಮಾನುಗಳೆಲ್ಲವೂ ಪನ್ಸಾರಿ ಅಂಗಡಿಯಲ್ಲಿ ದೊರೆಯುತ್ತವೆ. ಕಾಲುಪಟ್ಟಿಗೆ ಬೇಕಾಗುವ ಸಾಮಾನುಗಳನ್ನು ನೀಡಿರೆಂದು ವಿಚಾರಿಸಿದರೆ ಕೊಡುತ್ತಾರೆ.

ಒಂದು ತಿಂಗಳ ನಂತರ ನಿತ್ಯ ಬೆಳಿಗ್ಗೆ ನಿಂಬೆ ಗಾತ್ರದ ಈ ಲೇಹಕ್ಕೆ ತುಪ್ಪ ಸೇರಿಸಿ ತಿನ್ನಬೇಕು. ಇದರ ಜೊತೆಗೆ ಮೂರನೆಯ ತಿಂಗಳಿಗೆ ಮೆಂತ್ಯದ ದೋಸೆ ಅಂಟಿನ ಉಂಡೆ ಕೊಡುತ್ತಾರೆ. ಇದರ ಜೊತೆ ದಿನ ಬಿಟ್ಟು ದಿನ ಎಣ್ಣೆನೀರು (ಅಭ್ಯಂಜನ) ಹಾಕಿಕೊಂಡು ಊಟದ ನಂತರ ಎಲೆ ಅಡಿಕೆ ಹಾಕಿಕೊಳ್ಳಬೇಕು. ಮಗುವಿಗೆ ನಿತ್ಯ ನೀರು ಹಾಕುವಾಗ ಎಣ್ಣೆ ಹಚ್ಚಿ ಮೈಯನ್ನು ಚೆನ್ನಾಗಿ ಮಸಾಜ್ ಮಾಡಬೇಕು. ಸೋಪು ಬಳಸಬಾರದು. ಕಡ್ಲೆಹಿಟ್ಟು ಬಳಸುವುದು ಒಳ್ಳೆಯದು) ಮಾಡುವುದರಿಂದ ಮಗು ಮೈಕೈ ನೋವು ಇಲ್ಲದೆ ಸೊಂಪಾಗಿ ಬೆಳೆಯುತ್ತದೆ.

ನಾಮಕರಣ

ನಾಮಕರಣದ ದಿವಸ ತೊಟ್ಟಿಲನ್ನು ಒಂದು ಕಡೆ ಇಟ್ಟು ಅದರ ಮುಂದೆ ಮೂರು ಎಲೆ ಹಾಕಿ ಬಡಿಸಬೇಕು. ಒಂದರಲ್ಲಿ ಬಾಣಂತಿ ಮತ್ತು ಇನ್ನೊಂದರಲ್ಲಿ ಕೊಯ್ಲು ಮುತ್ತೈದೆಯನ್ನು ಕೂಡಿಸಿ ಊಟಕ್ಕೆ ಬಡಿಸಬೇಕು. ಬಡಿಸಿದ ಇನ್ನೊಂದು ಎಲೆಯನ್ನು ಗೋವಿಗೆ ಕೊಡಬೇಕು. ಸಾಯಂಕಾಲ ತೊಟ್ಟಿಲನ್ನು ಹೊಸ ಜರಿ ಸೀರೆ, ಹೂಗಳಿಂದ ಅಲಂಕರಿಸಿ ಒಂದು ಬಟ್ಟಲಲ್ಲಿ ಸ್ವಲ್ಪ ಹಾಲು ತುಪ್ಪ ಹಾಕಿ ಅದಕ್ಕೆ ಅಕ್ಕಪಕ್ಕದವರ ಮನೆಗಳಿಂದ ಹಾಲು ತುಪ್ಪ ಹಾಕಿಸಿ ತಂದು ಅದನ್ನು ಒಂದು ಕಡೆ ಇಟ್ಟುಕೊಳ್ಳಬೇಕು. ತೊಟ್ಟಿಲನ್ನು ಹಸೆ ಮಣೆ ಮುಂದೆ ಇಟ್ಟು ಸುತ್ತಲೂ ರಂಗೋಲಿ ಹಾಕಿ ಹಸೆ ಮಣೆಯ ಮೇಲೆ ಬಾಣಂತಿ, ಮಗು, ಕೊಯ್ಲು ಮುತ್ತೈದೆಯನ್ನು ಕೂರಿಸಬೇಕು. ಮೊದಲೇ ಸಿದ್ಧಪಡಿಸಿದ ಬೆನಕನನ್ನು (ಸಗಣಿಯಿಂದ ತ್ರಿಕೋಣದಲ್ಲಿ ಉಂಡೆ ಮಾಡಿ ಗರಿಕೆ ಸಿಕ್ಕಿಸಿ ಕುಂಕುಮ ಇಡುವುದು) ವಿಳ್ಳೇದೆಲೆ ಮೇಲಿಟ್ಟು ಒಬ್ಬ ಹಿರಿಯ ಮುತ್ತೈದೆಯ ಕೈಯಲ್ಲಿ ಪೂಜೆ ಮಾಡಿಸಿದ (ಧೂಪ, ದೀಪ, ನೈವೇದ್ಯ, ಮಂಗಳಾರತಿ) ಮೇಲೆ ಮೊದಲು ಗುಂಡಪ್ಪನನ್ನು (ಎಲಕ್ಕಿ ಮುಂತಾದವನ್ನು ಕುಟ್ಟಲು ಇಟ್ಟುಕೊಂಡಿರುವ ಗುಂಡುಕಲ್ಲು) ಮುತ್ತೈದೆ ಕೈಗೆ ಕೊಡಬೇಕು. ಅವರು ಅದನ್ನು ತೊಡೆಯ ಮೇಲೆ ಇಟ್ಟುಕೊಂಡು ವಿಳ್ಳೇದೆಲೆಯ ತೊಟ್ಟಿನಿಂದ ಎಣ್ಣೆಯನ್ನು (ಹರಳೆಣ್ಣೆ) ಅದ್ದಿಕೊಂಡು ದೀಪಕ್ಕೆ ಹಿಡಿದು ಬಿಸಿ ಮಾಡಿ ಗುಂಡಪ್ಪನ ತಲೆಗೆ ಇಟ್ಟು ತೆಗೆಯಬೇಕು. ಅದೇ ತರಹ ಹೊಕ್ಕುಳಿಗೆ ಮಾಡಿ ಅದೇ ಎಲೆಯನ್ನು ನೆತ್ತಿಯ ಮೇಲಿಟ್ಟು ಕಣ್ಣಿಗೆ ಕಪ್ಪಿಡಬೇಕು. ಆ ಕಪ್ಪಿನಲ್ಲೇ ಹಣೆಗೆ ಮತ್ತು ಕೆನ್ನೆಗೆ ರಕ್ಷೆ ಇಡಬೇಕು. ತಂದಿರುವ ಬಜೆ ಬೆಣ್ಣೆಯನ್ನು ಸಾಣೆಕಲ್ಲಿನ


ಮೇಲೆ ಹಾಕಿ ಬಜೆಯಿಂದ ತೇಯಬೇಕು. ಅದನ್ನು ಗುಂಡಪ್ಪನ ಬಾಯಿಗೆ ಮುಟ್ಟಿಸಿ ಉದ್ಧರಣೆಯಲ್ಲಿ ಎರಡು ಉದ್ಧರಣೆ ಹಾಲು ಕುಡಿಸಿ ಅದಕ್ಕೆ ಹಸಿ ದಾರದಿಂದ ಉಡಿದಾರ ಕಟ್ಟಿ ಹೂವಿನಲ್ಲಿ ಉಂಗುರ ಇಟ್ಟು ಒಂದು ಹೂವಿನಿಂದ ಸುಣ್ಣ ಅದ್ದಿಕೊಂಡು ಎರಡು ಕಿವಿಗೆ ಚುಚ್ಚುವ ಶಾಸ್ತ್ರಮಾಡಬೇಕು. ಆ ಗುಂಡಪ್ಪನನ್ನು ಅದರ ತಾಯಿಯ (ಒಂದು ಚಿಕ್ಕ ಹುಡುಗಿ) ಕೈಯಲ್ಲಿ ಕೊಡುವುದು.

ಈಗ ಮಗುವನ್ನು ತೊಡೆಯಲ್ಲಿಟ್ಟುಕೊಂಡು ಅದಕ್ಕೂ ಇದರಂತೆ ಎಲ್ಲವನ್ನೂ ಮಾಡಿ ಉಡಿದಾರ ಕಟ್ಟಿ ತಾಯಿಯ ಕೈಗೆ ಮಗುವನ್ನು ಕೊಡಬೇಕು. ಮಗುವಿನ ತಲೆ ಪೂರ್ವದಿಕ್ಕಿಗಿರಲಿ. ತೊಟ್ಟಿಲನ್ನು ಪೂರ್ವ ದಿಕ್ಕಿಗೆ ಇಡಬೇಕು. ತೊಟ್ಟಿಲ ಆ ಕಡೆ ಈ ಕಡೆ ಇಬ್ಬರು ಮುತ್ತೈದೆಯರು ನಿಂತುಕೊಂಡು ಒಬ್ಬ ಮುತ್ತೈದೆ ಗುಂಡಪ್ಪನನ್ನು ಹಸೆ ಮಣೆಯಿಂದ ತೊಟ್ಟಿಲಿನ ಕೆಳಗೆ ಮೇಲೆ ಮುಟ್ಟಿಸಿ ತೊಟ್ಟಿಲಿನ ಆ ಕಡೆಯವರಿಗೆ ಕೊಡಲಿ. ಹೀಗೆ ಮೂರು ಸಲ ಮಾಡಿ ಗುಂಡಪ್ಪನನ್ನು ಪೂರ್ವದಿಕ್ಕಿಗೆ ತಲೆ ಮಾಡಿ ತೊಟ್ಟಿಲ ಒಂದು ಕಡೆ ಮಲಗಿಸಬೇಕು.

ಮಗುವಿಗೂ ಇದೇ ತರಹ ಮೂರುಸಲ ಮಾಡಿ ಪೂರ್ವದಿಕ್ಕಿಗೆ ತಲೆ ಮಾಡಿ ಮಲಗಿಸಿ ಐದು ಜನ ಮುತ್ತೈದೆಯರು ಜೋಜೋ ಲಾಲಿ ಎಂದು ಹಾಡುತ್ತಾ ತೂಗಬೇಕು. ನಂತರ 5 ದೀಪಗಳಿಂದ ಮಗುವಿಗೆ ರಕ್ಷೆ ಇಡುವುದು (ದೀಪದ ಮೇಲೆ ಅಂಗೈ ಇಟ್ಟು ತಲೆ ಇಂದ ಕಾಲುಗಳವರೆಗೆ ಪ್ರತಿ ಅಂಗಾಂಗಳಿಗೆ). ಹಾಡು ಹೇಳುತ್ತಾ ರಕ್ಷೆ ಇಡಬೇಕು. ನಂತರ ಒಂದು ಚೂರು ಬಜೆ, ತೂತು ಮಾಡಿದ ಒಂದು ಕವಡೆಯನ್ನು ಕಂಬಳೀ ದಾರದಿಂದ ತೊಟ್ಟಿಲ ಕೆಳಗೆ ಕಟ್ಟುವುದು. ಗುಂಡಪ್ಪ, ಮಗು ತಾಯಿ ಎಲ್ಲರಿಗೂ ಆರತಿ ಮಾಡಿ ಗುಂಡಪ್ಪನ ತಾಯಿಗೆ 1 ಕಣ, ಅಕ್ಕಿ, ಬೆಲ್ಲ ದಕ್ಷಿಣೆ ವಿಳ್ಳೇದೆಲೆ ಅಡಕೆ ಇಟ್ಟು ಬಾಣಂತಿಯ ಮಡಿಲು ತುಂಬಬೇಕು. ಬಂದ ಮುತ್ತೈದೆಯರಿಗೆಲ್ಲ ಬಾಗಿನ ಕೊಡಬೇಕು.

ಇನ್ನೊಂದು ಸಲಹೆ – ಬುತ್ತಿ ಇಡುವುದು (ಇದನ್ನು ಊಟಕ್ಕೆ ಮುಂಚೆ ಮಾಡಬೇಕು)

ಸ್ವಲ್ಪ ಅಕ್ಕಿ, ತೊಗರಿಬೇಳೆ, ಸೊಪ್ಪು ಬೇಯಿಸಿ ಅದಕ್ಕೆ ಅರಿಸಿನ ತುಪ್ಪ ಹಾಕಿ ಕಲೆಸಿ 8 ಪಿಡಿಚೆ ಮಾಡಿ ಇಟ್ಟುಕೊಳ್ಳಬೇಕು. ಊಟಕ್ಕೆ ಮೊದಲು ಇದನ್ನು ತಯಾರಿಸಿಕೊಳ್ಳಬೇಕು. ಇಲ್ಲಿ ಬರೆದಿರುವಂತೆ ಚೌಕಟ್ಟು ಬರೆದು ಅದರಲ್ಲಿ ಈ ಪಿಡಿಚೆಗಳನ್ನು ಇಡಿ. ಇದರ ಹಿಂದೆ ತೊಟ್ಟಿಲಿಟ್ಟು ರಂಗೋಲಿ ಹಾಕಿ ಪೂಜೆ ಮಂಗಳಾರತಿ ಮಾಡಿ ತೊಟ್ಟಿಲಿಗೂ ಸಹ ನೈವೇದ್ಯ ಮಾಡಿ ಆಮೇಲೆ ಒಂದು ಚಾಕುವಿನಿಂದ ಹರಳೆಣ್ಣೆಯನ್ನು ಅದ್ದಿ ಅದನ್ನು ಚೌಕಟ್ಟಿನ ಮುಂದೆ ಮಧ್ಯದಲ್ಲಿರುವ ಜಾಗಕ್ಕೆ ಮುಟ್ಟಿಸಿ ಅದರ ಎಣ್ಣೆಯನ್ನು ಹೂವಿನಿಂದ ಅದ್ದಿ ಗುಂಡಪ್ಪ ವಿಗ್ರಹಕ್ಕೆ ಮತ್ತು ಮಗುವಿನ ನೆತ್ತಿಗೆ, ಹೊಕ್ಕಳಿಗೆ ಸವರಿ ಆ ಪಿಡಿಚೆ, ಅದರಲ್ಲೇ ಮಾಡಿದ ದೀಪ ಎಲ್ಲವನ್ನೂ ಯಾರೂ ತುಳಿಯದ ಜಾಗಕ್ಕೆ ಹಾಕಬೇಕು.



ತಿಂಗಳ ಪುರುಡು

ಇದನ್ನು ತಿಂಗಳು ಕಳೆದ ನಂತರ ಒಂದು ಒಳ್ಳೆಯ ದಿನದಲ್ಲಿ ಮಾಡುತ್ತಾರೆ. ಆದಿನ ತಾಯಿ, ಮಗು ಬಟ್ಟೆಗಳನ್ನು ಸ್ವಚ್ಚಮಾಡಿ ಬಾಣಂತಿ ಇರುವ ರೂಮು ಮತ್ತು ಮಗುವಿನ ತೊಟ್ಟಿಲು ಅದರ ಬಟ್ಟೆಗಳನ್ನು ಎಲ್ಲವನ್ನೂ ಸ್ವಚ್ಚಮಾಡಿ ಸಾರಸಿ ರಂಗವಲ್ಲಿ ಇಟ್ಟು ದೂಪ ಹಾಕಬೇಕಾದರೆ ಹಬ್ಬದ ಅಡಿಗೆ ಮಾಡಬಹುದು.

ಆ ದಿನವೇ ಗಂಗೆ ಪೂಜೆ ಕೂಡ ನಿಮ್ಮ ಮನೆಯಲ್ಲಿರುವ ನಲ್ಲಿ ಅಥವಾ ಬಾವಿಗೆ ಮಾಡಬಹುದು.

ಕಿವಿ ಚುಚ್ಚುವುದು

ಮಕ್ಕಳಿಗೆ 3, 5 ತಿಂಗಳಿನಲ್ಲಿ ಇದನ್ನು ಮಾಡಿ, ಅಕ್ಕಸಾಲೆ ಅಥವಾ ಡಾಕ್ಟರ್‌ರಿಂದ ಚುಚ್ಚಿಸಬಹುದು ಕಿವಿಯ ಹಾಲೆಯಲ್ಲಿ ತೂತು ಮಾಡಿದರೆ ಆ ಭಾಗದ ನರಗಳಿಗೆ ವ್ಯತ್ಯಾಸವಾಗಿ ಮಕ್ಕಳಿಗೆ ಜ್ಞಾನ ವೃದ್ಧಿಯಾಗುವುದೆಂದು ನಮ್ಮ ಋಷಿ ಮುನಿಗಳು ಕಂಡುಕೊಂಡಿದ್ದರು. ಆದರೆ ಈಗ ಚೀನಾದಲ್ಲಿ ಆ ಭಾಗದಲ್ಲಿ ತೂತು ಮಾಡಿದರೆ ಬುದ್ಧಿ, ಜ್ಞಾನ ವೃದ್ಧಿಯಾಗುವುದೆಂದು ಕಂಡುಹಿಡಿದಿದ್ದಾರೆಂದು ಹೇಳುತ್ತಾರೆ.

ಅನ್ನ ಪ್ರಾಶನ

6ನೇ ಅಥವಾ 8ನೇ ತಿಂಗಳಲ್ಲಿ ಅನ್ನವನ್ನು ತಿನ್ನಿಸುವುದು (ಪ್ರಾಶನ) ಪದ್ಧತಿ. ಮಗುವಿನ ಬೆಳವಣಿಗೆಗೆ ತಾಯಿ ಹಾಲು ಸಾಲದಿರಬಹುದು, ಮೆತ್ತಗೆ ಅನ್ನ ಮಾಡಿ ತಿನ್ನಿಸಲು ಪ್ರಾರಂಭ ಮಾಡಬೇಕು.

ಆ ದಿನ ಹಬ್ಬದ ಅಡಿಗೆ ಸೀ ಅನ್ನ (ಕೇಸರೀಬಾತ್, ಬೆಲ್ಲದನ್ನ) ಮಾಡಿ ಪಾಯಸ ಮಾಡುತ್ತಾರೆ.

ಎಣ್ಣೆ ನೀರು ಹಾಕಿ ತಂದೆ ಅಥವಾ ಸೋದರ ಮಾವ ಅವರ ಮನೆ ಪದ್ಧತಿಯಂತೆ ದೇವರ ಮುಂದೆ ತಟ್ಟೆಯಲ್ಲಿ ಪಾಯಸ, ಸೀ ಅನ್ನ, ಬೆಳ್ಳಿ ಬಟ್ಟಲಲ್ಲಿ ಇಟ್ಟು ಮಗುವನ್ನು ತೊಡೆಯ ಮೇಲೆ ಕೂರಿಸಿಕೊಂಡು ಉಂಗುರದಲ್ಲಿ ಮೊದಲು ಪಾಯಸವನ್ನು ತಿನ್ನಿಸುತ್ತಾರೆ. ಆಮೇಲೆ ಸೀ ಅನ್ನ ತಿನ್ನಿಸಿ ಆರತಿ ಮಾಡುತ್ತಾರೆ.

ವರ್ಷದ ಹೆಚ್ಚು

ಒಂದು ವರ್ಷ ತುಂಭಿದ ಮೇಲೆ ದಿನವನ್ನು ಹೆಚ್ಚಿಸಿ ಹುಟ್ಟಿದ ಹಬ್ಬ ಮಾಡುತ್ತಾರೆ. ಆ ದಿನ ಆಯುಷ್ಯ ಹೋಮ, ಗಣಪತಿ ಹೋಮ ಮಾಡುತ್ತಾರೆ ಮತ್ತು ನೆಂಟರಿಷ್ಟರಿಗೆ ಭೋಜನ ವ್ಯವಸ್ಥೆ ಮಾಡುತ್ತಾರೆ.

ಗಂಡು ಮಕ್ಕಳಾದರೆ ಕನ್ನಡಿ ತೋರಿಸಿ ಹಣೆಗೆ ಗಂಧಾಕ್ಷತೆ ಇಡುತ್ತಾರೆ. (ಇದನ್ನು ಗಂಡಸರೆಲ್ಲ ಊಟಕ್ಕೆ ಮುಂಚೆ ನಿತ್ಯ ಇಟ್ಟುಕೊಳ್ಳುತ್ತಿದ್ದರು)

ಗಂಧಾಕ್ಷತೆ

ಒಣಗಿದ ಬಾಳೆಹಣ್ಣಿನ ಸಿಪ್ಪೆಯನ್ನು ಕೆಂಡದಲ್ಲಿ ಸುಟ್ಟು ಪುಡಿ ಮಾಡಿ. ಆ ಪುಡಿಯನ್ನು ಶ್ರೀ ಗಂಧದ ಜೊತೆಯಲ್ಲಿ ಕಲೆಸಿ ಹಣೆಗೆ ಈ ರೀತಿ ಬೊಟ್ಟು ಇಡುತ್ತಾರೆ. ಹೆಣ್ಣುಮಕ್ಕಳಿಗೆ ಕುಂಕುಮ ಇಡುತ್ತಾರೆ.

ಮಕ್ಕಳಿಗೆ ತೊಟ್ಟಿಲಿಡುವಾಗ ರಕ್ಷೆ ಇಟ್ಟ ಹಾಡು

ಇಂದಿರೆ ರಮಣ ಗೋವಿಂದ ಮಾಧವಗೆ
ಸಂಜೇಲಿ ಕಾವು ಕಟ್ಟುಗಳ ಕಟ್ಟುವೆನು ॥ 1 ॥
ಚಂದದಿಂದಲಿ ಠಾಣ ದೀವಿಗೆಯ ನಿರಿಸಿ
ಅಂಗಾಲೀಗಿಡುವೆ ಮುಕುಂದನ ರಕ್ಷೆ ॥ 2 ॥
ಘನತರವಾದ ಶ್ರೀ ಚಲ್ವ ಚರಣಕ್ಕೆ
ಕಣಕಾಲಿಡುವೆ ಕಾಳಿಂಗನ ರಕ್ಷೆ ॥ 3 ॥
ಹೊಟ್ಟೆಗೇ ಇಡುವೆ ಮುದ್ದು ವಿಠಲನ ರಕ್ಷೆ
ಬಾಯಿಗೇ ಇಡುವೆ ಬ್ರಹ್ಮ ದೇವರ ರಕ್ಷೆ ॥ 4 ॥
ಮೂಗಿಗೆ ಮೂವತ್ತು ಕೋಟಿ ದೇವತೆಗಳ ರಕ್ಷೆ
ಕೇಳುವೋ ಕಿವಿಗೆ ವಾಯು ದೇವತೆಗಳ ರಕ್ಷೆ ॥ 5 ॥
ಬೆನ್ನಿಗೇ ಮಂದರಗಿರಿ ಪರ್ವತವೇ ರಕ್ಷೆ
ಸುವರ್ಣ ಮುಕುಟಕ್ಕೆ ಚಂದ್ರಸೂರ್ಯಮರೇ ರಕ್ಷೆ ॥ 6 ॥
ಕಣ್ಣ ಹುಬ್ಬಿಗೇ ಕಾಮನ ಮನ್ಮಥನ ರಕ್ಷೆ
ನಿನ್ನ ಹಣೆಗೆ ಕಸ್ತೂರಿ ತಿಲಕಗಳೇ ರಕ್ಷೆ ॥ 7 ॥
ಆರಕ್ಷೇ ಈ ರಕ್ಷೆ ಸ್ವಾಮಿಯ ರಕ್ಷೆ
ನಾನಿಡುವೆ ನರಸಿಂಹ ದೇವರ ರಕ್ಷೆ ॥ 8 ॥

ಚೂಡಾಕರ್ಮ (ಜುಟ್ಟು)

ಇದನ್ನು ಸಾಮಾನ್ಯವಾಗಿ ಮೂರನೆಯ/ಐದನೆಯ ವರ್ಷದಲ್ಲಿ ಮಾಡುತ್ತಾರೆ. ಮತ್ತೆ ಕೆಲವರ ಮನೆಗಳಲ್ಲಿ ಚೌಲ, ಅಕ್ಷರಾಭ್ಯಾಸ ಮಾತ್ರ ಮಾಡುವ ಪದ್ಧತಿಗಳಿವೆ.

ಚೌಲ

ಮದುವೆಯಲ್ಲಿ ಮಾಡುವಂತೆ ಎಣ್ಣೆಶಾಸ್ತ್ರ ಮಾಡಬೇಕು. ನೀರು ಹಾಕಿದ ಮೇಲೆ ಮಗುವನ್ನು ಹಸೆ ಮೇಲೆ ಕೂಡಿಸಿ ಪುರೋಹಿತರು ಮಂತ್ರ ಹೇಳುತ್ತಾ ಸ್ವಲ್ಪ ಕೂದಲನ್ನು ತೆಗೆಯುತ್ತಾರೆ. ಆಮೇಲೆ ಪೂರ್ವದಿಕ್ಕಿಗೆ ಮಣೆ ಹಾಕಿ ಹುಡುಗನನ್ನು ಕೂರಿಸಿ ಹಣೆಗೆ ಕುಂಕುಮ ಇಟ್ಟು ಆರತಿ ಮಾಡಬೇಕು. ಆಗ ಕ್ಷೌರ ಮಾಡುವವರು ಹುಡುಗನ ತಲೆಯ ಮುಂಭಾಗದಲ್ಲಿನ ಕೂದಲನ್ನು ಅರ್ಧಚಂದ್ರಾಕಾರವಾಗಿ ತೆಗೆಯುತ್ತಾರೆ. ಆಮೇಲೆ ಕ್ಷೌರಿಕನ ಕೈಗೆ ಸ್ವಲ್ಪ ಅರಿಸಿನ ಕೊಬ್ಬರಿ ಎಣ್ಣೆ ಹಾಕಿ ಕೂದಲನ್ನು ತೆಗೆದ ಜಾಗಕ್ಕೆ ಸವರಿಸುತ್ತಾರೆ. ಏಕೆಂದರೆ ಚಾಕುವಿನಲ್ಲಿ ಕೂದಲನ್ನು ತೆಗೆಯುವುದರಿಂದ ಗಾಯ ಅಥವಾ ತರಚು ಇದ್ದರೆ ಅಲ್ಲಿ ನಂಜು ಆಗಬಾರದು ಎಂದು ಈ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಇದರಿಂದ ಆರೋಗ್ಯಕ್ಕೆ ನಮ್ಮ ಹಿಂದಿನವರು ಎಷ್ಟು ಮುಂಜಾಗರೂಕತೆ ವಹಿಸುತ್ತಿದ್ದರೆಂದು ಊಹಿಸಿಕೊಳ್ಳಬಹುದು. ಆಮೇಲೆ ಒಂದು ಹೊಸ

ಮೊರದಲ್ಲಿ ಅಕ್ಕಿ, ತೆಂಗಿನ ಕಾಯಿ, ಬೆಲ್ಲ ವಿಳ್ಳೆದೆಲೆ ಅಡಿಕೆ ಇಟ್ಟು ಅದರ ಜೊತೆ ಸಂಭಾವನೆಯನ್ನು ಸೇರಿಸಿ ಕ್ಷೌರಿಕನಿಗೆ ಕೊಟ್ಟು ಮರ್ಯಾದೆ ಮಾಡಬೇಕು. ಮುಂದೆ ಮಗುವಿಗೆ ನೀರು ಹಾಕಿ ಒಂದು ಮಗುಟ ಉಡಿಸಿ ಹಣೆಗೆ ಕುಂಕುಮ ಇಡುವುದು. ಈಗ ಪುರೋಹಿತರು ಚೌಲ ಹೋಮ ಮಾಡಿ ಅಕ್ಷರಾಭ್ಯಾಸ ಮಾಡಿಸುತ್ತಾರೆ. ಕ್ಷರ ಎಂದರೆ ನಾಶವಾಗುವುದು. ಅಕ್ಷರವೆಂದರೆ ನಾಶವಾಗಲಾರದ್ದು. ಇದು ಶಾಶ್ವತವಾದದ್ದು. ಆದ್ದರಿಂದ ಆ ಹುಡುಗನ ಕೈಯಿಂದ ಪುಸ್ತಕ, ಬಳಪ ಸ್ಲೇಟುಗಳನ್ನು ಮಕ್ಕಳಿಗೆ ಕೊಡಿಸುತ್ತಾರೆ. ಬಂದವರಿಗೆ ಸಕ್ಕರೆ ಕೊಬ್ಬರಿ ಕೊಟ್ಟು ಫಲ ಪೂಜೆ ಆರತಿ ಮಾಡುತ್ತಾರೆ. ಇದಾದ ನಂತರ ಊಟ ವಗೈರೆ ಇರುತ್ತದೆ. ಸಾಯಂಕಾಲ ಹುಡುಗನನ್ನು ಹಸೆಯ ಮೇಲೆ ಕೂರಿಸಿ ಆರತಿ ಮಾಡಿ ಪುರಿಉಂಡೆ ಬಾಗಿನ ಕೊಡುವ ಸಂಪ್ರದಾಯವಿದೆ. ಇನ್ನು ಕೆಲವರು ದೇವರ ಸನ್ನಿಧಿಯಲ್ಲಿ ಜುಟ್ಟು ಮಾಡುವ ಪರಿಪಾಠವು ಇದೆ.

ಉಪನಯನ (ಮುಂಜಿ)

ಏಳನೆಯ ವರ್ಷ ಮುಗಿಯುವ ವೇಳೆಗೆ ಅಥವಾ 16ನೇ ವರ್ಷ ಮುಗಿಯುವ ಮುನ್ನ (ಗರ್ಭಷೋಡಶ) ಉಪನಯನ ಮಾಡಲೇಬೇಕೆಂದು ಶಾಸ್ತ್ರವಿದೆ. ಏಕೆಂದರೆ ಉಪನಯನ ಎಂದರೆ ದ್ವಿಜನಾಗುವುದು ಎನ್ನುತ್ತಾರೆ. ಉಪನಯನದಲ್ಲಿ 'ಗಾಯತ್ರಿ' ಉಪದೇಶದಿಂದ ಅವನು ಭಗವಂತನನ್ನು ಕಾಣುವುದು. ಅಂದರೆ ನಾವು ಹುಟ್ಟಿದ ಗುರಿಯನ್ನು ಮುಟ್ಟುವುದು. ಉಪ+ನಯನ ಎಂದರೆ ಹೆಚ್ಚಿನ ಕಣ್ಣು ಎಂದರ್ಥ. ಇದು ಷೋಡಷಕರ್ಮಗಳಲ್ಲಿ ಒಂದಾಗಿದ್ದು ಸಂಸ್ಕಾರಗಳಲ್ಲಿ ಮುಖ್ಯವಾದ ಘಟ್ಟ.. ಕಾಲ ಮುಂದೂಡದೆ ಮಕ್ಕಳಿಗೆ ಈ ಸಂಸ್ಕಾರವನ್ನು ಮಾಡಿದರೆ ಅದರಿಂದ ಅವರು ಓಜಸ್ಸು, ತೇಜಸ್ಸುಗಳನ್ನು ಪಡೆದು ಅವರ ಮುಂದಿನ ಜೀವನಕ್ಕೆ ಒಳ್ಳೆಯ ದಾರಿ ಸಿಗುತ್ತದೆ.

ಸಂಧ್ಯಾವಂದನೆಯ ಮಹತ್ವ

ನಮ್ಮ ಋಷಿಗಳು ತಾವು ಅನುಭವದಿಂದ ಕಂಡುಕೊಂಡ ಸತ್ಯವನ್ನು ಈ ಸಂಧ್ಯಾವಂದನೆಯ ಮಂತ್ರಗಳಲ್ಲಿ, ಕ್ರಿಯೆಗಳಲ್ಲಿ ಅಳವಡಿಸಿ ನಮಗೆ ಕೊಟ್ಟಿದ್ದಾರೆ. ಸಂಪೂರ್ಣ ಮಾನಸಿಕ ಹಾಗೂ ದೈಹಿಕ ಬೆಳವಣಿಗೆಯಾಗಲು ಬೇಕಾದ ಸಕಲವೂ ಇದರಲ್ಲಿದೆ. ಆಕ್ಯುಪ್ರೆಶರ್ ಎಂಬ ಚೀನೀ ಪದ್ಧತಿಗೆ ನಮ್ಮ ಈ ಚರ್ಯೆಗಳು ಹೊಂದುತ್ತವೆ ಮತ್ತು ಗಾಯತ್ರೀ ಜಪವನ್ನು ಭ್ರೂಮಧ್ಯೆ ಮಾಡುತ್ತಾ ಏಕಾಗ್ರತೆಯನ್ನು ಸಾಧಿಸಲು ಪ್ರಯತ್ನಿಸುವಂತೆ ಹೇಳುತ್ತಾರೆ. ನಮ್ಮ ಲೌಕಿಕ ಪ್ರಪಂಚದ ಓದು ಬರಹಗಳಿಗೂ ಈ ಏಕಾಗ್ರತೆ ಬೇಕಾಗಿರುವುದರಿಂದ, ಪ್ರತಿದಿನ ಎರಡು ಹೊತ್ತಾದರೂ ಸರಿಯಾಗಿ ಸಂಧ್ಯಾವಂದನೆ ಮಾಡಿದರೆ ಜ್ಞಾನವೃದ್ಧಿಯಾಗಲು ಸಹಾಯವಾಗುತ್ತದೆ. ವಟುಗಳಿಗೆ ಮಂತ್ರಗಳ ಅರ್ಥವನ್ನು ತಿಳಿಸಿ ಹೇಳಿದರೆ ಅವರ ಮನಸ್ಸೂ ವಿಶಾಲವಾಗಿ, ಸ್ವಾರ್ಥ ಕಮ್ಮಿಯಾಗುತ್ತದೆ.

ದಿನ ನಿತ್ಯವೂ ಸಂಧ್ಯಾವಂದನೆ ಮೂಲಕ ಜಪ ಮಾಡುವುದನ್ನು ಕಲಿಸಬೇಕು. ಆ ದಿನದಿಂದ ಅಂದರೆ ಉಪನಯನವಾದ ದಿನದಿಂದ ಇಪ್ಪತ್ನಾಲ್ಕು ಲಕ್ಷ ಗಾಯತ್ರಿ ಜಪ ಮಾಡಿದರೆ ಆ ದೇವಿ ಒಲಿಯುತ್ತಾಳೆ ಎಂದು ಹೇಳುತ್ತಾರೆ. ಅಷ್ಟೆಲ್ಲ ಆಗದಿದ್ದರೂ ದಿನಕ್ಕೆ 108 ಗಾಯತ್ರಿ ಜಪವನ್ನಾದರೂ ಮಾಡಬೇಕು.

ಉಪನಯನ ಕಾರ್ಯಕ್ರಮಗಳು

ಸಾಮಾನ್ಯವಾಗಿ ಉಪನಯನವನ್ನು ಉತ್ತರಾಯಣದಲ್ಲಿ ಚೈತ್ರ, ವೈಶಾಖ, ಜೇಷ್ಠಮಾಸಗಳಲ್ಲಿ ಮಾಡುತ್ತಾರೆ. ಪುರೋಹಿತರಿಂದ ಜಾತಕ ನೋಡಿಸಿ ಒಳ್ಳೆಯ ದಿನವನ್ನು ಗೊತ್ತುಮಾಡುತ್ತಾರೆ. ಆಮೇಲೆ ಲಗ್ನಪತ್ರಿಕೆ ಮಾಡಿಸಿ ಮುಂದಿನ ಕೆಲಸ ಮಾಡುತ್ತಾರೆ. ಇದರ ಸಂಪ್ರದಾಯಗಳೆಲ್ಲ ಹೆಚ್ಚು ಕಡಮೆ ಮದುವೆ ರೀತಿಯಲ್ಲೇ ಇರುತ್ತದೆ. ಚಪ್ಪರ, ಅಣೆ ತಟ್ಟೆ ಕನ್ನಡಿ ಕಳಸ, ಹಸೆಮಣೆ, ಚಪ್ಪರ ಪೂಜೆ, ಮನೆದೇವರ ಪೂಜೆ, ನಾಂದಿ ಇರುತ್ತದೆ, ಮಲ್‌ನೀರು, ಗೋದಿಕಲ್ ಶಾಸ್ತ್ರವು ಇದೆ. ಇದರಲ್ಲಿ ತಾಯಿ ಮನೆಯ ಸೀರೆ ಉಟ್ಟುಕೊಂಡು ಎಳೆ ಹಾಕಬೇಕು.

ಹುಡುಗನಿಗೆ ಗೋದಿಕಲ್ಲು ಶಾಸ್ತ್ರದ ನಂತರ ತಾಯಿ ಮಡಿಲಲ್ಲಿ ಅಕ್ಕಿ, ತೆಂಗಿನಕಾಯಿ, ವಿಳ್ಳೇದೆಲೆ ಅಡಕೆ ಇಟ್ಟು ಅದರಲ್ಲಿ ಒಂದು ಉಂಗುರ ಮುಚ್ಚಿಟ್ಟು 'ಮುತ್ತು ಕಂಡ್ಯೋ ಮುಗುಳ ಕಂಡ್ಯೊ, ಮುತ್ತಿನಂಥ ಜನಿವಾರ ಕಂಡ್ಯೋ' ಎಂದು ಹೇಳಿ ಇದೇ ರೀತಿ ಮೂರುಸಲ ಹುಡುಕಿಸಿ ತೆಗೆಯಬೇಕು. ಇದೆಲ್ಲವನ್ನೂ ದೇವರ ಸಮಾರಾಧನೆ ದಿನ ಮಾಡುವುದು.

ಮುಂಜಿಗೆ ಬೇಕಾದ ಎಲ್ಲಾ ವಸ್ತುಗಳನ್ನೂ ಪುರೋಹಿತರನ್ನು ಕೇಳಿ ಮೊದಲೇ ತಂದಿಟ್ಟುಕೊಳ್ಳಬೇಕು. ಮಾರನೆಯ ದಿನ ಇಟ್ಟಿರುವ ಲಗ್ನವನ್ನು ಸಾಧಿಸಲು ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಪುರೋಹಿತರನ್ನು ಕೇಳಿ ಪೂರ್ವದಿಕ್ಕಿಗೆ ಹಸೆಮಣೆ ಹಾಕಿ ಸುತ್ತಲೂ ರಂಗೋಲಿ, ದೀಪದ ಕಂಬ ಇಟ್ಟು ಅಲಂಕರಿಸಬೇಕು. ತಂದೆ ತಾಯಿ, ಹುಡುಗ, ಕಳಸಗಿತ್ತಿ ಇವರುಗಳನ್ನು ಹಸೆಯ ಮೇಲೆ ಕೂಡಿಸಿ ಎಣ್ಣೆಶಾಸ್ತ್ರ ಮಾಡಿದ ಮೇಲೆ ಸ್ನಾನ, ಸ್ನಾನದ ನಂತರ ಚೌಲಪಂಕ್ತಿ ಊಟ (ಮಾತೃ ಭೋಜನ), ನಂತರ ಚೌಲ. ಇದನ್ನು ಚೂಡಾಕರ್ಮದಲ್ಲಿ ಮಾಡುವಂತೆಯೇ ಮಾಡಿ ಸ್ನಾನ ಮಾಡಿಸಿದ ಮೇಲೆ ಹುಡುಗನ ಹಣೆಗೆ ಗೋಪಿಚಂದನವನ್ನು ಈ ರೀತಿ ಣ- ಮೊರದಾಕಾರದಲ್ಲಿಡಬೇಕು. ಹಳದಿ ಪಂಚೆ ಉಡಿಸಿ, ಹೆಗಲ ಮೇಲೆ ಇನ್ನೊಂದು ಹಳದಿ ಪಂಚೆಯನ್ನು ಹೊದಿಸಬೇಕು. ಹುಡುಗನು ಕೌಪೀನ ಹಾಕಿಕೊಂಡಿರಬೇಕು. ಕೊರಳಿಗೆ ಒಂದು ಸರ ಹಾಕಿರಬೇಕು.

ಹಳದಿ ಪಂಚೆಯನ್ನು ಮಾಡುವ ವಿಧಾನ:

ಒಂದು ಬಕೆಟ್‌ನಲ್ಲಿ ನೀರು ಹಾಕಿ ಅದಕ್ಕೆ ಎರಡರಿಂದ ಮೂರು ಹಿಡಿ ಅರಿಸಿನದ ಪುಡಿ ಹಾಗೂ ಸ್ವಲ್ಪ ಹುಣಸೇ ಹಣ್ಣಿನ ರಸ ಹಾಕಿ ಎರಡು ಜೊತೆ ಪಂಚೆ, ಶಲ್ಯ ಮತ್ತು ಕೌಪೀನವನ್ನು ಚೆನ್ನಾಗಿ ನೆನೆಸಿ ನಾಲ್ಕೈದು ಗಂಟೆಗಳ ಕಾಲ ಹಾಗೇ ಇಡಬೇಕು. ಆಮೇಲೆ ಚೆನ್ನಾಗಿ ಜಾಲಾಡಿ ಬಿಸಿಲಿಗೆ ಹಾಕಿ ಒಣಗಿಸಿ ಇಡಬೇಕು.

ಲಗ್ನ ಇಟ್ಟ ಹೊತ್ತಿಗೆ ಸರಿಯಾಗಿ ಉಪನಯನ ಲಗ್ನವನ್ನು ಸಾಧಿಸಬೇಕು. ನಂತರ ಎಳೆಯನ್ನು ಹಾಕಿ ಗಾಯತ್ರಿ ಉಪದೇಶ ಮಾಡಿ ಅಕ್ಷತೆ ಹಾಕಿ ಆಶೀರ್ವಾದ ಮಾಡಿ ಕೊಬ್ಬರಿ ಸಕ್ಕರೆ ಹಂಚಬೇಕು. ಉಪನಯನ ಸಂದರ್ಭದಲ್ಲಿ ಸೊಂಟಕ್ಕೆ ಮೌಂಜಿ ಕಟ್ಟಿರುತ್ತಾರೆ. ಇದನ್ನು ಒಂದು ಹುಲ್ಲಿನಿಂದ ತಯಾರುಮಾಡುತ್ತಾರೆ. ಇದು ಮಲೆನಾಡಿನಲ್ಲಿ ಸಿಕ್ಕುತ್ತದೆ. ಇಲ್ಲದಿದ್ದರೆ ಇದನ್ನು ದರ್ಭೆಯಿಂದ ತಯಾರು ಮಾಡುತ್ತಾರೆ.

ಭಿಕ್ಷೆ

ವಟುವಿನ ಕೈಯಲ್ಲಿ ಒಂದು ದಂಡವನ್ನು ಕೊಡಬೇಕು. ವಟುವು ಇದನ್ನು ಎಡಗಡೆ ಇಟ್ಟುಕೊಂಡು ಬಲಗೈಯಲ್ಲಿ ಒಂದು ತಟ್ಟೆ ಮತ್ತು ಅದರಲ್ಲಿ ಒಂದು ಬಟ್ಟಲು ಇಟ್ಟುಕೊಳ್ಳಬೇಕು. ತಲೆಗೆ ಹೊಸ ಟೋಪಿ ಹಾಕಿ ನಿಂತುಕೊಂಡು ವಟುವು ಭಿಕ್ಷೆ ಕೇಳಬೇಕು. ಮೊದಲು ತಾಯಿ ಭಿಕ್ಷೆ ಗೋಧಿ. ಇದು ಶ್ರೇಷ್ಠವಾದ ಭಿಕ್ಷೆ. ಪುರೋಹಿತರು ಹೇಳಿಕೊಟ್ಟಂತೆ ವಟು ಪ್ರವರವನ್ನು ಹೇಳಬೇಕು. ನಂತರ ತಾಯಿಯು ವಟುವಿನ ಹಣೆಗೆ ಕುಂಕುಮ ಇಟ್ಟು ಈ ಸಂದರ್ಭಕ್ಕೆ ಸಂಬಂಧಿಸಿದ ಹಾಡನ್ನು ಹೇಳುತ್ತಾ ಬಟ್ಟಲ ಒಳಗೆ ಭಿಕ್ಷೆ ಇಡಬೇಕು. ಸಂಬಂಧಿಸಿದ ಹಾಡನ್ನು ಕೆಳಗೆ ಮುದ್ರಿಸಲಾಗಿದೆ. ಭಿಕ್ಷೆಯ ಆರಂಭದಲ್ಲಿ ಗೋಧಿ, ಕಡ್ಲೆಬೇಳೆ, ಬೆಲ್ಲದಚ್ಚು ಇವುಗಳನ್ನು ವಿಳ್ಯೇದೆಲೆ ಅಡಿಕೆ ಸಮೇತ ಇಡಬೇಕು. ವಟುವು ಭವತೀ ಭಿಕ್ಷಾಂದೇಹಿ ಎಂದು ಹೇಳುತ್ತಿರಬೇಕು. ಇದಾದ ಮೇಲೆ ಮೊದಲೇ ಸಿದ್ಧಪಡಿಸಿರುವ (ಪುರಿ, ಹುರಿಗಡಲೆ, ಅರಳು, ಕಡಲೆಬೀಜ, ಎಳ್ಳು ಇವುಗಳಿಂದ ಮಾಡಿದ) ಐದು ಬಗೆಯ ಉಂಡೆಗಳ ಪೈಕಿ ಒಂದೊಂದನ್ನೂ ಐದರಂತೆ ಐದು ತಟ್ಟೆಗಳಲ್ಲಿಡಬೇಕು. ಐದು ಬಗೆಯ ಹಣ್ಣುಗಳು (ಬಾಳೆ, ಸೇಬು, ಕಿತ್ತಳೆ, ಮೂಸಂಬಿ, ದ್ರಾಕ್ಷಿ), ಆ ಕಾಲದಲ್ಲಿ ಸಿಕ್ಕುವಂತಹ ಹಣ್ಣುಗಳು, ಐದು ತೆಂಗಿನಕಾಯಿ, ಕಡ್ಲೇಬೇಳೆ ಇವುಗಳನ್ನು ಇಟ್ಟಾದ ಮೇಲೆ ಸ್ವಲ್ಪ ಅಕ್ಕಿಯನ್ನು ಇಡಬಹುದು. ತಾಯಿಯು ಭಿಕ್ಷೆ ಹಾಡನ್ನು ಹೇಳುತ್ತಾ ಭಿಕ್ಷೆ ಇಡಬೇಕು.

ವಟುವಿಗೆ ಭಿಕ್ಷೆ ಇಡುವಾಗ ತಾಯಿ ಹೇಳುವ ಸಂಪ್ರದಾಯದ ಹಾಡು:

ಬಾಲಕನಿಗೆ ಭಿಕ್ಷವ । ಲೀಲೆಯಿಂದಲಿ
ಲೋಲಲೋಚನೆ । ಇಟ್ಟಳು
ಸಿದ್ಧದಾಯಕನನ್ನು । ಭಜಿಸುತ
ಮುದ್ದು ಶಾರದೆಗೆರಗಿ । ವಂದಿಸಿ ಬದ್ಧದಿಂ
ಸಿರಿ ಅರಸಿ ಗೌರೀತನಯ ಪಾಲಿಸಿ
ಕಾಯೋ ಎನ್ನುತ ॥ಬಾಲಕನಿಗೆ॥
ವೇದವನೊರೆ ಓದಲನುಗುಣವಾದ
ಪದವಂ ಪೊಂದಿ ಹೊಂದಲು
ವಿನೋದಿಂದನುವಾದ । ರತುನಗಳಿಂದ
ಸುತನನು ಹರಸುತಲಿ ತಾಂ ॥ಬಾಲಕನಿಗೆ॥

ಅನಂತರ ಯಾರು ಬೇಕಾದರೂ ವಟುವಿಗೆ ಭಿಕ್ಷೆ ಇಡಬಹುದು. ಅದೇ ಆದಿನದ ಸಂಭ್ರಮ. ಏಕೆಂದರೆ ಆ ದಿನ ಅವನು ದ್ವಿಜನಾಗಿರುವುದರಿಂದ ಆ ದಿನ ನೀಡಿದ ಭಿಕ್ಷೆ ಬಹಳ ಶ್ರೇಷ್ಠವೆಂದು ಹೇಳಿದ್ದಾರೆ. ಊಟದಲ್ಲೂ ಸಹ ಭಿಕ್ಷೆ ಹಾಕಿಸಿಕೊಂಡು ಅದನ್ನೇ ತಿನ್ನಬೇಕೆಂದಿದೆ. ಏಕೆಂದರೆ ಉಪನಯನ ಆದ ದಿನದಿಂದ ಭಿಕ್ಷೆ ಬೇಡಿ ವೇದಾಭ್ಯಾಸ ಮಾಡಬೇಕು. ಇದಕ್ಕೆ ಎಷ್ಟು ಮಹತ್ವ ಇದೆ ಎಂದರೆ ಶಂಕರರು ಭಿಕ್ಷೆ ಬೇಡಲು ಹೋದಾಗ ಒಬ್ಬರ ಮನೆಯಲ್ಲಿ ಏನೂ ಇರಲಿಲ್ಲ. ಆ ಮನೆಯಾಕೆಯು ಒಂದು ಜಾಡಿಯಲ್ಲಿ ಒಂದು ನೆಲ್ಲಿಕಾಯಿ ಉಪ್ಪಿನಕಾಯಿ ಇದ್ದುದನ್ನು ತಂದು ಹಾಕಿದಳು. ಅವರು ಅದನ್ನು ನೋಡಿ ಲಕ್ಷ್ಮಿಯನ್ನು ಕನಕಧಾರಾ ಸ್ತೋತ್ರದಿಂದ ಪ್ರಾರ್ಥಿಸಿದಾಗ

ಅವರ ಮನೆಯ ನೆಲ್ಲಿಕಾಯಿ ಗಿಡದಲ್ಲಿ ಚಿನ್ನದ ನೆಲ್ಲಿಕಾಯಿಗಳು ಉದುರಿದವೆಂದು ಪ್ರತೀತಿ. ಕಾಲಟಿಯಲ್ಲಿ ಈಗಲೂ ಅವರ ವಂಶಸ್ಥರು ಇದ್ದಾರೆಂದು ಹೇಳುತ್ತಾರೆ. ಭಿಕ್ಷೆ ಆದಮೇಲೆ ಫಲಪೂಜೆ ಆರತಿ ಮಾಡಬೇಕು. ನಂತರ ಭಿಕ್ಷೆ ಇಟ್ಟ ಮುತ್ತೈದೆಯರಿಗೆಲ್ಲಾ ಉಂಡೆ ಚಕ್ಕುಲಿ ಬಾಗಿನ ಕೊಡಬೇಕು.

ಅಶ್ವಥ್ಥ ಕಟ್ಟೆ ಪೂಜೆ

ಪಾನಕ, ಕೋಸಂಬರಿ, ಪೂಜಾ ಸಾಮಗ್ರಿಗಳು, ಮತ್ತು ಕನ್ನಡಿ ಕಳಸ, ಕೆಳಗೆ ಅಣಿತಟ್ಟೆ ಎಲ್ಲವನ್ನೂ ತೆಗೆದುಕೊಂಡು ಅಶ್ವತ್ಥಕಟ್ಟೆಗೆ ಹೋಗಬೇಕು. ವಟುವಿನ ಕೈಲಿ ಇದ್ದ ದಂಡವನ್ನು ಅಶ್ವತ್ಥಕಟ್ಟೆ ಪೂಜೆ ಆದ ಮೇಲೆ ಅಲ್ಲೇ ಬಿಟ್ಟು ಬರಬೇಕು. ಎಲ್ಲರೂ ಅಶ್ವಥ್ಥಕಟ್ಟೆಗೆ ಪೂಜೆ, ಪ್ರದಕ್ಷಿಣೆ ಮಾಡಿ ಅಲ್ಲಿರುವವರಿಗೆ ನೈವೇದ್ಯ ಮಾಡಿದ ಪಾನಕ, ಕೋಸಂಬರಿ ಇವುಗಳನ್ನು ಕೊಡಬೇಕು. ವಟುವು ಅಶ್ವಥ್ಥ ಕಟ್ಟೆಯಿಂದ ಬರುವ ಹೊತ್ತಿಗೆ ಬಾಗಿಲಿನಲ್ಲಿ ಮಣೆ ಹಾಕಿ ಒಂದು ಕಪ್ ಹಾಲು ಇಟ್ಟಿರಬೇಕು. ಇಲ್ಲಿ ವಟುವಿನ ತಂಗಿ ಅಥವಾ ಅಕ್ಕ ಹಾಲಿನಲ್ಲಿ ಅವನ ಕಾಲು ತೊಳೆದು ಅರಿಸಿನ ಕುಂಕುಮ ಹಚ್ಚಬೇಕು. ನಂತರ ವಟು ಮತ್ತು ಅವನ ಕಾಲು ತೊಳೆದ ಅಕ್ಕ ಅಥವಾ ತಂಗಿಯನ್ನು ನಿಲ್ಲಿಸಿ ಆರತಿ ಮಾಡಿದ ಮೇಲೆ ಒಳಗೆ ಬರಬೇಕು. ವಟುವು ಆ ತಂಗಿಗೆ/ಅಕ್ಕನಿಗೆ ಬಟ್ಟೆ ಮುಂತಾದ ಉಡುಗೊರೆ ಕೊಡುವ ಪದ್ಧತಿ ಇದೆ.

ಬ್ರಹ್ಮ ಭೋಜನ

ಹಿಂದಿನ ಕಾಲದಲ್ಲಿ ಇದನ್ನು ರಾತ್ರಿವೇಳೆ ಮಾಡುತ್ತಿದ್ದರು. ಈಗಿನ ಕಾಲದಲ್ಲಿ ಉಪನಯನ ಆದ ನಂತರವೇ ಮುಗಿಸುತ್ತಾರೆ. ಬ್ರಹ್ಮಭೋಜನ ಆದಮೇಲೆ ಮಿಕ್ಕವರಿಗೆ ಭೋಜನವನ್ನು ಏರ್ಪಡಿಸಬಹುದು. ಐದು ಅಥವಾ ಆರು ಜನ ಋತ್ವಿಕರುಗಳಿಗೆ ಎಲೆ ಹಾಕಿ ಅವರನ್ನು ಊಟಕ್ಕೆ ಕೂರಿಸಿ ವಟುವಿನ ಎಲೆಯ ಮುಂದೆ ರಂಗೋಲಿ ಹಾಕಿ, ಎಲೆ ಮುಂದೆ ದೀಪ ಹಚ್ಚಿಡಬೇಕು. ವಟುವಿಗೆ ಕುಂಕುಮ ಇಟ್ಟು ಆರತಿ ಮಾಡಿದ ಮೇಲೆ ವಟುವು ಭಿಕ್ಷೆಯ ಬಟ್ಟಲನ್ನು ತೆಗೆದುಕೊಂಡು 'ಭವತಿ ಭಿಕ್ಷಾಂ ದೇಹಿ' ಎಂದು ಹೇಳುತ್ತ ಎಲ್ಲರ ಎಲೆಯ ಮುಂದೆ ಬಂದು ಭಿಕ್ಷೆಯನ್ನು ಕೇಳಬೇಕು. ಅದನ್ನು ತನ್ನ ಎಲೆಗೆ ಹಾಕಿಕೊಂಡು ಪರಿಶೇಚನೆ ಮಾಡಿ ಮೌನವಾಗಿ ಊಟಮಾಡಬೇಕು. ಊಟಕ್ಕೆ ಮೊದಲು ವಟುವಿನ ತಂದೆಯು ಎಲ್ಲರಿಗೂ ಆಪೋಶನ ಹಾಕಬೇಕು.

ಭಿಕ್ಷಾನ್ನ

ವಿದ್ಯಾರ್ಥಿ ಜೀವನದಲ್ಲಿ ಅನ್ನವನ್ನು ಬೇರೆ ಗೃಹಿಣಿಯರಿಂದ ಬೇಡಿ ಪಡೆಯಬೇಕು ಎಂಬುದೇ ಊಟಕ್ಕೆ ಕುಳಿತಾಗ ಭಿಕ್ಷೆ ಬೇಡುವುದರ ದ್ಯೋತಕ. ಇದರಿಂದ ದೇಹದ ಪೋಷಣೆಗೆ ಆಹಾರ, ಪಂಚಪ್ರಾಣಗಳಿಗೆ ಕೊಡುವ ಹವಿಸ್ಸು ಎಂಬ ಅರಿವು ಉಂಟಾಗಿ ಅಹಂಕಾರ ಅಳಿಯುತ್ತದೆ. ಮೊದಲು ವೈಶ್ವಾನರನಿಗೆ ನಮಸ್ಕರಿಸಿ ಆಹಾರ ಸ್ವೀಕರಿಸಬೇಕು. ಹೀಗೆ ಆಹಾರದ, ಹಸಿವಿನ ಬೆಲೆ ತಿಳಿಯುತ್ತದೆ. ಎಲ್ಲರೂ ನನ್ನ ತಾಯಿಯ ಸಮಾನ, ಸಮಾಜಕ್ಕೆ ನಾನು ಕೃತಜ್ಞನಾಗಿರಬೇಕು ಎಂಬ ಭಾವನೆಗಳಿಂದ ವಟು ಒಳ್ಳೆ ಸಂಸ್ಕಾರಯುತ ಪ್ರಜೆ ಆಗಲು ನಾಂದಿಯಾಗುತ್ತದೆ.

ಹಿರಿಯರು ಹೆಣ್ಣು ಮಕ್ಕಳನ್ನು ಎಷ್ಟು ಜೋಪಾನ ಮಾಡುತ್ತಿದ್ದರೋ ಅಷ್ಟೇ ಧೈರ್ಯವಾಗಿ ಗಂಡು ಮಕ್ಕಳಿಗೆ ಸ್ವಬುದ್ಧಿ, ಸ್ವಶಕ್ತಿಯಿಂದ ಸತ್ಪ್ರಜೆಯಾಗಲು ಅವಕಾಶ ಮಾಡಿಕೊಡುತ್ತಿದ್ದರು. ಅವರನ್ನು ಹೊರಗೆ ಕಳುಹಿಸುವುದಕ್ಕೆ ಮುನ್ನ ಮುಂಜಿ ಎಂಬ ಸಮಾರಂಭವನ್ನು ತಂದೆ ತಾಯಿ, ಗುರು, ಹಿರಿಯರೂ, ಬಂಧು ಬಾಂಧವರೂ ಕೂಡಿ ನಡೆಸಿ ಮಗನ ವಿದ್ಯೆ, ಬುದ್ಧಿ, ಕೀರ್ತಿ ಗೌರವ ಮುಂತಾದವುಗಳ ಮೇಲೆ ತಮಗಿರುವ ಕಳಕಳಿಯನ್ನು ತೋರಿಸುತ್ತಿದ್ದರು. 'ದೇಶ ತಿರುಗಿ ಭಾಷೆ ಕಲಿ' ಎಂಬ ಗಾದೆ ಈಗ ರೂಢಿಗೆ ಬಂದಿದೆ. ಹೀಗೆ ದೇಶ ದೇಶ ತಿರುಗುವಾಗ ತಮ್ಮ ಮಗನು ಅನಾಮಧೇಯನಲ್ಲ, ಪವಿತ್ರ ಕುಲದಲ್ಲಿ ಪವಿತ್ರನಾಗಿ ಹುಟ್ಟಿದವನು ಎನ್ನುವ ಮುದ್ರೆಯನ್ನು (ಅಂಕಿತ) ಒತ್ತಿಯೇ ಕಳುಹಿಸುತ್ತಿದ್ದರು. ಅದೇ ವಟುವು ಹೇಳುವ ಪ್ರವರ. ಇದರಲ್ಲಿ ಅವನ ಮೂಲ ಪುರುಷರಿಂದ ತನ್ನವರೆಗೂ ವಿವರಗಳು ಇವೆ. ಇದರಿಂದ ತಮ್ಮ ಮಗ ಎಲ್ಲಿದ್ದರೂ ನಮ್ಮವನೇ ಎಂಬ ಭಾವನೆ ತಂದೆ ತಾಯಿಯರಿಗೆ ಉಂಟಾಗುತ್ತಿತ್ತು. ವಿದ್ಯೆ ಬಗ್ಗೆ ಸಂಸ್ಕೃತದ ಸುಭಾಷಿತದಲ್ಲಿ ಹೀಗೆ ಹೇಳಿದೆ.

ವಿದ್ಯಾ ದದಾತಿ ವಿನಯಂ । ವಿನಯಾದ್ಯಾತಿ ಪಾತ್ರತಾಂ ।
ಪಾತ್ರತ್ವಾದ್ಧನಮಾಪ್ನೋತಿ । ಧನಾದ್ಧರ್ಮಂ ತತಃ ಸುಖಂ ॥

ವಿದ್ಯೆಯು ವಿನಯವನ್ನು ದೊರಕಿಸಿಕೊಡುತ್ತದೆ. ವಿನಯದಿಂದ ಪದವಿಯನ್ನು ಪಡೆಯುತ್ತಾನೆ. ಪದವಿಯಿಂದ ಪೂಜ್ಯತೆಯನ್ನು ಪಡೆಯುತ್ತಾನೆ. ಪದವಿಯಿಂದ ಧನವನ್ನು ಸಂಪಾದಿಸುತ್ತಾನೆ. ಧನದಿಂದ ಧರ್ಮವನ್ನೂ ಸುಖವನ್ನೂ ಪಡೆಯುತ್ತಾನೆ.

ವಿದ್ವತ್ವಂಚ ನೃಪತ್ವಂಚ ನೈವತುಲ್ಯೇ ಕದಾಚನ
ಸ್ವದೇಶೇ ಪೂಜ್ಯತೇ ರಾಜಾ ವಿದ್ವಾನ್ ಸರ್ವತ್ರ ಪೂಜ್ಯತೇ

ವಿದ್ವತ್ತಿಗೂ ರಾಜತ್ವಕ್ಕೂ ಎಂದೂ ಸಮತ್ವವಾಗುವುದಿಲ್ಲ. ರಾಜನು ತನ್ನ ದೇಶದಲ್ಲಿ ಮಾತ್ರ ಗೌರವಿಸಲ್ಪಟ್ಟರೆ ವಿದ್ವಾಂಸನು ಎಲ್ಲ ಕಡೆಯೂ ಪೂಜಿಸಲ್ಪಡುವನು ಎಂಬುದು ಈ ಶ್ಲೋಕಗಳ ಅಭಿಪ್ರಾಯ. ಆದ್ದರಿಂದ ತಮ್ಮ ಮಕ್ಕಳು ಧರ್ಮಿಷ್ಟರಾಗಿ ಬಾಳಲು ಅಕ್ಷಯ ಧನವಾದ ಅಕ್ಷರವಿದ್ಯೆಗೆ (ಕ್ಷಯವಿಲ್ಲದ್ದು) ಹೆಚ್ಚು ಮಹತ್ವ ಕೊಟ್ಟು ತಮ್ಮ ಮಕ್ಕಳನ್ನು ಕೀರ್ತಿವಂತನಾಗಿ ಬೆಳೆಸಲು ಆಶಿಸುತ್ತಿದ್ದರು.

ಗಾಯತ್ರಿ ಹಾಡು

ಇದನ್ನು ಬ್ರಹ್ಮೋಪದೇಶವಾದ ತಕ್ಷಣ ಹೇಳಬೇಕು. ಏಕೆಂದರೆ ಅಲ್ಲಿ ಗಾಯತ್ರಿ ಬಂದಿರುತ್ತಾಳೆಂಬ ಭಾವನೆ.


ಬಂದು ಕುಳಿತಳು ನೋಡಿ ಗಾಯತ್ರಿಯು
ನಿಂದು ಕಣ್ ತೆರೆದು ನೋಡಿ ॥ ಬಂದು ॥
ಮೂರು ವರ್ಣದ ಕಾಯವು ಗಾಯತ್ರಿಗೆ
ಆರು ಬಣ್ಣದ ಉಡಿಗೆಯೂ
ಏರಿಸಿಗಳ ಪಂಚ ಬ್ರಹ್ಮನ ಮೇರುವಿಗೆ

ಹನ್ನೆರಡು ಗೋಣಸಗಳ್ । ಸೇರಿಸಿ ಉಯ್ಯಾಲೆ ಆಡುವ
ಮೂರು ಲೋಚನೆ ಮುಕ್ತಿ ಕಾಂತೆಯು ॥ಬಂದು॥
ನೀಲ ದರ್ಪಣ ಪಿಡಿದು ಕೆಂಪಿನ ಬಟ್ಟು ಫ಼ಾಲ
ಮಧ್ಯದೊಳಿಟ್ಟು ವಾಲೆ ಝುಮಕಿಯು ಸರಿಗೆ
ಸರವು ಮೇಲೆ ಸಾಸಿರ ದೀಪ ಪದ್ಮದೊಳ್ ಲೀಲೆ
ಇಂದು ಮನೆಯೊಳಾಡುವ ಏಳು ಕೋಡಿ ಸುಂಕಮಂತ್ರ ದೇವತೆ ॥ಬಂದು॥
ಮಿಸುಣೆ ವಜ್ರಗಳ ರುಚಿ ಎಸೆವರು ಕಳಸಂಗಳು
ಅಸಮ ಸಿಂಹಾಸನದಿ ರಾಜಿಪ ದೆಸೆಗೆ ಹತ್ತವತಾರ
ಕೆತ್ತಿದೆ ಮಿಸುಣೆ ವಾಡ್ವಣ್‌ವಿಟ್ಟು ನಡುವಲಿ
ನಸುನಗುತ ಸಾವಿತ್ರಿ ದೇವಿಯು ॥ಬಂದು॥
ವರ ಕೂಚ ಯುಗದಿ ಮಧ್ಯ ದ್ವಾದಶ ವಜ್ರ
ಸ್ಫಟಿಸಿ ತೋರುವ ಪದಕ ಎರಡು ಮೂರೈದು ಸೇರಿದ
ಸರವು ಏಕಾವಳಿಯು ಕಂಠದಿ ಧರಿಸಿ
ವೈಖರಿ ರೂಪಿನಿಂದಲೆ ಪೊರೆವ ಬ್ರಹ್ಮಾತ್ಮಕ್ಯ ಸರಸ್ವತಿ ॥ಬಂದು॥
ಚಿತ್ರ ನಕ್ಷತ್ರದಂತೆ ವಿಪ್ರಾರ್ಚಿಪಮುತ್ತಿನ
ಮೂಗುತಿಯ ಸತ್ತು ಚಿತ್ತಾನಂತ ರೂಪಿಣಿ
ಮತ್ತೆ ಮಾಯಾ ಕಲುಷಹಾರಿಣೆ ಕರ್ತೃ ಗುರುಮಹ ರಂಗ
ಲಿಂಗನ ಶಕ್ತಿ ಸಾಕ್ಷಾತ್ ತ್ರಿಪುರಸುಂದರಿ ॥ ಬಂದು॥

ಪ್ರಥಮ ಮಾಸಿಕ ರಜೋದರ್ಶನ (ಪುಷ್ಪವತಿ, ಮೈನೆರೆಯುವುದು)

ಇದು 11ನೇ ವಯಸ್ಸಿನಿಂದ 15ನೇ ವಯಸ್ಸಿನ ಹೆಣ್ಣು ಮಕ್ಕಳಿಗೆ ಆಗುವ ಒಂದು ಘಟ್ಟ. ಇದು ದೇಹ ಬಹಳ ಸೂಕ್ಷ್ಮವಾಗಿರುವ ಕಾಲ. ಸ್ವಲ್ಪ ಎಚ್ಚರವಾಗಿರಲು ದೊಡ್ಡವರು ಮೊದಲೇ ತಿಳಿಸಿರಬೇಕು ಮತ್ತು ಇದನ್ನು ಎದುರಿಸಲು ಸಿದ್ಧವಾಗಿರಬೇಕು. ಮಗಳು ಈ ವಯಸ್ಸಿನಲ್ಲಿ ಪುಷ್ಪವತಿ ಆದಾಗ ದೊಡ್ಡವರು ಪರೀಕ್ಷಿಸಿ ಇದು ಸಹಜ ಕ್ರಿಯೆ, ಎಲ್ಲ ಹೆಣ್ಣು ಮಕ್ಕಳಿಗೂ ಆಗುವಂತಹುದೆಂದು ಪ್ರೀತಿಯಿಂದ ತಿಳಿಸಿ ಹೇಳಿ ಆ ಹುಡುಗಿಯು ಆ ತಕ್ಷಣ ಬಟ್ಟೆಯನ್ನು ಬದಲಾಯಿಸಿ ಬೇರೆ ಬಟ್ಟೆ ಹಾಕಿಕೊಂಡ ಮೇಲೆ ಬಂದು ತುತ್ತು ಮೊಸರನ್ನವನ್ನು ಕಲೆಸಿ ಕೈಗೆ ಹಾಕಿ ತಿನ್ನಲು ಹೇಳಿ ಅದೇ ದಿನ ಸಾಯಂಕಾಲ ದಡಬು ಹಾಸುವ ಸಂಪ್ರದಾಯ. ಅದನ್ನು ಹೀಗೆ ಮಾಡಬೇಕು. ಚಟ್ಟು ಬಡಿಸಿ ಅರಿಸಿನ ಮತ್ತು ಸುಣ್ಣದ ನೀರು ಸೇರಿಸಿ ಕದಡಿದರೆ ಅದು ಓಕುಳಿ ಆಗುತ್ತದೆ. ಇದನ್ನು ಅಂಗೈಯಲ್ಲಿ ಸವರಿಕೊಂಡು ಒಂದು ಹೊಸ ಬಿಳೀ ಬಟ್ಟೆಯ (ಕೆಳಗಿನ ಚಿತ್ರದಲ್ಲಿರುವಂತೆ) ನಾಲ್ಕು ಕಡೆ ಮೂಲೆಗೆ ಒತ್ತಿ ಚಟ್ಟು ಬಡಿಯುವುದು. ಒಂದು ಮಣೆ ಹಾಕಿ ರಂಗೋಲಿ ಇಟ್ಟು ಐದು ಜನ ಮುತ್ತೈದೆಯರು ಚಟ್ಟು ಬಡೆದ ಬಟ್ಟೆಯನ್ನು ಅದರ ಮೇಲೆ ಹಾಸಿ ಆ ಮಣೆಯ ಮುಂದೆ ಎರಡು ದೀಪ ಹಚ್ಚಿಡಬೇಕು. ಒಂದೊಂದು ಮೂಲೆಗೂ ಎಳ್ಳಿಂದ ಮಾಡಿದ ಚಿಗುಳಿ (ಎಳ್ಳು ಬೆಲ್ಲ ಹಾಕಿ

ಕುಟ್ಟಿದ), ವಿಳ್ಳೇದೆಲೆ ಅಡಿಕೆ, ದಕ್ಷಿಣೆ, ಎರಡು ಬಾಳೆಹಣ್ಣು ಇಡಬೇಕು. ಅದೇ ರೀತಿ ಮಣೆಯ ಮುಂದೆ ಒಂದು ತಟ್ಟೆಯಲ್ಲಿ ಎರಡು ಚಿಗುಳಿ, ಎರಡು ಮೂರು ತರಹದ ಹಣ್ಣುಗಳು, ತೆಂಗಿನಕಾಯಿ, ವಿಳ್ಳೇದೆಲೆ, ಒಂದು ಕಣ ಇಟ್ಟು ಹುಡುಗಿಗೆ ಮಡಿಲು ತುಂಬುವುದು. ತದನಂತರ ಹುಡುಗಿಯ ಪಕ್ಕ ಒಂದು ಹೆಣ್ಣು ಬೊಂಬೆಯನ್ನು ಇಡಬೇಕು. ನಂತರ ಆರತಿ ಮಾಡಿ ಆಮೇಲೆ ಆ ಪದಾರ್ಥಗಳನ್ನು ಅಗಸನಿಗೆ ಕೊಡುವುದು.



ಸಂಗಾತಿ ಊಟ

ಅವಳ ಜೊತೆಯವರೊಡನೆ ಆ ಹುಡುಗಿಯನ್ನು ದೂರ ಕೂರಿಸಿ ಹುಗ್ಗಿ, ಪಾಯಸ, ಎರೆಯಪ್ಪ ಮೊದಲಾದವುಗಳನ್ನು ಮಾಡಿ ಮೂರು ದಿನ ದಿನವೂ ಬೇರೆ ಬೇರೆ ಅಡುಗೆ ಮಾಡಿ ಊಟ ಹಾಕಿ ಸಾಯಂಕಾಲ ಆರತಿ ಮಾಡಿ ಚಿಗುಳಿ ಕೊಡುತ್ತಾರೆ. ಅರಿಸಿನ ಕುಂಕುಮ ಕೊಡುತ್ತಾರೆ. ಹದಿನಾರನೆಯ ದಿವಸ ಹುಡುಗಿಯ ಪುಷ್ಪವತಿಯಾದ ಕಾಲದ ನಕ್ಷತ್ರಕ್ಕೆ ಹೋಮ, ಶಾಂತಿ ಮಾಡುವುದಿದ್ದರೆ ಮಾಡಿ ನೆಂಟರಿಷ್ಟರಿಗೆ ಊಟ ಹಾಕುವ ಪದ್ಧತಿ ಉಂಟು. ದಡಬು ಹಾಸಿದವರಿಗೆ ಅರಸಿನ ಎಣ್ಣೆ ಕೊಟ್ಟು ನೀರು ಹಾಕಿಕೊಂಡು ಬರಲು ಹೇಳಬೇಕು. ಆ ದಿನ ಅವರಿಗೆ ಕುಪ್ಪಸದ ಕಣ, ಚಿಗಳಿ, ತಂಬಿಟ್ಟು, ಹಣ್ಣು, ತೆಂಗಿನ ಕಾಯಿ ಎಲ್ಲವನ್ನೂ ಇಟ್ಟು ಅರಿಸಿನ, ಕುಂಕುಮ ಕೊಡುವ ಸಂಪ್ರದಾಯ. ಗರ್ಭಕೋಶವು ಒಂದು ಗರ್ಭಗುಡಿ ಇದ್ದ ಹಾಗೆ. ಆದ್ದರಿಂದ ಅದನ್ನು ಶುಚಿಮಾಡಲು ಈ ಸಂಸ್ಕಾರಗಳನ್ನು ಮಾಡುತ್ತಾರೆ. ಏಕೆಂದರೆ ಮುಂದೆ ಅಲ್ಲಿ ಬೆಳೆಯುವ ಮಕ್ಕಳು ಒಳ್ಳೇ ಗುಣವಂತರಾಗುವರಲ್ಲದೆ ಒಳ್ಳೆಯ ಪ್ರಜೆಯಾಗುತ್ತಾರೆ. ಮುಂದೆ ಗರ್ಭಿಣಿಯು ತಾಯಿಯಾಗುವುದು ಒಂದು ಮಹತ್ತರ ಘಟ್ಟ, ಮತ್ತು ಪುನರ್‌ಜನ್ಮ ಬಂದ ಹಾಗೆ. ಈಗಿನ ಸಂದರ್ಭದ ಆರೈಕೆ ಎಂದರೆ 8–10 ದಿವಸ ಪ್ರತಿದಿನ ಬೆಳಗ್ಗೆ ಬರೀ ಹೊಟ್ಟೆಗೆ ಚಿಗುಳಿ ತುಪ್ಪ ಕೊಡಬೇಕು. ಮೊದಲನೆಯ ತಿಂಗಳಲ್ಲಿ ಮೆಂತ್ಯದ ಹಿಟ್ಟು, ಎರಡನೆಯ ತಿಂಗಳಲ್ಲಿ ಬಾಳೆಹಣ್ಣು, ಮೂರನೆಯ ತಿಂಗಳಲ್ಲಿ ಸಜ್ಜಿಗೆ ಮತ್ತು ಅಂಟಿನುಂಡೆ ಕೊಡುತ್ತಾರೆ. ಮನೆಯ ಒಳಗೆ ಮೂರು ತಿಂಗಳುಗಳ ಕಾಲ ಬೆಚ್ಚಗೆ ಇರಬೇಕೆಂಬ ನಿಯಮವಿದೆ. ಮಂಗಳವಾರ, ಶುಕ್ರವಾರ ಎಣ್ಣೆ ನೀರು ಹಾಕಿಕೊಳ್ಳಬೇಕು. ನಾಲ್ಕನೆಯ ದಿವಸ ನೀರು ಹಾಕಿದ ಮೇಲೆ ಯಾವುದಾದರೂ ಫಲ ಬಿಡುವ ಮರಕ್ಕೆ (ತೆಂಗು, ಪಪ್ಪಾಯ ಇತ್ಯಾದಿ) ಪೂಜೆ ಮಾಡಿಸಬೇಕು.

ಉಡುಪು

ನಮ್ಮ ಸಂಪ್ರದಾಯದ ಪ್ರಕಾರ ಮಹಿಳೆಯರಿಗೆ ಉಡುಪು ಕೂಡ ಬಹಳ ಮುಖ್ಯ. ಹೆಣ್ಣು ಮಕ್ಕಳಿಗೆ ಲಂಗ, ದೊಡ್ಡವರಿಗೆ ಸೀರೆ ಎಂದು ಮಾಡಿದ್ದಾರೆ. ಈಗಿನ ಕಾಲದ ಬಿಗಿ ಉಡುಪುಗಳು ಆರೋಗ್ಯದ ದೃಷ್ಟಿಯಿಂದ ಅನುಕೂಲವಾಗಿರುವುದಿಲ್ಲ.

ಈ ಮೇಲೆ ಬರೆದಿರುವ ಸಂಸ್ಕಾರಗಳನ್ನು ಹಿಂದಿನವರು ಆಚರಿಸಿ ತುಂಬಾ ದಿನಸಗಳು ಬದುಕಿ, ಬಾಳಿ ಆರೋಗ್ಯದಿಂದ ಇರುತ್ತಿದ್ದರು. ಆದ್ದರಿಂದ ತಾಯಂದಿರು ದಯವಿಟ್ಟು ಹೆಣ್ಣು ಮತ್ತು ಗಂಡು ಮಕ್ಕಳಿಗೆ ಈ ಸಂಸ್ಕಾರಗಳನ್ನು ಸ್ವಲ್ಪವಾದರೂ ಮಾಡಿದರೆ ಕ್ಷೇಮವೆಂದು ಕಾಣುತ್ತದೆ. ಇದರಿಂದ ಯಾವುದೇ ತೊಂದರೆ ಇಲ್ಲ. ನಮ್ಮ ಜೀವನಕ್ಕೆ, ನಮ್ಮಗಳ ಸುಖ ಸಂತೋಷಗಳಿಗೆ ಯಾವುದೂ ಅಡ್ಡಿಯಾಗುವುದಿಲ್ಲ. ಆದಷ್ಟು ನಮ್ಮತನವನ್ನು ಉಳಿಸಿಕೊಳ್ಳಲು ಪ್ರಯತ್ನಿಸಬೇಕು. ಪಾಶ್ಚಿಮಾತ್ಯ ನಡವಳಿಕೆಗಳನ್ನು ಅನುಸರಿಸುವುದು ಜಾಸ್ತಿಯಾಗಬಾರದು. ಒಟ್ಟಿನಲ್ಲಿ ನಮ್ಮ ಶರೀರದ ಒಳಗೆ ಹಾಗೂ ಹೊರಗಡೆ ಪವಿತ್ರವಾಗಿರಲು ಮಾಡಿದ ಈ ಸಂಸ್ಕಾರಗಳಿಗೆ, ನಮ್ಮ ಹಿಂದಿನ ಪರಂಪರೆಗಳಿಗೆ ನಮಿಸಿ ಅವುಗಳನ್ನು ಆಚರಿಸುವುದು ನಮ್ಮ ಕರ್ತವ್ಯವಾಗಿದೆ. ನಾವುಗಳು ನಮ್ಮ ಸಂಸ್ಕಾರಗಳನ್ನು ಅಳವಡಿಸಿಕೊಂಡರೆ ನಮ್ಮ ಜೀವನವು ಇನ್ನೂ ಉತ್ತಮ ಮಟ್ಟದ್ದಾಗುತ್ತದೆ.

ಸ್ತ್ರೀಯರು ಮಾಡಬೇಕಾದ ನವಮಿ ವ್ರತಗಳು

ಚೈತ್ರ ಮಾಸದ ಶುಕ್ಲಪಕ್ಷ ಪಾಡ್ಯದ ದಿನ ಬೆಳಗ್ಗೆ ಮಾವಿನ ಮತ್ತು ಬೇವಿನ ಸೊಪ್ಪನ್ನು ಬಾಗಿಲಿಗೆ ತೋರಣ ಕಟ್ಟಿ ಹಿರಿಯರ ಕೈಯಲ್ಲಿ ಹಣೆಗೆ ಕುಂಕುಮ ಇರಿಸಿಕೊಂಡು, ಎಣ್ಣೆ ಹಾಕಿಸಿಕೊಳ್ಳಬೇಕು ಎಣ್ಣೆ ಒತ್ತುವಾಗ ಈ ಶ್ಲೋಕ ಹೇಳಬೇಕು.

ಅಶ್ವತ್ಥಾಮೋ ಬಲಿರ್ವ್ಯಾಸೋ ಹನುಮಾಂಶ್ಚಃ ವಿಭೀಷಣಃ
ಕೃಪಃ ಪರಶುರಾಮಶ್ಚ ಸಪ್ತೈತೇ ಚಿರಜೀವಿನಃ

ನೀರು ಹಾಕಿಸಿಕೊಂಡು ದೊಡ್ಡವರು ದೇವರಿಗೆ ಪೂಜೆ ಮಾಡಿ ಬೇವು, ಬೆಲ್ಲ, ಬೆರೆಸಿ (ಒಂದು ಬಟ್ಟಲಲ್ಲಿ ಬೇವಿನ ಚಿಗುರು ಮತ್ತು ಬೆಲ್ಲ ಹಾಕಿ ಕಲೆಸಿ ಇಟ್ಟುಕೊಳ್ಳಬೇಕು) ದೇವರ ಮುಂದೆ ಪಂಚಾಂಗವನ್ನಿಟ್ಟು ಅದಕ್ಕೂ ಸಹ ಪೂಜೆ ಮಾಡಿ ನೈವೇದ್ಯಕ್ಕೆ ಬೇಳೆ ಒಬ್ಬಟ್ಟು ಎಳ್ಳುಪುಡಿ, ಚಿತ್ರಾನ್ನ, ಪಾನಕ, ಕೋಸಂಬರಿ ಇವುಗಳನ್ನು ಮಾಡಿ ಮಂಗಳಾರತಿ ಮಾಡಿ ಹೊಸಬಟ್ಟೆ ಹಾಕಿಕೊಳ್ಳಬಹುದು ಮತ್ತು ದಾನ ಸಹ ಕೊಡಬೇಕು. ಪಂಚಾಂಗ ಪೂಜೆಯ ಪ್ರಯುಕ್ತ ಒಬ್ಬ ಬ್ರಾಹ್ಮಣರಿಗೆ (ಪುರೋಹಿತರು) ದಕ್ಷಿಣೆ ಸಹಿತ ಪಾನಕ ಕೋಸಂಬರಿ ಕೊಡಿ. ನೈವೇದ್ಯ ಮಾಡಿದ ಬೇವು ಬೆಲ್ಲವನ್ನು ದೊಡ್ಡವರಿಗೆ ಕೊಟ್ಟು ನಮಸ್ಕಾರ ಮಾಡಿ. ನೀವೂ ತೆಗೆದುಕೊಳ್ಳಿ. ಬೇವು ಬೆಲ್ಲ ತಿನ್ನುವಾಗ ಈ ಮಂತ್ರ ಹೇಳಬೇಕು

ಶತಾಯುರ್ವಜ್ರ ದೇಹಾಯ ಸರ್ವಸಂಪತ್ಕರಾಯಚ ।
ಸರ್ವಾರಿಷ್ಟ ವಿನಾಶಾಯ ನಿಂಬಕಂ ದಳ ಭಕ್ಷಣಂ ॥

ತದಿಗೆ ಗೌರಿ

ಇದನ್ನು ಚೈತ್ರ ಶುದ್ಧ ತದಿಗೆ ದಿವಸ ಆರಂಭ ಮಾಡಬೇಕು. ಕೆಲವರು ಉಯ್ಯಾಲೆ ಗೌರಿ ಕೂರಿಸುತ್ತಾರೆ. ಕೆಲವರು ಮನೆಯಲ್ಲಿ ಇರುವ ಗೌರಿಗೆ ಪೂಜೆ ಮಾಡುತ್ತಾರೆ. ಪೂಜೆ ಆದ ನಂತರ ಕೋಸಂಬರಿ, ಪಾನಕ ಮಾಡಿ ಐದು ಜನ ಮುತ್ತೈದೆಯರಿಗೆ ಕೊಡಬೇಕು. ವಿಳ್ಳೇದೆಲೆ, ಅಡಿಕೆ, ದಕ್ಷಿಣೆ, ಹಣ್ಣು, ಕಾಯಿ, ಕುಪ್ಪಸದ ಕಣ ಮುಂತಾಗಿ ಏನು ಬೇಕಾದರೂ ಕೊಟ್ಟು ನಮಸ್ಕಾರ ಮಾಡುವುದು. ಈ ಮಧ್ಯೆ ಮೊದಲ ತದಿಗೆಯಿಂದ ಅಕ್ಷಯ ತದಿಗೆಯವರೆಗೆ ಮದುವೆಯಾದ ಹೆಣ್ಣು ಮಕ್ಕಳು ಐದು ವರ್ಷಗಳ ಕಾಲ ದಿನಕ್ಕೆ ಐದು ಜನರಂತೆ ಮುತ್ತೈದೆಯರಿಗೆ ಕಾಲು

ತೊಳೆಯುವ ಪದ್ಧತಿ (ನೋಹಿ) ಇದೆ. ಹೇಗೆಂದರೆ ಒಂದು ತಟ್ಟೆಯಲ್ಲಿ ಅರಿಸಿನ, ಕುಂಕುಮ, ಹೂ, ವಿಳ್ಳೇದೆಲೆ. ಒಂದು ಬಟ್ಟಲಲ್ಲಿ ಕೊಬ್ಬರಿ ಎಣ್ಣೆ, ಬಾಚಣಿಗೆ ಕನ್ನಡಿ, ಕಪ್ಪು (ಕಣ್ಣಿಗೆ) ಎಲ್ಲವನ್ನೂ ಇಟ್ಟುಕೊಳ್ಳಬೇಕು. ಏನಾದರೂ ಒಂದು ಅಥವಾ ಎರಡು ಬಗೆಯ ತಿಂಡಿ (ಕೋಸಂಬರಿ/ಗೊಜ್ಜವಲಕ್ಕಿ/ಚಕ್ಕುಲಿ/ತೇಂಗೊಳಲು ಇತ್ಯಾದಿ) ಮಾಡಿ ಅವನ್ನು ಎಲೆ, ಅಡಕೆ, ದಕ್ಷಿಣೆ ಜೊತೆ ಇಟ್ಟು ಕೊಡಬೇಕು.

ಮಾಡುವ ಬಗೆ

ಅಣಿ ತಟ್ಟೆ ಜೊತೆಗೆ ಒಂದು ಲೋಟ (ಪಂಚಪಾತ್ರೆ), ನೀರು ಮತ್ತು ಉದ್ಧರಣೆ ಇಟ್ಟುಕೊಳ್ಳಬೇಕು. ಒಂದು ಉದ್ಧರಣೆಯಿಂದ ಎಡದ ಕೈಗೆ ನೀರು ಹಾಕಿ ಅರಿಸಿನ ಕಲಸಿಕೊಂಡು ಬಲಗೈಯಿಂದ ಮುತ್ತೈದೆಯ ಕೈ, ಕಾಲು, ಕೆನ್ನೆಗೆ ಅರಿಸಿನ ಹಚ್ಚಿ, ಕುಂಕುಮ ಹೂ ಇವುಗಳನ್ನು ಕೊಟ್ಟು, ಕನ್ನಡಿ ತೋರಿಸಿ ಮೂರುಸಲ ತಲೆ ಬಾಚಿ ಕಪ್ಪು ಕೊಡಬೇಕು. ಆಮೇಲೆ ಎಲೆ ಅಡಿಕೆ ಪ್ರಸಾದ ಕೊಟ್ಟು ನಮಸ್ಕಾರ ಮಾಡಿ ಆಶೀರ್ವಾದ ತೆಗೆದುಕೊಳ್ಳಬೇಕು.

ಕಾರಣ

ಕೈಲಾಸದಿಂದ ಗರ್ಭಿಣಿಯಾದ ಪಾರ್ವತಿ ಭೂಮಿಗೆ ಬಂದಿರುತ್ತಾಳೆ. ಆಕೆಯ ಪ್ರೀತ್ಯರ್ಥವಾಗಿ ಈ ನೋಹಿಗಳನ್ನು ಮಾಡಿ ಎಂದು ಹೇಳಿದ್ದಾರೆ. ಗಂಧ ವೀಳ್ಯೆ ಕಾಡಿಗೆ ವೀಳ್ಯ ಫಲ ವೀಳ್ಯೆ ಎಂದು ಬಗಬಗೆಯ ನೋಹಿಗಳಿವೆ. ಇವುಗಳಿಗೂ ಸಹ ಐದು ವಿಳ್ಳೇದೆಲೆ ಜೊತೆ ಮೇಲೆ ಹೇಳಿದ ಪದಾರ್ಥಗಳನ್ನು (ಅರಿಸಿನ, ಕುಂಕುಮ ಹೂ ಕೊಟ್ಟರೆ ಸಾಕು. ಕಾಲು ತೊಳೆಯಬೇಕಿಲ್ಲ) ಕೊಡಬೇಕು.

ಇವುಗಳನ್ನೆಲ್ಲ ಕೊಟ್ಟಮೇಲೆ ವೈಶಾಖ ಶುದ್ಧ ತದಿಗೆ ದಿನ (ಅಕ್ಷ ತದಿಗೆ) ಈ ನೋಹಿಯನ್ನೆಲ್ಲ ಪೂರ್ಣ ಮಾಡಬೇಕು. ಆ ದಿನ ಗೌರಿ ಪೂಜೆಗೆ ಒಬ್ಬಟ್ಟು, ಪಾಯಸ, ಹುಗ್ಗಿ, ಹುಳಿಯನ್ನು ಮುಂತಾದವುಗಳನ್ನು ಮಾಡಿ ನೈವೇದ್ಯ ಮಾಡಿ ಆರತಿ ಮಾಡಿ, ಮಾಡಿದ ಒಬ್ಬಟ್ಟನ್ನು (ಹೋಳಿಗೆ ಮಾಡಿ) ತಲಾ ಐದರಂತೆ ಐದು ಜನ ಮುತ್ತೈದೆಯರಿಗೆ ಕೊಡಬೇಕು. ನೀವು ಯಾವ ನೋಹಿ ಮಾಡಿರುತ್ತೀರೋ ಅದರ ಜೊತೆ ಕೊಡಬೇಕು.

ರಾಮನವಮಿ

ಇದನ್ನು ವಸಂತ ನವರಾತ್ರಿ ಎಂದು ಕರೆಯುತ್ತಾರೆ. ಚೈತ್ರ ಶುದ್ಧ ನವಮಿಯ ದಿನ ಶ್ರೀರಾಮನನ್ನು ಪೂಜಿಸಲೇಬೇಕು. ಅವನು ಹುಟ್ಟಿದ ದಿನವಾದ್ದರಿಂದ ಅಂದು ತುಂಬಾ ಪವಿತ್ರವಾದ ಧಿನ 9 ದಿನ ಮುಂಚೆ ರಾಮಾಯಣ ಪಾರಾಯಣ ಮಾಡುತ್ತಾರೆ ಇಲ್ಲದಿದ್ದರೆ ನವಮಿಯಿಂದ ಶುರುಮಾಡಿ ಆಮೇಲೆ ಒಂಬತ್ತು ದಿನ ಪಾರಾಯಣ ಮಾಡಿ ಮುಗಿಸುತ್ತಾರೆ. ಎಲ್ಲ ರಾಮಮಂದಿರಗಳಲ್ಲೂ ವಿಜೃಂಭಣೆಯಿಂದ ಸಂಗೀತ, ನೃತ್ಯ, ಉಪನ್ಯಾಸ ಮುಂತಾದವುಗಳನ್ನು ಏರ್ಪಡಿಸುತ್ತಾರೆ ಕಡೆಯ ದಿನ ಪಟ್ಟಾಭಿಷೇಕ, ಮಂಗಳಾರತಿ, ಊಟ ವಗೈರೆಗಳೂ ನಡೆಯುತ್ತವೆ. ಮನೆಗಳಲ್ಲೂ ಆ ದಿವಸ ಶ್ರೀ ರಾಮನ ಫೋಟೋ ಇಟ್ಟು ಪೂಜೆ ಮಾಡಿ ಪಾನಕ, ಕೋಸಂಬರಿ, ನೀರು ಮಜ್ಜಿಗೆ, ರಾಮ ಪ್ರಸಾದ ಇವುಗಳನ್ನು ಕೊಡಬಹುದು. ಕೆಲವರು ಆದಿನ ಉಪವಾಸ ಮಾಡುತ್ತಾರೆ. ಸತ್ಯ ಧರ್ಮದಿಂದ ರಾಜ್ಯವಾಳಿದ ಶ್ರೀ ರಾಮನನ್ನು ಸ್ಮರಿಸಿ ಕೃತಾರ್ಥರಾಗಲು ಪೂಜೆ ಆಚರಣೆಯಲ್ಲಿದೆ.

ವೈಶಾಖ ಮಾಸ (ಅಕ್ಷ ತದಿಗೆ)

ಇದುವರೆಗೆ ಮಾಡಿದ ನೋಹಿ, ವ್ರತಗಳನ್ನು ಈ ಪುಣ್ಯದ ದಿನ ಮಾಡುತ್ತಾರೆ. ಆ ದಿನ ಮಾಡಿದ ಜಪ, ಹೋಮ, ಪೂಜೆಗಳು ಅಕ್ಷಯವಾಗುವುದೆಂದು (ಹೆಚ್ಚಾಗುವುದು) ಪ್ರತೀತಿ. ಆ ದಿನ ಚಿನ್ನ, ಬೆಳ್ಳಿ, ಮುಂತಾದವುಗಳನ್ನು ಖರೀದಿಸುತ್ತಾರೆ. ಆದಿನ ಕುಂಭ, ಛತ್ರಿ, ಬೀಸಣಿಗೆ, ಪಾನಕ, ಬೆಲ್ಲ ದಕ್ಷಿಣೆ ಮೊದಲಾದವನ್ನೂ ದಾನ ಮಾಡಬೇಕೆಂದಿದೆ. 'ಅಕ್ಷಯ ತೃತೀಯ ಮಹಾತ್ಮೆ' ಎಂಬ ಪುಸ್ತಕವನ್ನು ಪಾರಾಯಣ ಮಾಡಿದರೆ ಶ್ರೇಯಸ್ಕರವೆಂದು ಹೇಳಿದ್ದಾರೆ. ವೈಶಾಖ ಮಾಸದಲ್ಲಿ ನದಿ ಸ್ನಾನ ಶ್ರೇಷ್ಠ.

ಜೇಷ್ಠಮಾಸದಲ್ಲಿ ಶ್ರುತ ಪಂಚಮಿ

ಈ ದಿನ ಹಿತವಾದ ವಿಚಾರಗಳನ್ನು ಕೇಳುವುದು ಒಳ್ಳೆಯದು. ಶ್ರುತ, ಅಂದರೆ ಸಂಗೀತ, ನಾಟ್ಯ, ವೇದಪಾರಾಯಣ, ಗೀತಶ್ರವಣ ಮುಂತಾದವುಗಳ ಶ್ರವಣದಿಂದ ಹಿತವನ್ನು ಕಾಣಬೇಕು ಎಂದು ವಿಷ್ಣು ಪುರಾಣದಲ್ಲಿ ಹೇಳಿದೆ. ದೇವಸ್ಥಾನಗಳಲ್ಲಿ ಸಂಗೀತ ಮುಂತಾದ ಚಟುವಟಿಕೆಗಳು ನಡೆಯುತ್ತವೆ.

ಜೇಷ್ಠ ಶುಕ್ಲ ದಶಮಿಯಂದು ದಶಹರವ್ರತ (ಏಕಾದಶಿ ಮಾಡುವವರಿಗೆ)

ಇದು ಗಂಗಾವತಾರದ ದಿನ ಎಂದು ನಂಬಿಕೆ. ಈ ದಿನದ ಆಚರಣೆಗೆ ಹತ್ತು ಪಾಪಗಳನ್ನು ಕಳೆಯುವ ಶಕ್ತಿ ಇದೆ. ಈ ದಿನಕ್ಕೆ ಹಸ್ತಾ ನಕ್ಷತ್ರ ಮತ್ತು ಬುಧವಾರಗಳು ಪ್ರಾಪ್ತವಾದರೆ ಶ್ರೇಯಸ್ಕರ. ಅಧಿಕ ಮಾಸ ಸಂಭವಿಸಿದಾಗಲೂ ಈ ವ್ರತಾಚರಣೆ ವ್ಯತ್ಯಯ ಆಗುವುದಿಲ್ಲ. ಗಂಗಾಸ್ನಾನ ಈ ವ್ರತದ ವಿಧಿಯಾದರೂ ಬೇರೆ ಸ್ಥಳದಲ್ಲಿ ಇರುವವರು ನದೀ ಸ್ನಾನ ಮಾಡಿ ಗಂಗಾ ಪೂಜೆ ಮಾಡಬಹುದೆಂದು ಶಾಸ್ತ್ರಗಳಲ್ಲಿ ಹೇಳಲಾಗಿದೆ. ಮತ್ತು ದಶದಾನ ಕೊಡಬೇಕು.

ಆಷಾಢಮಾಸ

ಆಷಾಢಮಾಸದ ಶುಕ್ಷಪಕ್ಷ ಏಕಾದಶಿಯು ಪ್ರಥಮ ಏಕಾದಶಿ ಎಂದು ಪ್ರಸಿದ್ಧವಾಗಿದೆ. ಈ ತಿಥಿಯಿಂದ ಮುಂದಿನ ನಾಲ್ಕು ಮಾಸಗಳ ಕಾಲವನ್ನು ವ್ರತಾಚರಣೆಗೆ ಮುಖ್ಯವಾದ ಚಾತುರ್ಮಾಸ ಕಾಲ ಎಂದು ಹೇಳುವುದುಂಟು. ಪ್ರಥಮ ಏಕಾದಶಿಯಿಂದ ವಿಷ್ಣುವು ಬೃಂದಾವನದಲ್ಲಿ ಮಲಗಿ ಕಾರ್ತೀಕ ಮಾಸದ ಉತ್ಥಾನ ದ್ವಾದಶಿಯಂದು ಮೇಲೇಳುವನೆಂಬ ನಂಬಿಕೆ ಇದೆ. ಈ ಮಾಸದಲ್ಲಿ ಏಕಾದಶಿ ವ್ರತ ಮಾಡುವವರು ಒಂದೊಂದು ತಿಂಗಳು ಒಂದೊಂದು ಪದಾರ್ಥ ತಿನ್ನುವುದನ್ನು ಬಿಡಬೇಕೆಂಬ ನಿಯಮವಿದೆ. ಅವು ಯಾವುವೆಂದರೆ:

ಆಷಾಢ ಮಾಸದಲ್ಲಿ ಶಾಖವ್ರತ

ಶ್ರಾವಣ ಮಾಸದಲ್ಲಿ ದಧಿ ವ್ರತ (ಮೊಸರು)

ಭಾದ್ರಪದ ಮಾಸದಲ್ಲಿ ಕ್ಷೀರ ವ್ರತ (ಹಾಲು)

ಆಶ್ವಯುಜ ಮಾಸದಲ್ಲಿ ದ್ವಿದಳ ವ್ರತ (ಬೇಳೆಗಳು)


ಇದರ ಬಗ್ಗೆ ಹೆಚ್ಚಿನ ವಿವರಗಳನ್ನು ಪುರೋಹಿತರಿಂದ ಕೇಳಿ ತಿಳಿದುಕೊಳ್ಳಬೇಕು.

ದಕ್ಷಿಣಾಯನ ಪುಣ್ಯಕಾಲ

ಇದು ಸೂರ್ಯನು ಕರ್ಕಾಟಕ ಸಂಕ್ರಾಂತಿ ಪ್ರವೇಶಿಸುವ ದಿನ (ಜುಲೈ ತಿಂಗಳಲ್ಲಿ).

ಗೋಪದ್ಮ (ಆಷಾಢ ಶುದ್ಧ ಏಕಾದಶಿಯಿಂದ ಕಾರ್ತೀಕ ಶುದ್ಧ ಏಕಾದಶಿವರೆಗೆ)

ಹೊಸದಾಗಿ ಮದುವೆಯಾದ ಸ್ತ್ರೀಯರು ಈ ನಾಲ್ಕು ತಿಂಗಳು ಗೋಪದ್ಮವನ್ನು ತುಳಸಿ ಮುಂದೆ ಹಾಕಬಹುದು (ಇದು ಪಾಪ ಪರಿಹಾರ). ಚಿತ್ರವನ್ನು ನೋಡಿ.



ರಂಗೋಲಿಯಿಂದ ಒಂದು ಗೋವನ್ನು ಬರೆದು ಅದರ ಹೊಟ್ಟೆಯಲ್ಲಿ 33 ಪದ್ಮ, 12 ಶಂಕು, 12 ಚಕ್ರಗಳನ್ನು ಬರೆಯಬೇಕು. ಉತ್ಥಾನ ದ್ವಾದಶಿಯ ದಿನ ಅದನ್ನು ಮುಗಿಸಿ ಐದು ವರ್ಷಗಳ ಕಾಲ ಈ ವ್ರತವನ್ನು ಮಾಡಿ ಐದು ವರ್ಷಗಳಲ್ಲಿ ಒಂದೊಂದು ವರ್ಷ ಒಂದೊಂದು ಪದಾರ್ಥವನ್ನು ದಾನ ಮಾಡಬೇಕು. ಅಂದರೆ ಅಣ್ಣ ತಮ್ಮಂದಿರಿಗೆ 33 ಸೌಟು ಪಾಯಸ, 33 ಎರೆಯಪ್ಪ, 33 ಮುಚ್ಚೋರೆ, 33 ಚಕ್ಕುಲಿ, 33 ಒಬ್ಬಟ್ಟು ಹೀಗೆ ಒಂದೊಂದು ವರ್ಷ ಒಂದೊಂದು ದಾನ ಕೊಡಬೇಕು.

ಚಿತ್ರದಲ್ಲಿ ಕೆಳಗಡೆ ಇರುವುದು ಸ್ವರ್ಗದ ಬಾಗಿಲು. ಅದನ್ನು ಪೂಜೆ ಆದಮೇಲೆ ಬಲಗೈನ ತೋರುಬೆರಳಿನಿಂದ ಬಾಗಿಲನ್ನು ತೆಗೆಯುವಂತೆ ಮೇಲಕ್ಕೆ ಮಾಡಿ. ಬಲಗಡೆ ಪಕ್ಕದಲ್ಲಿರುವುದು ನರಕದ ಬಾಗಿಲು. ಇದಕ್ಕೆ ಮುಚ್ಚುವ ರೀತಿಯಲ್ಲಿ ಕೈಯನ್ನು ಮಾಡಿ (ರಂಗೋಲಿಯಿಂದ ತೆಗೆಯುವುದು ಮುಚ್ಚುವುದನ್ನು ಮಾಡಿರಿ).

ಆಷಾಢ ಮಾಸದ ಅಮಾವಾಸ್ಯೆ ದಿನ ಜ್ಯೋತಿರ್‌ಭೀಮೇಶ್ವರ ವ್ರತ. ಇದನ್ನು ಮದುವೆಯಾದ ಸ್ತ್ರೀಯರು ಪತಿಗೆ ಆಯುರ್‌ವರ್ಧನೆಗೆಂದು ಮಾಡಬೇಕು. ಚಿಕ್ಕ ಮಕ್ಕಳು ಪೂಜಿಸಬೇಕು.


ವ್ರತವಿಧಿ

ಎರಡೂ ದೀಪದ ಕಂಬಗಳಿಗೆ (ಸೊಡಿಲುಗಳು) ಐದು ಮೂತಿ ಇರಬೇಕು. ಒಂದಕ್ಕೆ ಎಣ್ಣೆ, ಒಂದಕ್ಕೆ ತುಪ್ಪ ಹಾಕಿ ಎರಡು ದೀಪದ ಕಂಬಗಳಿಗೂ 5, 6 ಬತ್ತಿ ಹಾಕಿ ಒಂದು ತಟ್ಟೆಗೆ ಬಾಳೆ ಎಲೆ ಅಗ್ರಹಾಕಿ ಅದರ ಮೇಲೆ ಅಕ್ಕಿ ಹರಡಿ ದೀಪದ ಕಂಭಗಳನ್ನು ಪೂರ್ವದಿಕ್ಕಿಗೆ ಇಟ್ಟು ನಿಮ್ಮ ಎಡದ ಕಂಭಕ್ಕೆ ಎರಡು ಎಳೆ ದಾರ ಎರಡು ಮೊಳ ತೆಗೆದು ಒಂಬತ್ತು ಗಂಟುಗಳನ್ನು ಹಾಕಿ ಅರಿಸಿನ ಹಚ್ಚಿ ಒಂದು ಅರಿಸಿನದ ಕೊಂಬುಕಟ್ಟಿ ಅದನ್ನು ಎಡಗಡೆಯ ದೀಪದ ಕಂಬಕ್ಕೆ ಕಟ್ಟಿ 'ವ್ರತರತ್ನಮಾಲ' ಪುಸ್ತಕದಲ್ಲಿರುವಂತೆ ಪುರೋಹಿತರ ಕೈಲಿ ಪೂಜೆ ಮಾಡಿಸಿ ಅವರಿಗೆ ಒಂಬತ್ತು ಕರಿಗಡುಬು, ಪಾಯಸ ದಾನ ಕೊಟ್ಟು ನಮಸ್ಕರಿಸಿ ಒಂಬತ್ತು ಗಂಟು ಹಾಕಿದ ಅರಿಸಿನದ ದಾರವನ್ನು ಪೂಜಿಸಿ ನಿಮ್ಮ ಕೈಗೆ ಪುರೋಹಿತರಿಂದ ಕಟ್ಟಿಸಿಕೊಂಡು ವಾಯನದಾನ ಕೊಡಬೇಕು.

ಮಂಗಳಗೌರಿ

ಇದನ್ನು ಶ್ರಾವಣ ಮಾಸದ ಮಂಗಳವಾರದಿಂದ ನಾಲ್ಕು ಐದು ಮಂಗಳವಾರಗಳು ಮಾಡಬೇಕು. ಇದರಿಂದ ಸಂತಾನ ಪ್ರಾಪ್ತಿ ಎಂದು ಕಥೆಯಲ್ಲಿ ಹೇಳಿದೆ. ಮದುವೆಯಾದ ವರ್ಷದಿಂದ 5 ವರುಷ ಈ ವ್ರತವನ್ನು ಮಾಡಬೇಕು. ಪೂಜೆ ಮಾಡಲು ನಿಮ್ಮ ನಿಮ್ಮ ಮನೆಗಳ ಪದ್ಧತಿಯಂತೆ ಗೌರಿಯನ್ನು ಕೂರಿಸಬೇಕು. ಸಾಮಾನ್ಯವಾಗಿ ಒಂದು ಚೊಂಬಿನ ಮೇಲೆ ಕಣವನ್ನು ∆ ತ್ರಿಕೋಣಾಕಾರದಲ್ಲಿ ಮಡಿಸಿ ಇಟ್ಟು ಅದರ ಹಿಂದ ಫ಼ೋಟೋಗಳನ್ನು ಇಡಬೇಕು. ಅದರ ಮೇಲೆ 3 ಕಣಗಳನ್ನು ಇಡಬೇಕು. ಮುಂದೆ ಚೊಂಬನ್ನು (ಬೆಳ್ಳಿ, ಹಿತ್ತಾಳೆ) ಒರಗಿಸಿಡುವುದು. ಇದೇ ಕಳಸದ ಮೇಲೆ ಕೊಬ್ಬರಿ ಗಿಟುಕು ಇಡಬೇಕು. ಇದರ ಪಕ್ಕದಲ್ಲಿ 16 ವಿಳ್ಳೇದೆಲೆ ಅಡಿಕೆ ಇಡಬೇಕು. ಅರಿಸಿನವನ್ನು ಕಲೆಸಿ ಚಿತ್ರದಲ್ಲಿನ ಆಕಾರದಲ್ಲಿ ಗೌರಿಯನ್ನು ಮಾಡಿ ಬೆಲ್ಲದಚ್ಚಿನ ಮೇಲಿಟ್ಟು ಪೂಜಿಸಬೇಕು.


ಮಂಗಳವಾರ ಬೆಳಗ್ಗೆ ಎಣ್ಣೆ ನೀರು ಹಾಕಿಕೊಂಡು ಪುರೋಹಿತರನ್ನು ಕರೆಸಿ ಪೂಜೆ ಮಾಡಿ ಅವರಿಗೆ ವಾಯನ ದಾನ ಕೊಟ್ಟು ಕಥೆ ಕೇಳಬೇಕು. ಕಥೆ ಹೇಳುವಾಗ ಅಕ್ಕಿ ಹಿಟ್ಟಿನಿಂದ ಅಥವಾ ಗೋಧಿಹಿಟ್ಟಿನಿಂದ ತಯಾರಿಸಿದ (ಬೆಲ್ಲ ಪಾಕಮಾಡಿ ಅದಕ್ಕೆ ಹಾಕುತ್ತಾರೆ) ತಂಬಿಟ್ಟನ್ನು 16 ಉಂಡೆಗಳನ್ನಾಗಿ ಮಾಡಿ ಅದನ್ನು ಅಂಗೈಯಲ್ಲಿಟ್ಟು ತಟ್ಟಿ ದೀಪಮಾಡಬೇಕು. ಅದೇ ತಂಬಿಟ್ಟಿನಿಂದ ಹದಿನಾರು ಲಡ್ಡುಗೆಗಳನ್ನೂ ಮಾಡಿ ಒಂದು ತಟ್ಟೆಯಲ್ಲಿ ಇಟ್ಟು ತಂಬಿಟ್ಟಿನ ಸೊಡಲಿಗೆ ತುಪ್ಪದ ಬತ್ತಿ ಹಾಕಿ ಹಚ್ಚಿಕೊಂಡು ನಿಮ್ಮ ಮುಂದೆ ಇಟ್ಟುಕೊಳ್ಳಬೇಕು. ಒಂದು ಮೊಗಚುವ ಕೈಗೆ ವಿಳ್ಳೇದೆಲೆ ರಸವನ್ನು ಸವರಿ ಅಥವಾ ತುಪ್ಪವನ್ನು ಸವರಿ, ಸವರಿದ ಮೊಗಚುವಕೈ ಭಾಗವನ್ನು ದೀಪಕ್ಕೆ ಹಿಡಿದುಕೊಂಡರೆ ಅದು ಕಪ್ಪಾಗುತ್ತದೆ. ಕಥೆ ಮುಗಿದ ನಂತರ ಆ ಕಪ್ಪನ್ನು ಒಂದು ಹೂವಿನಿಂದ ತೆಗೆದುಕೊಂಡು ದೇವರಿಗೆ ಅರ್ಪಿಸಿ, ನೀವೂ ಸಹ ಇಟ್ಟುಕೊಳ್ಳಬೇಕು. ಮುತ್ತೈದೆಯರಿಗೆ ತಂಬಿಟ್ಟಿನ ದೀಪ, ತಂಬಿಟ್ಟಿನ ಲಡ್ಡುಗೆ, ಕೋಸಂಬರಿ, ದಕ್ಷಿಣೆ, ಎಲೆ ಅಡಿಕೆ ಕೊಟ್ಟು ಕಪ್ಪನ್ನು ಸಹ ಕೊಡಬೇಕು. ಈ ಮಂಗಳಗೌರಿಯನ್ನು —ಸ್ವರ್ಣಗೌರಿಯ ಜೊತೆ ನೀರಿಗೆ ಬಿಡಬೇಕು.



ಸೂಚನೆ : ನೈವೇದ್ಯಕ್ಕೆ ಹುಗ್ಗಿ, ಪಾಯಸ, ಕೋಸಂಬರಿ, ತಂಬಿಟ್ಟು ಮತ್ತು ಹಣ್ಣು ಕಾಯಿ ಇಡಬೇಕು. ಕಡೆಯ ಮಂಗಳವಾರ ತಾಯಿಗೆ ಮೊರದ ಬಾಗಿನ ಕೊಡಬೇಕು. ಕಡೆಯ ವರ್ಷದ ಮಂಗಳವಾರ ಸೀರೆ, ಕುಪ್ಪಸ, ಕಲಶ ಅದರಲ್ಲಿ 16 ಎಳ್ಳಿನ ಉಂಡೆ, ಲಡ್ಡುಗಳನ್ನು ಹಾಕಿ ದಕ್ಷಿಣೆ ಸಮೇತ ಕೊಡಬೇಕು.

ನಾಗರ ಪಂಚಮಿ (ಗರುಡ ಪಂಚಮಿ)

ಇದು ಅಣ್ಣ ತಮ್ಮಂದಿರು ಅಕ್ಕತಂಗಿಯರು ಪರಸ್ಪರ ಬೆನ್ನು ತೊಳೆಯುವ ಹಬ್ಬ ಮತ್ತು ಹುತ್ತಕ್ಕೆ ಹೋಗಿ ನಾಗಪ್ಪನಿಗೆ ಹಾಲು ತುಪ್ಪ ಬೆರೆಸಿ ಪೂಜೆ ಮಾಡಿ ತನಿ ಹಾಕುತ್ತಾರೆ (ತನಿ ಎಂದರೆ ತಣ್ಣಗಿರಲಿ ಎಂದು). ಆ ಮಣ್ಣನ್ನು ತಂದು ಮನೆಯಲ್ಲಿ ಸಹ ಪೂಜಿಸುತ್ತಾರೆ. ಈ ದಿನ ಖಾರದ ಮತ್ತು ಸಿಹಿ ಕಡಬು ಮಾಡಿ ಅಣ್ಣ ತಂಗಿ, ಅಕ್ಕಂದಿರು ಒಬ್ಬರನ್ನೊಬ್ಬರು ಭೇಟಿ ಮಾಡುತ್ತಾರೆ. ಈ ಹಬ್ಬವನ್ನು ನೇಮದಿಂದ (ಮಡಿಯಿಂದ, ಭಕ್ತಿಯಿಂದ) ಮಾಡಿದರೆ ಚರ್ಮರೋಗ ಮುಂತಾದ ಕಾಯಿಲೆಗಳು ಬರುವುದಿಲ್ಲವೆಂದು ನಂಬಿಕೆ.



ಇದನ್ನು ರಂಗೋಲಿಯಲ್ಲಿ ಬರೆದು ಅದಕ್ಕೆ ಹಾಲು ತುಪ್ಪ ತನಿ ಎರೆಯಬೇಕು.

ವರಮಹಾಲಕ್ಷ್ಮಿ ವ್ರತ

ಇದು ಶ್ರಾವಣ ಮಾಸದ ಪೌರ್ಣಿಮೆಯ ಹಿಂದಿನ ದಿವಸ ಸಾಮಾನ್ಯವಾಗಿ ಶುಕ್ರವಾರ ಬರುತ್ತದೆ. ಎರಡನೇ ಶುಕ್ರವಾರ ಈ ಪೂಜೆಯನ್ನು ಮಾಡುತ್ತಾರೆ. ಕೆಲವರು ವ್ರತದಂತೆ ಮಾಡುತ್ತಾರೆ (ಇದು ಮನೆಯ ಪದ್ಧತಿ). ಎಲ್ಲರೂ ಸಾಮಾನ್ಯವಾಗಿ ಪೂಜೆಯನ್ನಾದರೂ ಮಾಡಿ ಮುತ್ತೈದೆಯರಿಗೆ ಬಾಗಿನ ಕೊಡುತ್ತಾರೆ. ಇಂದೂ ಸಹ ಮನೆಯನ್ನು ಶುದ್ಧೀಕರಿಸಿ ದೇವರಿಗೆ ಅಲಂಕಾರ ಮಾಡಿ ಸಂಭ್ರಮದಿಂದ ಭಕ್ಷ ಭೋಜ್ಯಗಳನ್ನು (ಒಬ್ಬಟ್ಟು, ಆಂಬೊಡೆ, ಇಡ್ಲಿ ಮುಂತಾದವುಗಳು) ಮಾಡಿ ನೈವೇದ್ಯ ಮಾಡುತ್ತಾರೆ. ಇದರಿಂದ ಧನ, ಧಾನ್ಯ, ಸಂಪತ್ತು ಸಮೃದ್ಧಿಯಾಗುವುದೆಂದು ಈ ವ್ರತವನ್ನು ಹೆಚ್ಚಾಗಿ ಮಾಡುತ್ತಾರೆ. ಇದರ ವ್ರತ ಕಥೆ ವ್ರತರತ್ನಮಾಲ ಗ್ರಂಥದಲ್ಲಿ ಇದೆ.

ಶ್ರೀ ಕೃಷ್ಣಜನ್ಮಾಷ್ಟಮಿ

ಶ್ರಾವಣ ಬಹುಳ ಅಷ್ಟಮಿಯಂದು ಶ್ರೀ ಕೃಷ್ಣನು ಜನಿಸಿದನು. ಅವನ ಜನನದಿಂದ ತಂದೆ, ತಾಯಿಯಾದವರಿಗೆ ಮತ್ತು ಸಜ್ಜನರಿಗೆಲ್ಲ ಸಂತಸ. ಕೃಷ್ಣನು ಕಂಸನ ವಧೆ ಮಾಡಿ ಎಲ್ಲರನ್ನೂ ಬಂಧನದಿಂದ ಮುಕ್ತಿಗೊಳಿಸಿದ. ಆದ್ದರಿಂದ ಅವನು ಹುಟ್ಟಿದ ದಿನ ಅಷ್ಟಮಿಯಂದು ಉಪವಾಸವಿದ್ದು ರಾತ್ರಿ (ಚಂದ್ರೋದಯವಾದ ಮೇಲೆ) ಅರ್ಘ್ಯ ಕೊಟ್ಟು ಫಲಾಹಾರ ಮಾಡುತ್ತಾರೆ. ಬಗೆ ಬಗೆಯ ಭಕ್ಷ್ಯಗಳನ್ನು (ಐದು ಬಗೆಯ ಉಂಡೆಗಳು, ಚಕ್ಕುಲಿ ನಿಪ್ಪಟ್ಟು ಕೋಡುಬಳೆ ಇತ್ಯಾದಿ) ಮಾಡಿ ಚಪ್ಪರ ಕಟ್ಟಿ ಅದಕ್ಕೆ ಹಣ್ಣುಗಳನ್ನೂ ತಿಂಡಿಗಳನ್ನೂ ಕಟ್ಟಿ ಶ್ರೀಕೃಷ್ಣನನ್ನು ಕೂಡಿಸುತ್ತಾರೆ ಮತ್ತು ವೈಭವದಿಂದ ಪೂಜಿಸಿ ಮಾರನೆಯ ದಿನ ಎಲ್ಲರನ್ನೂ ಕರೆದು ಕೃಷ್ಣನಿಗೆ ಆರತಿ ಮಾಡಿ ತಿಂಡಿಗಳನ್ನು ಹಂಚುತ್ತಾರೆ. ಕೃಷ್ಣನ ಮಹಾತ್ಮೆಯನ್ನು ತಿಳಿದುಕೊಳ್ಳಬೇಕಾದರೆ ಭಾಗವತ, ಭಗವದ್ಗೀತೆ, ಉದ್ಧವಗೀತೆ ಮುಂತಾದವುಗಳನ್ನು ಓದಬೇಕು. ಇವುಗಳಿಂದ ಹೆಚ್ಚಿನ ಮಾಹಿತಿಗಳು ಸಿಕ್ಕುತ್ತವೆ.

ಭಾದ್ರಪದ ಮಾಸ

ಈ ಮಾಸದಲ್ಲಿ ಮುಖ್ಯವಾಗಿ ಗೌರಿ, ವಿನಾಯಕ (ಗಣೇಶ) ಎರಡು ಹಬ್ಬಗಳು ಅಂದರೆ ವ್ರತಗಳು

ಆಚರಿಸಲ್ಪಡುತ್ತವೆ. ಇವುಗಳನ್ನು ಹೆಚ್ಚು ಕಮ್ಮಿ ನಮ್ಮ ದೇಶದ ಎಲ್ಲ ಕಡೆ ಆಚರಿಸುವ ಪದ್ಧತಿ ಇದೆ.

ಸ್ವರ್ಣಗೌರಿ ವ್ರತ

ಭಾದ್ರಪದ ಶುದ್ಧ ತದಿಗೆಯ ದಿವಸ ಸ್ವರ್ಣಗೌರಿ ವ್ರತ. ಸೌಮಂಗಲ್ಯ ವೃದ್ಧಿಗೆ ಇದನ್ನು ಎಲ್ಲ ಸ್ತ್ರೀಯರೂ ಆಚರಿಸುತ್ತಾರೆ. ಮದುವೆಯಾದ ಮೊದಲ ವರ್ಷ ಹದಿನಾರು ಮೊರದ ಬಾಗಿನಗಳನ್ನು ಕೊಡಬೇಕು. ಮೊರದ ಜೊತೆಗಳನ್ನು ಮದುವೆಯ ಸಂದರ್ಭದಲ್ಲಿ ಸಿದ್ಧಪಡಿಸುವಂತೆಯೇ ಸಿದ್ಧಪಡಿಸಬೇಕು. ಆ ವಿವರಗಳನ್ನು ನೋಡಿ ಸಿದ್ಧಪಡಿಸಿ. ಅದರ ಒಳಗೆ ಉಂಡೆ, ಚಕ್ಕುಲಿ, ಒಬ್ಬಟ್ಟು, ಇಟ್ಟು ಕೊಡಬೇಕು (ಎಲ್ಲ ಎರಡೆರಡು). ಹದಿನಾರು ಗಂಟುಗಳನ್ನು ಹಾಕಿದ ಅರಿಶಿನದ ದಾರವನ್ನು ಪೂಜಿಸಿ ಕೈಗೆ ಕಟ್ಟಿಕೊಳ್ಳಬೇಕು ಮತ್ತು ಪುರೋಹಿತರಿಂದ ಪೂಜೆ ಮಾಡಿಸಿಕೊಂಡು ವಾಯನದಾನ, ದಕ್ಷಿಣೆ ಇವುಗಳನ್ನು ಕೊಟ್ಟು ಈ ದಾರವನ್ನು ಕಟ್ಟಿಸಿಕೊಳ್ಳಬೇಕು. ಇದರ ಪೂಜಾ ವಿಧಾನ ವ್ರತರತ್ನಮಾಲ ಪುಸ್ತಕದಲ್ಲಿದೆ.

ವಿನಾಯಕ ವ್ರತ

ನಮ್ಮ ದೇವರುಗಳಲ್ಲಿ ಗಣಪತಿಗೆ ವಿಶಿಷ್ಟ ಸ್ಥಾನವಿದೆ. ಯಾವುದೇ ಕಾರ್ಯವನ್ನಾಗಲೀ ಆರಂಭಿಸುವ ಮೊದಲು ಗಣಪತಿ ಪೂಜೆ ಮಾಡಬೇಕೆಂಬ ನಂಬಿಕೆ ಸಾರ್ವತ್ರಿಕವಾಗಿದೆ. ಬಾದ್ರಪದ ಶುದ್ಧ ಚೌತಿಯಂದು ಗಣಪತಿಯನ್ನು ಪೂಜಿಸಬೇಕು. ಆ ದಿನ ಮಣ್ಣಿನ, ಬೆಳ್ಳಿಯ ಅಥವಾ ಚಿನ್ನದ ಗಣಪತಿಯನ್ನು ಇಟ್ಟು ವಿಶೇಷವಾಗಿ ವ್ರತವನ್ನು ಮಾಡುತ್ತಾರೆ. ಇದಕ್ಕೂ ಸಹ ವಿವಿಧ ರೀತಿಯ ಅಲಂಕಾರಗಳನ್ನು ಮಾಡಿ ಗಣಪತಿಯನ್ನು ಕೂಡಿಸಿ, ಮೋದಕ, ಕರಿಗಡುಬುಗಳನ್ನು ಮಾಡಿ (ಕೆಲವರು ಲಡ್ಡು ಸಹ ಮಾಡುತ್ತಾರೆ) ಪುರೋಹಿತರನ್ನು ಕರೆದು ಪೂಜೆ ಮಾಡಿಸಿಕೊಂಡು ವಾಯನದಾನ, ದಕ್ಷಿಣೆ, ಮೋದಕ, ಕರಿಗಡಬು, ಚಕ್ಕುಲಿ, ಮುಂತಾದವುಗಳನ್ನು ಕೊಡಬೇಕು. ಅನಂತರ ಕಥೆ ಓದಬೇಕು. ಸಾಯಂಕಾಲ ಬಗೆಬಗೆಯ (ಕಡ್ಲೆ ಉಸಲಿ, ಕಡ್ಲೆ ಹಿಟ್ಟು, ಕೋಸಂಬರಿ ಇತ್ಯಾದಿ) ಚರುಪುಗಳನ್ನು ಮಾಡಿ ಮಂಗಳಾರತಿಗೆ ಸ್ನೇಹಿತರು, ನೆಂಟರಿಷ್ಟರನ್ನು ಕರೆಯುವ ಪದ್ಧತಿ ನಮ್ಮ ಕರ್ನಾಟಕದಲ್ಲಿ ಇದೆ. ಈ ದಿನ ಚಂದ್ರದರ್ಶನ ಮಾಡಬಾರದು. ನೋಡಿದರೆ ಪರಿಹಾರಕ್ಕಾಗಿ ಶಮಂತಕೋಪಾಖ್ಯಾನವನ್ನು ಓದಬೇಕು (ವ್ರತದ ಪುಸ್ತಕದಲ್ಲಿದೆ).

ಅನಂತಪದ್ಮನಾಭ ಚತುರ್ದಶಿ

ಬಾದ್ರಪದ ಮಾಸದ ಶುದ್ಧ ಚತುರ್ದಶಿಯಂದು ಅನಂತಪದ್ಮನಾಭ ವ್ರತವನ್ನು ಮಾಡುತ್ತಾರೆ. ಇದು ಸಹ ಮನೆಯ ಪದ್ಧತಿ ಇದ್ದವರು ವ್ರತರತ್ನಮಾಲದಲ್ಲಿರುವಂತೆ ವ್ರತವನ್ನು ಮಾಡಿ 14 ಎಳೆದಾರವನ್ನು ಕಟ್ಟಿಕೊಳ್ಳುತ್ತಾರೆ. 14 ಎಳೆ ಗೆಜ್ಜೆ ವಸ್ತ್ರ, ನೈವೇದ್ಯಕ್ಕೆ 14 ಬಗೆ ಭಕ್ಷಭೋಜ್ಯಗಳನ್ನು ಮಾಡುವ ಪದ್ಧತಿ ಮತ್ತು ಮಾರನೆ ದಿನ ವಿಸರ್ಜಿಸುತ್ತಾರೆ.

ಶರನ್ನವರಾತ್ರಿ ಆಶ್ವಯುಜ ಮಾಸ

ಶರನ್ನವರಾತ್ರಿಯಲ್ಲಿ ಮುಖ್ಯವಾಗಿ ದುರ್ಗಾ ಪೂಜೆಯನ್ನು ನಮ್ಮ ಭಾರತದ ಎಲ್ಲ ರಾಜ್ಯಗಳಲ್ಲೂ ಆಚರಿಸುತ್ತಾರೆ. ಉತ್ತರ ಭಾರತದಲ್ಲಿ ಒಂಬತ್ತು ದಿನಗಳು ಉಪವಾಸವಿದ್ದು ನವರಾತ್ರಿಯನ್ನು ಆಚರಿಸುತ್ತಾರೆ. ಕಡೆಯ ದಿನ (ಒಂಬತ್ತನೆಯ ದಿನ) ಉತ್ಸವದೊಂದಿಗೆ ದುರ್ಗೆಯನ್ನು ನೀರಿಗೆ ವಿಸರ್ಜನೆ ಮಾಡುತ್ತಾರೆ.

ನಮ್ಮ ದಕ್ಷಿಣದಲ್ಲಿ ಒಂಬತ್ತು ದಿನಗಳು ಪೂಜೆಗಳು ಅಂದರೆ ಲಲಿತಾ ಸಹಸ್ರನಾಮ, ಸಪ್ತಶತಿ ಪರಾಯಣ, ಸುಮಂಗಲಿ ಪೂಜೆ, ಕನ್ಯಾಪೂಜೆಗಳು ಮತ್ತು ದೇವಸ್ಥಾನಗಳಲ್ಲಿ ರಾಮಾಯಣ ಪಾರಾಯಣ ಕುಂಕುಮಾರ್ಚನೆ ಮುಂತಾದವುಗಳನ್ನು ಏರ್ಪಡಿಸಿ ಕಡೆಯ ದಿವಸ ಚಂಡಿಹೋಮ, ಸುವಾಸಿನಿಯರ ಪೂಜೆ ಮುಂತಾದವುಗಳನ್ನು ವೈಭವದಿಂದ ಮಾಡುತ್ತಾರೆ. ಮನೆಗಳಲ್ಲೂ ಸಹ ಇದನ್ನೆಲ್ಲ ಮಾಡುತ್ತಾರೆ. ಕೆಲವರು ಸುಂದರಕಾಂಡ ಪಾರಾಯಣ ಮಾಡಿ ಒಂಬತ್ತನೆಯ ದಿನ ಮುಗಿಸುತ್ತಾರೆ.

ಮೈಸೂರಿನ ದಸರಾ ನಮ್ಮ ದೇಶದಲ್ಲಿ ಪ್ರಸಿದ್ಧಿ. ಇದರ ವೈಭವವನ್ನು ನೋಡಲು ಜನರು ಹೋಗುತ್ತಾರೆ. ಹೊರದೇಶಗಳಿಂದ ಈ ದಸರಾ ವೈಭವವನ್ನು ನೋಡಲು ಜನಗಳು ಬರುತ್ತಾರೆ. ಒಂಭತ್ತು ದಿನಗಳಲ್ಲಿ ದುರ್ಗಾಷ್ಟಮಿ, ಸರಸ್ವತಿ ಪೂಜೆ, ಮಾರ್‍ನವಮಿಗಳು ಮುಖ್ಯವಾದುವುಗಳು. ಈ ನವರಾತ್ರಿಯಲ್ಲಿ ಬೊಂಬೆ ಇಡುವ ಪದ್ಧತಿ ಬಹಳ ಹಿಂದಿನಿಂದ ನಡೆದು ಬಂದಿದೆ. ತುಂಬಾ ಮನೆಗಳಲ್ಲಿ ನವರಾತ್ರಿ ಪಾಡ್ಯದಿಂದಲೇ ಮಂಟಪಗಳನ್ನು ಮಾಡಿ ಪಟ್ಟದ ಬೊಂಬೆಗಳನ್ನು ಮೊದಲನೇ ಅಂತಸ್ತಿನಲ್ಲಿಟ್ಟು ಕೆಳಗೆ ಐದು ಆರು ಅಂತಸ್ತುಗಳಲ್ಲಿ ರಾಮಾಯಣ, ದಶಾವತಾರ, ಮದುವೆ ಮುಂತಾದವುಗಳನ್ನು ಪ್ರತಿಬಿಂಬಿಸುವ ವಿಧವಿಧವಾದ ಬೊಂಬೆಗಳನ್ನು ಅಂದವಾಗಿ ಜೋಡಿಸುತ್ತಾರೆ. ಈಗಿನ ಕಾಲದಲ್ಲಿ ಇಂತಹ ಏರ್ಪಾಡುಗಳಿಗೆ ಬಹುಮಾನಗಳನ್ನು ಸಹ ಕೊಡುತ್ತಾರೆ. ಮಕ್ಕಳಿಗೆ, ನೋಡಲು ಬಂದವರಿಗೆ ತಿಂಡಿ ಪದಾರ್ಥಗಳನ್ನು ಕೊಡುತ್ತಾರೆ (ಚಕ್ಕುಲಿ, ಮಿಠಾಯಿ, ಉಂಡೆಗಳು ಇತ್ಯಾದಿ). ಈ ತಿಂಗಳ ಚತುರ್ದಶಿಯಂದು ನರಕ ಚತುರ್ದಶಿ ಇದೆ.

ಕಾರ್ತೀಕ ಮಾಸ (ದೀಪಾವಳಿ)

ಈ ಮಾಸದಲ್ಲಿ ಪಾಡ್ಯದ ದಿವಸದಿಂದ ದೀಪಾವಳಿ ಹಬ್ಬವನ್ನು ಆಚರಿಸುವ ಪದ್ಧತಿ ನಮ್ಮ ಭಾರತದಲ್ಲಿ ಎಲ್ಲ ಕಡೆ ಇದೆ. ಮತ್ತು ಆ ಮಾಸದಲ್ಲಿ ಒಂದು ತಿಂಗಳು ದೀಪಗಳನ್ನು ಹಚ್ಚುವುದಕ್ಕೆ ಮತ್ತು ನದಿಸ್ನಾನಕ್ಕೆ ತುಂಬಾ ಮಹತ್ವವಿದೆ. ಇದಲ್ಲದೆ ಕಾರ್ತೀಕ ಪುರಾಣ ಶ್ರವಣ ಮಾಡುತ್ತಾರೆ; ಅದನ್ನು ಓದುತ್ತಾರೆ. ದೇವಸ್ಥಾನಗಳಲ್ಲಿ ದಿನಕ್ಕೆ ಹತ್ತು ಸಾವಿರ, ಇಪ್ಪತ್ತು ಸಾವಿರ ಹೀಗೆ ಸಾಧ್ಯವಾದಷ್ಟು ದೀಪಗಳನ್ನು ಹಚ್ಚಿ ಕಾರ್ತೀಕ ಮಾಸದ ಕಡೇ ಹೊತ್ತಿಗೆ ಲಕ್ಷ ದೀಪಾರಾಧನೆ ಮಾಡುತ್ತಾರೆ. ಈ ದಿನ ವಿಷ್ಣು ಬಲಿಯನ್ನು ಪಾತಾಳಕ್ಕೆ ತಳ್ಳಿದ ಮೇಲೆ ಒಂದು ದಿನ ಬಲಿಯು ಭೂಮಿಗೆ ಬರಲು ಅನುಮತಿ ಕೇಳಿದನೆಂದು ಪುರಾಣ ಹೇಳುತ್ತದೆ. ಶಿವ ದೀಪೋತ್ಸವವನ್ನು ಅಮಾವಾಸ್ಯೆಯ ದಿನ ಮಾಡುವುದು ಪ್ರಸಿದ್ಧಿಯಾಗಿದೆ. ಬಲಿಪಾಡ್ಯಮಿಯಂದು ಬೆಳಗ್ಗೆ ಸಗಣಿಯಲ್ಲಿ ಬಲೀಂದ್ರನ ಕೋಟೆ ಕಟ್ಟಿ ಅದನ್ನು ಪೂಜಿಸುತ್ತಾರೆ. ಸಾಯಂಕಾಲ ಬಲೀಂದ್ರನ ಕಳಶವಿಟ್ಟು ಪೂಜೆ ಮಾಡಿ 'ಮೂರು ಮತ್ತೊಂದು ಘಳಿಗೆ ಬಲೀಂದ್ರನ ಪಾಡ್ಯವೋ ಪಾಡ್ಯವೆಂದು' ಹೇಳುತ್ತ ಕಳಸದ ಸುತ್ತ ಮೂರುಸಲ ಹಾಲನ್ನು ಹಾಕಬೇಕು ಮತ್ತು ಪೂಜೆ ಮಾಡಿದ ಹೂವನ್ನು 'ಹೊನ್ನೆಚ್ಚಲಿ' ಎಂದು ಮನೆಯ ಒಳಗೆ ಮೇಲಕ್ಕೆ ಎಸೆಯಬೇಕು. ಧರ್ಮಸ್ಥಳದಲ್ಲಿ ಲಕ್ಷದೀಪೋತ್ಸವ ಬಹಳ ವಿಜೃಂಭಣೆಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಎಂಟು ದಿನ ಮುಂಚಿತವಾಗಿಯೇ ನಡೆಯುತ್ತದೆ. ಅದರಲ್ಲೂ ಜನಗಳು ಭಾಗವಹಿಸುತ್ತಾರೆ. ಬೇರೆ ದೇವಸ್ಥಾನಗಳಲ್ಲಿ ಅಮಾವಾಸ್ಯೆ ದಿನದಂದು ಲಕ್ಷದೀಪೋತ್ಸವ ಮಾಡುತ್ತಾರೆ.

ಈ ದಿನದಲ್ಲಿ ಮಹಿಳೆಯರು ವ್ರತಗಳನ್ನು ಮಾಡಬಹುದು. ಇದು ನಮ್ಮ ಆತ್ಮೋದ್ಧಾರಕ್ಕೆ ಬೇಕಾದ ವ್ರತಗಳು. ಇಂತಹ ಅನೇಕ ನೇಮ, ಉಪವಾಸಗಳು ಇವೆ. ಉದಾಹರಣೆಗೆ ಹುಣ್ಣಿಮೆ, ವೈಕುಂಠ ಚತುರ್ದಶಿ, ಸೋಮವಾರಗಳು, ಉತ್ಥಾನ ದ್ವಾದಶಿ ಮುಂತಾದ ಬೇಕಾದಷ್ಟು ವ್ರತಗಳಿವೆ. ಕಡೆಯ ಪಕ್ಷ ಇದರಲ್ಲಿ ಒಂದನ್ನಾದರೂ ಆಚರಣೆ ಮಾಡಬಹುದು ಅಥವಾ ಕಾರ್ತೀಕ ಪುರಾಣವನ್ನು ಓದಿ ಒಬ್ಬ ಬ್ರಾಹ್ಮಣನಿಗೆ ಒಂದು ಜೊತೆ ದೀಪ ದಾನ ಕೊಡಬಹುದು. ಈ ಮಾಸದಲ್ಲಿ ದಾನಕ್ಕೆ ಬಹಳ ಮಹತ್ವ, ಏಕೆಂದರೆ ಈ ಮಾಸದಲ್ಲಿ ಏನು ಧರ್ಮಕಾರ್ಯ ಮಾಡಿದರೂ ಅದಕ್ಕೆ ಬಹಳ ಪುಣ್ಯವೆಂದು ಹೇಳಿದ್ದಾರೆ. ಉದಾಹರಣೆಗೆ ಮದುವೆ, ಮುಂಜಿ ಮುಂತಾದವುಗಳನ್ನು ಮಾಡಿಸುವುದು; ಇಲ್ಲದಿದ್ದರೆ ಅದಕ್ಕೆ ಸಹಾಯ ಮಾಡುವುದು ಇತ್ಯಾದಿಗಳು. ಕಡೆಯ ಪಕ್ಷ ವಿಷ್ಣು, ಶಿವ ಇವರ ಪೂಜೆ ಜಪ ಇವುಗಳನ್ನಾದರೂ ಮಾಡಬೇಕು. ಇಂತಹ ಅನೇಕ ವ್ರತಗಳ ಆಚರಣಾ ಕ್ರಮಗಳು 'ವ್ರತರತ್ನಮಾಲ'ದಲ್ಲಿವೆ. ಆದರೆ ಸಾಮಾನ್ಯವಾಗಿ ಎಲ್ಲರೂ ಉತ್ಥಾನದ್ವಾದಶಿಯನ್ನು ಆಚರಿಸುತ್ತಾರೆ. ಆದಿನ ತುಳಸಿ ಗಿಡದಲ್ಲಿ ನೆಲ್ಲಿ ಕೊನೆ, ಅಗಸೆ ಕೊನೆಗಳನ್ನು ನೆಟ್ಟು ಅದನ್ನು ಬೆಳಗ್ಗೆ ಮತ್ತು ಸಾಯಂಕಾಲ ಪೂಜಿಸಿ ಆರತಿ ಮಾಡುತ್ತಾರೆ. ಏಕೆಂದರೆ ಈ ದಿನವು ಬೃಂದಾವನದಲ್ಲಿ ಪವಡಿಸಿದ ಪರಮಾತ್ಮನನ್ನು ಎಚ್ಚರಿಸುವ ದಿನ. ಚಾತುರ್ಮಾಸ ಮುಗಿಯುವ ದಿನ. ಆದ್ದರಿಂದ ಬೃಂದಾವನಕ್ಕೆ ಅಲಂಕಾರ ಮಾಡುತ್ತಾರೆ.


ತುಳಸಿ ಮಹಾತ್ಮೆ

ತುಳಸಿ ದರ್ಶನದಿಂದ ಪಾಪಪರಿಹಾರ, ಸ್ಪರ್ಶದಿಂದ ಪವಿತ್ರತೆ, ವಂದನೆಯಿಂದ ರೋಗ ಪರಿಹಾರ, ಪ್ರೋಕ್ಷಿಸಿಕೊಂಡರೆ ಆಯುಷ್ಯಾಭಿವೃದ್ಧಿ, ಸಸಿ ನೆಡುವುದರಿಂದ ಶ್ರೀಕೃಷ್ಣನ ಸಾನ್ನಿದ್ಯ ಲಾಭ, ಅರ್ಚಿಸಿದರೆ ಮೋಕ್ಷವೆಂದು ಸನಾತನ ಅಭಿಪ್ರಾಯ. ಒಂದು ತುಳಸಿ ಸಸಿಯನ್ನು ಚೆನ್ನಾಗಿ ಬೆಳೆಸಿ ಅದನ್ನು ಉತ್ಥಾನ ದ್ವಾದಶಿಯ ದಿನ ದಂಪತಿಗಳಿಗೆ ಶಾಸ್ತ್ರೋಕ್ತವಾಗಿ ದಾನ ಮಾಡಿದರೆ ಕನ್ಯಾದಾನದ ಫಲ ಸಿಗುತ್ತದೆ.

ತುಳಸಿ ಇರುವ ಕಡೆ ಸೊಳ್ಳೆ, ಅಂಟುರೋಗಗಳ ಬಾಧೆ ಇಲ್ಲ. ಮಕ್ಕಳ ಕೆಮ್ಮು ನೆಗಡಿಗೆ ಮದ್ದು. ಚರ್ಮ ವ್ಯಾಧಿಗಳಿಗೂ ಇದು ಉತ್ತಮ ಔಷಧಿ. ಈ ಕಾರ್ತೀಕ ಮಾಸದಲ್ಲಿ ಪ್ರತಿಯೊಂದು ದಿನವೂ ಪುಣ್ಯದಿನವಾದ್ದರಿಂದ ಇದನ್ನು ಆಚರಿಸಲು ಪ್ರಯತ್ನ ಪಡಬಹುದು. ಇದನ್ನು ಏಕೆ ಬರೆಯುತ್ತಿದ್ದೇವೆಂದರೆ ನಾನು ವೈಕುಂಠ ಚತುರ್ದಶಿಯ ವ್ರತ ಮತ್ತು ಕೃಷ್ಣ ಪಕ್ಷ ಚೌತಿಯಂದು ಸಂಕಷ್ಟಹರ ಗಣಪತಿ ವ್ರತ ಇವುಗಳನ್ನು ಇಪ್ಪತ್ತೈದು ವರ್ಷಗಳ ಕಾಲ ಮಾಡಿ ಎರಡನ್ನೂ ಸೇರಿಸಿ ಉದ್ಯಾಪನೆ ನಡೆಸುವಾಗ ಮಾಡಿದ ಹೋಮದ ಅಗ್ನಿಯಲ್ಲೇ ಭಗವಂತನು ಆವಿರ್ಭವಿಸಿ ಅನುಗ್ರಹ ಮಾಡಿದ್ದಾನೆ. ಅದು ಎರಡನೇ ರಕ್ಷಾಪುಟದಲ್ಲಿನ ಫೋಟೋದಲ್ಲಿ ಬಂದಿರುವುದನ್ನು ಎಲ್ಲರೂ ನೋಡಬಹುದು.

ಸೂಚನೆ: ಕಾರ್ತೀಕ ಮಾಸದಲ್ಲಿ ದೇವಸ್ಥಾನಗಳಲ್ಲಿ ಸಾಧ್ಯವಿದ್ದಷ್ಟು ದೀಪಗಳನ್ನು ಹೊತ್ತಿಸಬೇಕು. ಹಸುವಿನ ತುಪ್ಪದ ಒಂದು ದೀಪವು ಒಂದು ಕೋಟಿ ಎಣ್ಣೆ ದೀಪಗಳಿಗೆ ಸಮ. ಹೊಸ್ತಿಲ ಬದಿಯಲ್ಲಿ ಎರಡು ಕಡೆ ಒಂದೊಂದು ದೀಪವನ್ನಾದರೂ ಬೆಳಗಿಸುವ ನಮ್ಮ ಪೂರ್ವಿಕರ ಪದ್ಧತಿಯಲ್ಲಿ ವಿಶೇಷ ಹಿರಿಮೆ ಇದೆ. ಈ ರೀತಿ ದೀಪ ಹೊತ್ತಿಸುವಾಗ ಈ ಮಂತ್ರವನ್ನು ಹೇಳಬೇಕು.

ವೈಕುಂಠ ಚತುರ್ದಶಿ ದೀಪ (ವ್ರತ)



ವೈಕುಂಠ ಚತುರ್ದಶಿ ದೀಪ

ಕೀಟಾಃ ಪತಂಗಾಃ ಮಷಕಾಶ್ಚ ವೃಕಾ
ಜಲೇ ಸ್ಥಳೇಯೇ ನಿವಸಂತಿ ಜೀವಾಃ
ದೃಷ್ಟ್ವಾ ಪ್ರದೀಪಂ ನ ಚ ಜನ್ಮಭಾಜಾ
ಭವಂತಿ ನಿತ್ಯಂ ಶ್ವಪಚಾ ಹಿ ವಿಪ್ರಾಃ

ಈ ಜೀವಿಗಳೆಲ್ಲ ಆ ದೀಪವನ್ನು ನೋಡಿ ಆ ಜೀವಗಳು ಸಕಲ ಪಾಪದಿಂದ ಬಿಡುಗಡೆ ಹೊಂದಲಿ ಮತ್ತೊಂದು ಜನ್ಮ ತಾಳದಿರಲಿ ಎಂಬುದೇ ಈ ಶ್ಲೋಕದ ತಾತ್ಪರ್ಯ.

ವೈಕುಂಠ ಚತುರ್ದಶಿ ವ್ರತ

ವೈಕುಂಠ ಚತುರ್ದಶಿ ದೀಪ ಹಚ್ಚುವವರು ಅಂದು ಸಾಯಂಕಾಲದವರೆಗೆ ಉಪವಾಸವಿದ್ದು ಚಿತ್ರದಲ್ಲಿ ಕೊಟ್ಟಿರುವಂತೆ 366 ಪದ್ಮ, ಶಂಖ, ಲಿಂಗ ಎಲ್ಲವನ್ನೂ ರಂಗೋಲಿಯಿಂದ ಅಚ್ಚಿಸಬೇಕು. ನಾಲ್ಕುನೂರು ಬತ್ತಿಗಳನ್ನು ನೆನೆಸಿ ಒಂದು ದೊಡ್ಡ ಹಣತೆಗೆ ಎಳ್ಳೆಣ್ಣೆಯನ್ನೂ (ಶಿವಪರ) ಇನ್ನೊಂದು ಹಣತೆಗೆ ತುಪ್ಪವನ್ನೂ (ವಿಷ್ಣುಪರ) ತುಂಬ ಹಾಕಿ ಇಟ್ಟುಕೊಳ್ಳಬೇಕು. ವ್ರತರತ್ನಮಾಲದಲ್ಲಿರುವಂತೆ ಸಾಯಂಕಾಲ ಇವುಗಳಿಗೆ ಪುರೋಹಿತರಿಂದ ಪೂಜೆ ಮಾಡಿಸಿ ವಾಯನದಾನ ಕೊಟ್ಟು ಹುಗ್ಗಿಯನ್ನು ತಿನ್ನಬೇಕು. ತಂಬಿಟ್ಟು, ಕಡ್ಲೆಬೇಳೆ ಕೋಸಂಬರಿ ಮಾಡಿ ನೈವೇದ್ಯಕ್ಕೆ ಇಟ್ಟುಕೊಂಡು ಆಮೇಲೆ ತಿನ್ನಬಹುದು. ಇದರಲ್ಲಿ ಸ್ವರ್ಗದ ಬಾಗಿಲನ್ನು ತೆಗೆದು ನರಕದ ಬಾಗಿಲನ್ನು ಹಾಕಬೇಕು (ಆಷಾಢಮಾಸದ ಗೋಪದ್ಮದ ರಂಗವಲ್ಲಿಯಂತೆ).

ಮಾರ್ಗಶಿರ ಮಾಸ : ಈ ಮಾಸದಲ್ಲಿ ಮುಖ್ಯವಾಗಿ ಎರಡು ಹಬ್ಬಗಳು ಇವೆ. ಹುಣ್ಣಿಮೆಯಂದು (1) ದತ್ತ ಜಯಂತಿ (2) ಸುಬ್ರಹ್ಮಣ್ಯ ಷಷ್ಠಿ.

ದತ್ತ ಜಯಂತಿ

ಇದನ್ನು ಗುರುಪೂರ್ಣಿಮೆ ಎಂದು ಹೇಳುತ್ತಾರೆ. ಅನಸೂಯತನಯನಾದ ದತ್ತಾತ್ರೇಯನು ತ್ರಿಮೂರ್ತಿ ಸ್ವರೂಪವೆಂದೂ ಅದ್ವೈತದ ಸಾಕಾರಮೂರ್ತಿ ಎಂದೂ ವರ್ಣಿತವಾಗಿದೆ. ದತ್ತಾತ್ರೇಯನನ್ನು ಅವತಾರವೆಂದು ಈ ದಿನ ಸ್ಮರಿಸಿ ಗುರುಚರಿತ್ರೆ ಪಾರಾಯಣ ಮತ್ತು ಔದುಂಬರ ವೃಕ್ಷ ಹಾಗೂ ಶ್ರೀ ದತ್ತಮೂರ್ತಿಗೆ ಅರ್ಚನೆ ನಡೆಯುತ್ತದೆ. ದಾಸಪಂಥ ಮತ್ತು ಗುರುಪಂಗಡಗಳಿಗೆ ಇದು ಶ್ರೇಷ್ಠವಾದ ದಿನ. ದತ್ತಾತ್ರೇಯರ ಸಪ್ತಾಹವನ್ನು ಮಾಡಿ ಪೂರ್ಣಿಮೆಯ ದಿನದಂದು ಪೂರ್ಣಗೊಳಿಸುತ್ತಾರೆ.

ಸುಬ್ರಹ್ಮಣ್ಯ ಷಷ್ಠಿ

ಶಿವ ಪಾರ್ವತಿ ಪುತ್ರನೆಂದು ಖ್ಯಾತನಾಗಿರುವ ಸುಬ್ರಹ್ಮಣ್ಯನನ್ನು ಶಕ್ತಿ ದೇವತೆಯೆಂದು ಆರಾಧಿಸಲಾಗುತ್ತದೆ. ಈ ದಿನ ದೇವರಿಗೆ ಷೋಡಷೋಪಚಾರ ಪೂಜೆ ನಡೆಸಿ ಉಪನಯನವಾಗಿರುವ ಬಾಲಕನನ್ನು ಸುಬ್ರಹ್ಮಣ್ಯನೆಂದು ಭಾವಿಸಿ ಆಂಬೊಡೆ ಪಾಯಸ ಮಾಡಿ ಭೋಜನ ಮಾಡಿಸುತ್ತಾರೆ. ಈ ದಿನ ಕುಕ್ಕೆ ಸುಬ್ರಹ್ಮಣ್ಯ, ರಾಮನಾಥಪುರ, ಬೆಂಗಳೂರಿನ ವಿಶ್ವೇಶ್ವರಪುರ ಸೇರಿದಂತೆ ಹಲವು ಕಡೆ ರಥೋತ್ಸವಗಳು ನಡೆಯುತ್ತವೆ.

ಧನುರ್ಮಾಸ

ಇದು ಮಾರ್ಗಶಿರ ಮಾಸದ ಸಪ್ತಮಿಯ ದಿವಸ ಪ್ರಾರಂಭವಾಗಿ ಪುಷ್ಯಮಾಸದ ಶುದ್ಧ ಪಂಚಮಿಗೆ ಮುಗಿಯುತ್ತದೆ. ಈ ತಿಂಗಳಲ್ಲಿ ಸೂರ್ಯೋದಯಕ್ಕೆ ಮುಂಚೆ ನದೀಸ್ನಾನ, ಪೂಜೆ ಮಾಡಿದರೆ ಶ್ರೇಷ್ಠ. ಆದ್ದರಿಂದ ದೇವಸ್ಥಾನಗಳಲ್ಲಿ ಸಾಮಾನ್ಯವಾಗಿ ಪ್ರಾತಃಕಾಲಕ್ಕೆ ಮುನ್ನವೇ ಪೂಜೆ ಮಾಡುತ್ತಾರೆ. ದೇವರಿಗೆ ನಿತ್ಯವೂ ಹುಗ್ಗಿ ನಿವೇದನೆ ಮಾಡುತ್ತಾರೆ.

ಪುಷ್ಯಮಾಸ – ಸಂಕ್ರಾಂತಿ

ಈ ಮಾಸದಲ್ಲಿ ವಿಶೇಷವಾದ ಹಬ್ಬ ಸಂಕ್ರಾಂತಿ (ಪೊಂಗಲ್). ಸೂರ್ಯನು ದಕ್ಷಿಣಾಯಣದಿಂದ ಉತ್ತರಾಯಣಕ್ಕೆ ಪ್ರವೇಶಿಸುವ ದಿನವು ಈ ಮಾಸದಲ್ಲಿ ಬರುತ್ತದೆ. ಈ ದಿನವನ್ನು ಉತ್ತರಾಯಣ ಪುಣ್ಯಕಾಲವೆಂದು (ಸಂಕ್ರಮಣ) ಕರೆಯುತ್ತಾರೆ. ಇದು ಸುಗ್ಗಿಯ ಕಾಲವಾದ್ದರಿಂದ ಹೊಸ ಅಕ್ಕಿಯನ್ನು ತಂದು ಹುಗ್ಗಿ (ಪೊಂಗಲ್) ಮಾಡಿ ದೇವರಿಗೆ ನೈವೇದ್ಯ ಮಾಡುತ್ತಾರೆ ಮತ್ತು ಒಂದು ತಟ್ಟೆಯಲ್ಲಿ ಅಕ್ಕಿ ಹಾಕಿ ಅದರ ಮೇಲೆ ಒಂದು ಹೊಸ ಪಾತ್ರೆಯಲ್ಲಿ ಮೊಸರು ಹಾಕಿ ಇಡಿ ಜೊತೆಗೆ ಕಡಲೇಬೀಜ, ಬೆಲ್ಲ, ಕೊಬ್ಬರಿ, ಕಡ್ಲೆಗಳನ್ನು ಹುರಿದ ಎಳ್ಳಿನ ಜೊತೆ ಬೆರೆಸಿ ಇದನ್ನು ಸಹ ಇಡಿ. ಅವರೆಕಾಯಿ, ಸಿಹಿಕುಂಬಳಕಾಯಿ (ಚಿಕ್ಕದು), ಅಚ್ಚು ಬೆಲ್ಲ, ತೆಂಗಿನಕಾಯಿ ಒಂದು ದಕ್ಷಿಣೆ ಇವುಗಳನ್ನೆಲ್ಲಾ ಇಟ್ಟಿರುವ ತಟ್ಟೆಯನ್ನು ಒಂದು ಮಣೆಯ ಮೇಲೆ ಇಡಬೇಕು. ಮಣೆಯ ಮುಂದೆ ರಂಗವಲ್ಲಿ ಬರೆದು ದೀಪ ಹಚ್ಚಿಡಬೇಕು. ದೇವರ ಪೂಜೆ ಜೊತೆಯಲ್ಲಿ ಅದಕ್ಕೂ ಪೂಜೆ, ಮಂಗಳಾರತಿ ಮಾಡಿ ಒಬ್ಬ ಸಾತ್ವಿಕ ಬ್ರಾಹ್ಮಣನಿಗೆ ದಾನಕೊಟ್ಟು ಊಟಮಾಡಬೇಕು. ಎಳ್ಳು ಬೆಲ್ಲ ತಿಂದು ಒಳ್ಳೆ ಮಾತಾಡಿ ಎಂದು ನಾಣ್ನುಡಿ ಇದೆ.

ಈ ದಿನ ಸಾಯಂಕಾಲ ಚಿಕ್ಕ ಮಕ್ಕಳಿಗೆ ಆರತಿ ಮಾಡಿ ಬೆರೆಸಿದ ಎಳ್ಳು, ಕಬ್ಬಿನ ಸಣ್ಣ ಚೂರು, ಎಲಚಿಹಣ್ಣು, ದುಡ್ಡು ಎಲ್ಲವನ್ನೂ ಸೇರಿಸಿ ಹಿರಿಯ ಮುತ್ತೈದೆಯರು ತಲೆಯಿಂದ ಮುಖದವರೆಗೆ

ಇಳಿ ತೆಗೆಯುತ್ತಾರೆ. ಬಂದವರಿಗೂ ಸಹ ಎಳ್ಳು ಕಬ್ಬು ಮುಂತಾದವುಗಳನ್ನು ಬೀರುತ್ತಾರೆ. ಮದುವೆಯಾದ ಹುಡುಗಿಯರಿಗೆ ನೋಹಿ ಮಾಡುತ್ತಾರೆ. ಬಾಳೆ ಹಣ್ಣು, ಬಾಳೆ ಚಿಪ್ಪು, ಕೊಬ್ಬರಿ ಬಟ್ಟಲು ಕೊಡುವುದು, ಅರಿಶಿನ, ಕುಂಕುಮ ಹಚ್ಚಿಸುವುದು ಹೀಗೆ ಅನೇಕ ನೋಹಿಗಳನ್ನು ಮಾಡುತ್ತಾರೆ.

ಬಾಳೆ ಹಣ್ಣು ಕೊಡುವುದು

ಇದನ್ನು ಮೊದಲನೆಯ ವರ್ಷ 5, ಎರಡನೆಯ ವರ್ಷ 10, ಹೀಗೆ 5 ವರ್ಷಗಳ ಕಾಲ ಹೆಚ್ಚಿಸುತ್ತಾ ಕೊಡಬೇಕು. ಅಲಂಕಾರ ಮಾಡಿರುವ ಒಂದು ಚಿಕ್ಕ ಮಣ್ಣಿನ ಕುಡಿಕೆ ಒಳಗೆ ಹೊಸ ಭತ್ತ, ಅವರೆಕಾಯಿ, ಎಲಚಿ ಹಣ್ಣು, ದಕ್ಷಿಣೆ ಇವುಗಳನ್ನು ಹಾಕಿ, ಎಳ್ಳು, ಸಕ್ಕರೆ ಅಚ್ಚು, ಕೊಬ್ಬರಿ ಬಟ್ಟಲು, ಅದಕ್ಕೆ ಸ್ವಲ್ಪ ಹಾಲು ತುಪ್ಪ ಬೆರಸಿ, ಇಡೀ ಒಂದು ತೆಂಗಿನಕಾಯಿ ವಿಳ್ಳೇದೆಲೆ ಅಡಿಕೆ ಜೊತೆಗೆ ದಕ್ಷಿಣೆ ಇಟ್ಟು ಐದು ಜನ ಮುತ್ತೈದೆಯರಿಗೆ ಕೊಡಬೇಕು. ಇದೇ ತರಹ ಮಿಕ್ಕ ನವಮಿಗಳನ್ನು ಮಾಡಬಹುದು. ಇವೆಲ್ಲವನ್ನೂ ಐದು ವರ್ಷಗಳ ಕಾಲ ಮಾಡಬೇಕು). ಕೃಷ್ಣನು ಆ ದಿನ ನೋಹಿವ್ರತಗಳನ್ನು ಬಂಡಿಯ ಮೇಲೆ ಹೇರಿಕೊಂಡು ಬರುತ್ತಾನೆಂದು ಹೇಳುತ್ತಾರೆ. ಈ ದಿನ ಬಹಳ ಪುಣ್ಯದಿನ. ದಾನ, ಧರ್ಮ ಮಾಡಿ ಪುಣ್ಯಗಳಿಸಿಕೊಳ್ಳಬೇಕು. ಕಾಲವಾದವರಿಗೆ (ಹಿರಿಯರಿಗೆ) ಗಂಡಸರು ಈ ದಿನ ತರ್ಪಣವನ್ನು ಕೊಡುತ್ತಾರೆ.

ಮಾಘ ಮಾಸ

ಈ ಮಾಸ ಮಹಿಳೆಯರಿಗೆ ಬಹಳ ಶ್ರೇಷ್ಠವಾದ ಮಾಸ. ಮಾಘದಲ್ಲಿ ಗೌರಿಯನ್ನು ಪರಿಪರಿಯಾಗಿ ಪೂಜಿಸುತ್ತಾರೆ. ಬೆಳಗಿನ ಜಾವ 4, 5 ಗಂಟೆಯೊಳಗೆ ಎದ್ದು ಸ್ನಾನಮಾಡಿ ಮಾಘ ಗೌರಿ, ಮೌನಗೌರಿ ಪೂಜೆಯನ್ನು ಮಾಡುತ್ತಾರೆ.

ಮೌನಗೌರಿ

ಮೌನಗೌರಿ ಪೂಜೆಗೆ ಸಿದ್ಧತೆಗಳು: ಅರಿಸಿನ, ಕುಂಕುಮ, ಮಂತ್ರಾಕ್ಷತೆ, ಚಂದ್ರ ಇವನ್ನೆಲ್ಲ ಪಂಚವಾಳದಲ್ಲಿ ಇಟ್ಟುಕೊಳ್ಳಬೇಕು. ನೈವೇದ್ಯಕ್ಕೆ ವಿಳ್ಳೇದೆಲೆ, ಅಡಕೆ ಹಣ್ಣು, ಕಡ್ಲೇಬೇಳೆ (ಹಸಿ ಕಡಲೆಕಾಳು) ಮತ್ತು ಹಣ್ಣುಗಳು. ಒಂದು ತಟ್ಟೆಯಲ್ಲಿ ನಿತ್ಯಗೌರಿ (ಅನ್ನಪೂರ್ಣೆ), ಅರಿಸಿನದಿಂದ ಮಾಡಿದ ಗೌರಿ, ಮರಳನ್ನು ಒಂದು ಚಿಕ್ಕ ಕರಿಬಟ್ಟೆಯೊಳಗೆ ಕಟ್ಟಿ ಇಟ್ಟುಕೊಂಡ ಮರಳಗೌರಿ, ಹುತ್ತದ ಮಣ್ಣಿನಿಂದ ಮಾಡಿದ ಚಿಕ್ಕ ಲಿಂಗ ಇವುಗಳನ್ನು ಇಟ್ಟುಕೊಳ್ಳಬೇಕು. ಸುತ್ತಲೂ ಶಂಖ, ಪದ್ಮ, ಚಕ್ರ, ಸ್ವಸ್ತಿಕ್ ರಂಗವಲ್ಲಿ ಬಿಡಿಸಿದ ಒಂದು ಮಣೆಯ ಮೇಲೆ ಈ ತಟ್ಟೆಯನ್ನು ಇಟ್ಟುಕೊಂಡು ದೀಪ ಹಚ್ಚಿಕೊಂಡು ಪೂಜೆ ಮಾಡಿ ಧೂಪ, ದೀಪ ನೈವೇದ್ಯಗಳನ್ನು ಮಾಡಿ ನಮಸ್ಕಾರಗಳನ್ನು ಮಾಡಿ ಸೂರ್ಯ ಮುಳುಗುವುದರೊಳಗೆ ಊಟ ಮಾಡಬೇಕು.

ಬೆಳಗ್ಗೆ ಎದ್ದಾಗಿನಿಂದ ಪೂಜೆ ಆಗುವವರೆಗೆ ಮೌನವಾಗಿರಬೇಕು ಮತ್ತು ಊಟ ಮಾಡುವಾಗ ಮಾತನಾಡಬಾರದು ಇದಕ್ಕೆ ಮುಖ್ಯವಾಗಿ ತುರುಬೇ ಹೂ, ತುಂಬೆ ಹೂ, ಮುಖ್ಯ. ತದಿಗೆಯಿಂದ ಇನ್ನೊಂದು ತದಿಗೆವರೆಗೆ ಪೂಜೆ ಮಾಡಿ ಕಡೆಯ ದಿನ ಒಬ್ಬ ಮುತ್ತೈದೆಗೆ ಊಟಕ್ಕೆ ಹಾಕಿ ಮೊರದ ಬಾಗಿನ ಕೊಡಬೇಕು. ಸೀರೆ, ಕುಪ್ಪಸ, ಕಾಲುಂಗುರ, ಗೌರಿ ವಿಗ್ರಹ, ಮಾಂಗಲ್ಯದ ಗುಂಡು ಇವುಗಳನ್ನು ಹಾಕಿ ಬಾಗಿನ ಕೊಡಬಹುದು. ದಿನವೂ ಒಬ್ಬರಿಗೆ ಹಣ್ಣು ವಗೈರೆ ತಾಂಬೂಲ

ಕೊಡಬೇಕು. ಮಾಘ ಶುದ್ಧ ಪೌರ್ಣಮಿಯವರೆಗೆ ಪ್ರತಿ ಮಾಸದಲ್ಲೂ ಒಬ್ಬರಿಗೆ ಮೊರದ ಬಾಗಿನ ಕೊಡುವುದು ಒಂದು ವ್ರತ, ಇದರೊಳಗೆ ಮೇಲೆ ಬರೆದಂತೆ ಏನು ಬೇಕಾದರೂ ಹಾಕಿಕೊಡಬಹುದು.

ಮಾಘ ಶುದ್ಧ ಪಂಚಮೀ ಶ್ರೀ ಪಂಚಮಿ. ಆ ದಿನ ಶ್ರೀ ಲಲಿತಾ ಸಹಸ್ತನಾಮ ಪಾರಾಯಣ ಮಾಡಿದರೆ ಅಮ್ಮನವರಿಗೆ ಪ್ರೀತಿ. ಇದೇ ರೀತಿ ಚೈತ್ರಮಾಸದಲ್ಲಿ ವಸಂತ ಪಂಚಮಿ ಮತ್ತು ನವರಾತ್ರಿಯಲ್ಲಿ ಲಲಿತಾ ಪಂಚಮಿ ಎಂಬ ಇನ್ನೂ ಎರಡು ಪಂಚಮಿಗಳಿವೆ. ಈ ಮೂರು ಪಂಚಮಿಗಳಲ್ಲಿ ಸಹಸ್ರನಾಮ ಮಾಡಬೇಕೆಂದು ಗುರುಗಳು ಹೇಳಿದ್ದಾರೆ. ಈ ದಿನಗಳು ಅಮ್ಮನವರ ಪೂಜೆಗೆ ಬಹಳ ಶ್ರೇಷ್ಠ.

ರಥ ಸಪ್ತಮಿಯ ದಿನ ಸೂರ್ಯನು ಉತ್ತರಾಯಣವನ್ನು ಪ್ರವೇಶಿಸುತ್ತಾನೆ. ಇದು ಸೂರ್ಯನ ಜನ್ಮ ದಿನ ಎಂಬ ನಂಬಿಕೆ ಇದೆ. ಈ ದಿನ ಏಳು ಎಕ್ಕದ ಎಲೆಗಳನ್ನು ತಲೆ, ಭುಜಗಳ ಮೇಲೆ ಇಟ್ಟುಕೊಂಡು ಸೂರ್ಯೋದಯ (ಬೆಳಗ್ಗೆ 5 ಗಂಟೆಗೆ) ಕಾಲಕ್ಕೆ ಸ್ನಾನ ಮಾಡಿದರೆ ಸರ್ವಪಾಪ ಪರಿಹಾರವಾಗಿ ಸೂರ್ಯ ತೇಜಸ್ಸು ಪ್ರಾಪ್ತ ಎಂದು ಹೇಳಿದ್ದಾರೆ. ಈ ದಿನ ಅನೇಕ ರಥೋತ್ಸವಗಳು ಜರುಗುತ್ತವೆ. ಎಕ್ಕದೆಲೆ ಇಟ್ಟುಕೊಂಡು ಮಂತ್ರ ಹೇಳಿ ಸ್ನಾನ ಮಾಡಬೇಕು.

ಎಕ್ಕದೆಲೆ ಸ್ನಾನ ಮಾಡುವಾಗಿನ ಮಂತ್ರ

ಸಪ್ತ ಸಪ್ತಮಹಾಸಪ್ತ ಸಪ್ತದ್ವೀಪ ವಸುಂಧರಾ
ಸಪ್ತಾರ್ಕಪರ್ಣಮಾದಾಯ ।
ಸಪ್ತಮ್ಯಾಂ ಸ್ನಾನಮಾಚರೇತ್ ॥

ಇದು ದೇಹದಾರ್ಢ್ಯಕ್ಕಾಗಿ ಸೂರ್ಯನನ್ನು ಪ್ರಾರ್ಥಿಸುವ ದಿನ ಎಂದು ಋಗ್ವೇದದಲ್ಲಿ ಹೇಳಿದೆ. ತಾಯಂದಿರು ಮಕ್ಕಳನ್ನು ಎಬ್ಬಿಸಿ ಈ ದಿನವಾದರೂ ಎಕ್ಕದೆಲೆಯಿಂದ ಸ್ನಾನ ಮಾಡಿಸಿ ಸಂಧ್ಯಾವಂದನೆ ಮಾಡಿಸಿದರೆ ಈ ಮೇಲೆ ಹೇಳಿದ ಓಜಸ್ಸು, ತೇಜಸ್ಸು, ಒಳ್ಳೆಯ ಮನಸ್ಸು ಪ್ರಾಪ್ತವಾಗುತ್ತದೆ, ವಿದ್ಯೆ ಹತ್ತುತ್ತದೆ. ರಥಸಪ್ತಮಿಯು ವೈವಸ್ವತ ಮನ್ವಂತರದ ಆರಂಭದ ದಿನ. ಸೂರ್ಯನು ಈ ದಿನದಿಂದ ಉತ್ತರ ದಿಕ್ಕಿಗೆ ಚಲಿಸಲಾರಂಭಿಸುತ್ತಾನೆಂದು ಪುರಾಣೋಕ್ತಿ.

ಈ ಮಾಸ ಪೂರ್ತಿ ಸೂರ್ಯೋದಯಕಾಲಕ್ಕೆ (ತಣ್ಣೀರು, ನದಿಗಳಲ್ಲಿ) ಸ್ನಾನ ಮಾಡುವುದು ಮುಖ್ಯ. ಮಾಘಸ್ನಾನವನ್ನು ಬಲವಂತವಾಗಿಯಾದರೂ ಮಾಡಿ ಎಂದು 'ಬಲವಂತ ಮಾಘಸ್ನಾನ' ಎಂದು ನಾಣ್ನುಡಿ ಇದೆ.

ಮಹಾಶಿವರಾತ್ರಿ

ಈ ಮಾಸದ ಇನ್ನೊಂದು ಮುಖ್ಯ ಹಬ್ಬ ಮಹಾಶಿವರಾತ್ರಿ. ಮಾಘ ಕೃಷ್ಣ ಚತುರ್ದಶಿಯಂದು ಇಡೀ ದಿವಸ ಉಪವಾಸವಿದ್ದು ಸಾಯಂಕಾಲದಿಂದ 4 ಜಾವದ ಪೂಜೆಯನ್ನು ಮಾಡುತ್ತ ಜಾಗರಣೆ ಮಾಡಬೇಕು. ಮನೆಗಳಲ್ಲಿ ಒಂದು ಜಾವದ ಪೂಜೆಯ ನಂತರ ಫಲಾಹಾರ ಮಾಡುತ್ತಾರೆ. ಅನಂತರ ನಾಲ್ಕು ಜಾಮದ ಪೂಜೆ ಮಾಡುತ್ತಾರೆ, ರುದ್ರ ಹೋಮವನ್ನು ಮಾಡಿ ಪಾರಣೆ ಮಾಡುತ್ತಾರೆ. ಸ್ಕಾಂದಪುರಾಣ, ಪದ್ಮಪುರಾಣ, ಗರುಡ ಪುರಾಣಗಳಲ್ಲಿ ಈ ಕುರಿತು ಹಲವಾರು ಕಥೆಗಳಿವೆ. ಇದು ಶಿವನ ಜನ್ಮದಿನ, ಹಾಲಾಹಲ ಕುಡಿದ ದಿನ, ಶಿವ ಪಾರ್ವತಿಯರ

ವಿವಾಹ ದಿನವೆಂದು ಈ ಕಥೆಗಳು ಹೇಳುತ್ತವೆ. ಶಿವನ ಅಪಾರ ಮಹಿಮೆಯು ಅನೇಕಾನೇಕ ಪುರಾಣಗಳಲ್ಲಿ ಉಲ್ಲೇಖವಾಗಿವೆ. 'ಓಂ ನಮಃ ಶಿವಾಯಚ ಶಿವತರಾಯಚ' ಎಂಬುದು ಮಾತಿನ ಮಂತ್ರವಾಗದೆ ಮನಸ್ಸಿನ ಮಂತ್ರವಾಗಬೇಕು.

ದಿನವಿಡೀ ನಿರಶನ ಮತ್ತು ರಾತ್ರಿ ಜಾಗರಣೆ ಈ ವ್ರತದಲ್ಲಿ ಆಚರಿಸುವ ಮುಖ್ಯ ವಿಧಿ. ಮಹಾಶಿವರಾತ್ರಿಯನ್ನು ಸರ್ವರೂ ಆಚರಿಸಬಹುದಾಗಿದೆ. ಜಾಗರಣೆಯ ಸಂದರ್ಭದಲ್ಲಿ ಮೂಲಮಂತ್ರವಾದ 'ಓಂ ನಮಃ ಶಿವಾಯ' ಎಂಬ ಮಂತ್ರವನ್ನು 12, 24 ವರ್ಷ ಜಪಿಸಿ ಉದ್ಯಾಪನೆ ಮಾಡುವವರಿದ್ದಾರೆ. ದೇಗುಲಗಳಲ್ಲಿ ಅಭಿಷೇಕ, ಅರ್ಚನೆ, ಭಜನೆ, ಸಂಕೀರ್ತನೆ, ಸಾಮೂಹಿಕ ಜಾಗರಣೆ ಮುಂತಾದವುಗಳು ವೈಭವದಿಂದ ನಡೆಯುತ್ತವೆ. ಶಿವ ಎಂದರೆ ಸಕಲ ದುರಿತಗಳನ್ನು ದೂರಮಾಡಿ ತನ್ನ ಭಕ್ತರ ಕೈಹಿಡಿದು ನಡೆಸುವ ದಿವ್ಯ ಶಕ್ತಿಯುಳ್ಳ ಮಹಾದೇವ. ಶಿವ ಮಂಗಳವನ್ನು ಉಂಟು ಮಾಡುತ್ತಾನೆ ಎಂದರ್ಥ.

ಫಾಲ್ಗುಣ ಮಾಸ

ಈ ಶುಕ್ಲಪೌರ್ಣಮಿಯಂದು ಕಾಮನ ಹುಣ್ಣಿಮೆಯೆಂದು ಆಚರಿಸುತ್ತಾರೆ. ಚಿಕ್ಕಮಕ್ಕಳಿದ್ದರೆ ಅವರಿಗೆ ನೀರು ಹಾಕಿ ಸಕ್ಕರೆ ಕಾಳಿನ ಸರ ಹಾಕಿ ಒಬ್ಬಟ್ಟು ಮಾಡುತ್ತಾರೆ. ದೇವರಿಗೆ ಪೂಜೆ ಮಾಡುತ್ತಾರೆ. ಇದನ್ನು ಹೋಳಿಹಬ್ಬವೆಂದು ಆಚರಿಸುತ್ತಾರೆ. ಕಾಮನನ್ನು ಸುಡುತ್ತಾರೆ. ಏಕೆಂದರೆ ಶಿವನು ಆ ದಿನ ತನ್ನ ಮೂರನೆಯ ಕಣ್ಣಿನಿಂದ ಕಾಮನನ್ನು ಸುಟ್ಟದಿನ, ಕೃಷ್ಣನು ಪೂತನಿಯನ್ನು ಕೊಂದ ದಿನ ಮುಂತಾದ ಉಲ್ಲೇಖಗಳಿವೆ.

ಸೂಚನೆ

ಪ್ರತಿಹಬ್ಬದಲ್ಲಿ ತಲೆಗೆ ಸ್ನಾನವನ್ನು ಮಾಡಬೇಕು. ಮುಖ್ಯವಾಗಿ ನಾಗರಪಂಚಮಿ, ಕೃಷ್ಣಾಷ್ಟಮಿ ಮತ್ತು ಶಿವರಾತ್ರಿ ಹಬ್ಬಗಳಲ್ಲಿ ಅನಾರೋಗ್ಯವಂತರಿಗೆ ವಿನಾಯಿತಿ ಇರುತ್ತದೆ. ಹಬ್ಬ ಹರಿದಿನಗಳಲ್ಲಿ ಹಿರಿಯರ ಸೂಚನೆ ಮೇರೆಗೆ ತಯಾರಿಸಲ್ಪಡುತ್ತಿದ್ದ ಭಕ್ಷ್ಯ ಭೋಜ್ಯಗಳು ಆಯಾಯ ಋತುವಿಗೆ ತಕ್ಕಂತೆ ಇದ್ದು ದೇಹಪೋಷಣೆಗೆ ಆರೋಗ್ಯದ ದೃಷ್ಟಿಯಿಂದ ಅತ್ಯವಶ್ಯಕವಾಗಿರುತ್ತಿತ್ತು.

ಈ ಹಾಡುಗಳನ್ನು ದಿನನಿತ್ಯ ಹೇಳಿಕೊಂಡರೆ ಮನಸ್ಸಿಗೆ ನೆಮ್ಮದಿ ಶಾಂತಿ ಸಿಕ್ಕುತ್ತದೆ.

ಗಣಪತಿ

ರಾಗ : ಹಂಸಧ್ವನಿ

ತಾಳ : ಆದಿತಾಳ

ಶರಣೆಂಬೆ ತನುಮನದಿ ಗಣರಾಯ
ಕರುಣಿಸನೆಗೆ ನೀ ನರಮೃಗಕಾಯ ॥ ಶರಣೆಂಬೆ ॥
ಸುರಾಸುರರಿಂ ಪೂಜೆಗೊಳ್ಳುವ ಚರಣವನು
ಮೊರೆಯ ಹೊಕ್ಕೆನು ಕೇಳಿ ಕೀರ್ತಿಯನು
ಕೊಂಡಾಡುತಿಹೆ ಪದ ಪದ್ಯದಿ ಚರಿತೆಯ
ಶುಂಡಾಲ ಶುಭಮುಖ ನೀ ಕೊಡು ಮತಿಯಾ ॥ ಶರಣೆಂಬೆ ॥

ಎಂದೆಂದಿಗೂ ಅಪರಾಧಿಯು ನಾನು
ಕುಂದನಾರಿಸದೆ ಮಾತನು ಕೇಳು
ಅಗಜೆ ನಂದನ ಗುರು ಮಹಿಪತಿ ಸ್ವಾಮಿ
ಭಕುತ ರಕ್ಷಕ ಮುನಿಜನ ಪ್ರೇಮಿ ॥ ಶರಣೆಂಬೆ ॥

ಸರಸ್ವತಿ

ರಾಗ : ಆರಭಿ
ತಾಳ : ಆದಿತಾಳ

ನಲಿದಾಡೆ ಎನ್ನ ನಾಲಿಗೆಯ ಮೇಲೆ
ಸರಸ್ವತಿ ದೇವಿ ।
ನಲಿದಾಡೆ ಎನ್ನ ನಾಲಿಗೆ ಮೇಲೆ
ಕುಣಿದಾಡೆ ಎನ್ನ ನಾಲಿಗೆ ಮೇಲೆ ॥ ಪ ॥
ಸರಿಸಿಜೋದ್ಭವನ ವದನ ನಿಲಯಳೆ
ಇಳೆಯೊಳಪ್ರತಿಮ ಗುಣಾಂಬುಧಿತಾಯೆ ॥ 1 ॥
ಘಲ್ಲು ಘಲ್ಲು ಘಲ್ಲು ಗೆಜ್ಜೆಯನಾದ
ಭಳಿರೆ ಭಳಿರೆ ನಿಮ್ಮ ಹೊಳೆವ ಬೆರಳುಂಗುರ
ಎಳೆಯ ಮಾವಿನ ತಳಿರ ಪೋಲುವ ದಿವ್ಯಪಾದ
ಥಳ ಥಳಿಸುವ ತೊಡೆ ಪೊಳೆವ ಸುಗುಣಿಯೆ ॥ 2 ॥
ಭೃಂಗಾದ ಸ್ವರ ಹಿಂಗದೆ ಭಕ್ತರ
ಸಲುಹುವ ಭಾರ ಕಂಗಳ ಮನೋಹರ
ರಂಗ ಪುರಂದರ ವಿಠಲರಾಯನ
ಮಂಗಳ ಮೂರ್ತಿಯ ತೋರೆ ಶುಭಾಂಗಿ ॥ 3 ॥

ಗುರುಗೀತೆ

ರಾಗ : ಹಿಂದೋಳ

ಭಜರೇ ಗುರುನಾಥಂ ಮಾನಸ ॥ ಪ ॥
ಭಸ್ಮ ರುದ್ರಾಕ್ಷಾದಿ ಅಲಂಕೃತ ದೇಹಂ
ಬಿಲ್ವ ಮಾಲಾದಿ ಅಲಂಕೃತ ಶಿರಸ್ಥಂ ॥ 1 ॥
ಮಂತ್ರ ಮಹಾಮಣಿ ಮಂತ್ರ ಸ್ವರೂಪಂ
ಪ್ರಣವ ಪಯೋಧರ ಪ್ರಣವ ಸ್ವರೂಪಂ ॥ 2 ॥
ಮಂದಹಾಸ ಮುಖಂ ಮಂದಾಕ್ಷ ವೀಕ್ಷಣಂ
ರಾಜಾಧಿರಾಜಂ ಜಗದ್ಗುರು ರೂಪಂ ॥ 3 ॥

ಶನೀಶ್ವರ (ಸಂಪ್ರದಾಯ ರಾಗ)

ದೀನದಯಾಪರ ಶನಿದೇವ ದೇವ
ಧ್ಯಾನಿಪೆ ನಿಮ್ಮನು ಮಹದೇವ ॥ ಪ ॥
ಎಂಟುಹಿಡಿದ ದಶಕಂಠನ ಶಿರವನು
ಮಂಟಿಸಿ ಭೂವಿಗೆ ಭಂಟನ ಸಲಹಿದೆ ॥ 1 ॥
ಪುರವನು ತೊರೆಸಿದೆ ಕರಗಳ ಕಡಿಸಿದೆ
ಪರಿ ಪರಿ ಹಿಂಸೆಯ ಪರಿಹರಿಸೈ ದೇವ ॥ 2 ॥
ಶನಿಮಹರಾಯನೇ ಬೇಡುವೆ ನಿಮ್ಮನು
ಪಿರ ಚರಣಂಗಳ ಕೊಟ್ಟು ಕಾಪಾಡೈ ದೇವ ॥ 3 ॥
ಹರಿಯನು ಹೆದರಿಸಿ ಹರನನು ಬೆದರಿಸಿ
ಗುರುಗಳ ಶೂಲಕೆ ಏರಿಸಿದೆ ದೇವ ॥ 4 ॥
ಖಗಪತಿವಾಹನ ರಘುಕುಲ ವಿಠಲನೆ
ಬಗೆ ಬಗೆಯಿಂದಲಿ ಭಜಿಸುವೆ ನಿಮ್ಮನ್ನು ॥ 5 ॥
(ನವಗ್ರಹಗಳಲ್ಲಿ ಶನಿಗುರು ಎರಡು ಚೆನ್ನಾಗಿದ್ದರೆ ಏನೂ ತೊಂದರೆ ಇಲ್ಲವೆನ್ನುತ್ತಾರೆ)

ಮಹಿಳೆಯರು ಮಾಡುವ ಪೂಜಾ ವಿಧಾನ

ವೇದಮಂತ್ರದ ಪೂಜಾಕ್ರಮ ಮಹಿಳೆಯರಿಗೆ ಇಲ್ಲದಿರುವುದು ಅಂದರೆ ಗಂಟೆ ಬಾರಿಸುವುದು ಮಂತ್ರ ಹೇಳುವುದು ಇವುಗಳ ಪದ್ಧತಿ ಇಲ್ಲದಿರುವುದರಿಂದ ಗುಬ್ಬಿ ಚಿದಂಬರಾಶ್ರಮದ ಗುರುಗಳು ಕಲ್ಪೋಕ್ತವಾಗಿ ಬರೆದಿರುವ ಕ್ರಮದಿಂದ ದೇವಿಯನ್ನು ಪೂಜಿಸುವ ಮಂತ್ರವನ್ನು ಇಲ್ಲಿ ಬರೆದಿದೆ. (ಲಲಿತ ಹಾಡು)

ಮಂಗಳ ಶ್ಲೋಕ

ಶ್ರೀ ಗುರುವಿನಡಿಗೆರಿಗೆ ಗಣಪತಿಗೆ ತಲೆಬಾಗಿ
ಶಾರದೆಗೆ ಸೆರಗೊಡ್ಡಿ ಬೇಡುತೀಗ
ಸಾಗರಾವೃತ ಭೂಮಿಗಾಧಾರ ಶಕ್ತಿ ಸಂ
ಪನ್ನೆ ದೇವಿಯ ಪೂಜೆಮಾಳ್ಪೆನೀಗ ॥1॥

ಧ್ಯಾನ

ಶ್ರೀ ಲಲಿತೆ ಶುಭಗಾತ್ರೆ ಸರಿಸಿಜೋದ್ಭವ ನೇತ್ರೆ
ಕೋಟಿ ಸೂರ್ಯಪ್ರಭೆಯ ದೇವಿ ನೀನು
ಲಾಲಿಸುತ ಪೊರೆಯಮ್ಮ ಲೋಕಮೂರರ ಮಾತೆ
ಎಂದು ಧ್ಯಾನಿಸುತಿರುವೆ ಈಗ ನಾನು ॥2॥

ಆವಾಹನೆ (ರಾಗ ಕಾಂಬೋಜಿ)

ವಿಶ್ವ ವಂದಿತೆ ದೇವಿ ಸಕಲಕಾಧಾರೆ ನೀ
ನೆಂದು ನಮಿಸುವೆ ನಿನ್ನ ಚರಣಯುಗವ
ವಿಶ್ವತೋಮುಖರೂಪೆಗಾವಾಹನೆಯ ಮಾಳ್ಪ
ಧೈರ್ಯವಂ ಕ್ಷಮಿಸೆಂದು ಬೇಡುತಿರುವೇ ॥3॥

ಆಸನ

ನಿನ್ನ ಸೂತ್ರದೊಳಿಹುದು ಲೋಕನಾಟಕವೆಲ್ಲ
ನೀನಿರುವೆ ವಿಶ್ವಕಾಧಾರವಾಗಿ
ಸನ್ನುತಾಂಗಿಯೆ ನಿನಗೆ ಆಸನವನೆಂತಿಡಲಿ
ಪೇಳಿ ಪಾಲಿಪುದೆನ್ನ ಲೋಕಮಾತೆ ॥4॥

ಪಾದ್ಯ (ರಾಗ ಮೋಹನ)

ಪಂಕಜೋದ್ಭವೆ ದೇವಿ ವಾಗ್ದೇವಿ ಗಿರಿಜಾತೆ
ಪಾಕಶಾಸನ ವಂದ್ಯೆ ಪಾದ ಪದ್ಮೇ
ಬಿಂಕವೆಲ್ಲವ ಬಿಟ್ಟು ಪಾದ್ಯವನ್ನರ್ಪಿಸುವೆ
ಸರ್ವಮಂಗಳೆ ನಿನ್ನ ಚರಣಕೀಗ ॥5॥

ಅರ್ಘ್ಯ

ಅಭಯ ಹಸ್ತವ ನೀಡು ಕಮಲಾಕ್ಷಿ ದೇವಿ ನೀ
ನುರುತರದ ಪ್ರೇಮದಿಂ ಪೊರೆಯುತೆನ್ನಾ
ಸಭಯ ಭಕ್ತಿಯೊಳೀಗ ಅರ್ಪಿಸುವ ಅರ್ಘ್ಯವಂ
ಸ್ವೀಕರಿಸಿ ಪೊರೆಯಮ್ಮ ಲೋಕಮಾತೇ ॥6॥

ಆಚಮನ (ರಾಗ – ನಾದನಾಮ ಕ್ರಿಯೆ)

ವಿಮಲ ಗಂಗಾದೇವಿ ಪಾಪ ನಾಶಕೆ ತೇಜೆ
ಸರ್ವ ಪಾವನ ರೂಪೆ ಪುಣ್ಯಜನನೀ
ಕಮಲಾಕ್ಷಿ ದೇವಿ ನಾನಾಚಮನವರ್ಪಿಸುವೆ
ಪಾಪ ಪುಣ್ಯವ ಮರೆಸಿ ಪೊರೆಯೆ ತಾಯೇ ॥7॥

ಸ್ನಾನ

ಪಂಚತತ್ವದ ದೇಹವಿಂದು ನಿನಗರ್ಪಿಸುವೆ
ವಂಚನಿಲ್ಲದೆ ನಿನ್ನ ಪಾದದೆಡೆಗೆ
ಸಂಚಿತ ಪ್ರಾರಬ್ಧವೆಂಬ ಪಂಚಾಮೃತವ
ಅಂತರಂಗದ ಶುದ್ಧ ಭಾವದಿಂದ ॥8॥

[illegible]
[illegible]
[illegible]
[illegible] [illegible]

[illegible] ([illegible])

[illegible]
[illegible]
[illegible]
[illegible] [illegible]

[illegible]
[illegible]
[illegible]
[illegible] [illegible]

[illegible] ([illegible])

[illegible]
[illegible]
[illegible]
[illegible] [illegible]
[illegible]
[illegible]
[illegible]
[illegible] [illegible]

[illegible]

[illegible]
[illegible]
[illegible]
[illegible] [illegible]

ಅಕ್ಷತೆ

ಅಕ್ಷತೆಯನರ್ಪಿಸುವೆ ಅಂಬುಜಾಕ್ಷಿಯೆ
ಕಂಜನಾಭನ ರಮಣಿ । ಪೂರ್ಣಪ್ರಜ್ಞೆ
ಅಕ್ಷಯದ ಸುಖವಿತ್ತು । ಸುಕ್ಷೇಮದಿಂದೆಮ್ಮ
ರಕ್ಷಣೆಯ ಮಾಡಮ್ಮ ದೇವಿ ಸುಭಗೇ ॥15॥

ಪುಷ್ಪ

ಪುಷ್ಪದೊಳಗಡಗಿರ್ಪ ಪರಿಮಳದ ಸೌಗಂಧ
ಶಕ್ತಿರೂಪಳೆ ನಿನಗೆ ವಂದಿಸುತಲೀ
ಬಾಷ್ಪ ಲೋಚನಳಾಗಿ ಪ್ರೇಮಪೂರಿತ ಹೃದಯೆ
ಪುಷ್ಪವನ್ನರ್ಪಿಸುವೆ ದೇವಿ ನಿನಗೇ ॥16॥

ಧೂಪ

ಸತ್ಕರ್ಮ ಸದ್ಧರ್ಮ ಸೌಗಂಧಯುಕ್ತದಾ
ಶ್ರದ್ಧೆ ಭಕ್ತಿಯೊಳಿಟ್ಟ ಮನಸಿನಿಂದಾ
ಸತ್ಕರಿಸಿ ಕೊಡುತಿರುವೆ ಪಾಪ ಪುಣ್ಯವ ನಿನಗೇ
ಧೂಪರೂಪದೊಳಿಂದು ಪೊರೆಯೆ ತಾಯೆ ॥17॥

ದೀಪ

ಕೋಟಿ ಸೂರ್ಯಪ್ರಭೆಯ ಚಿಚ್ಛಕ್ತಿ ರೂಪಿನೀ
ಪರಬೊಮ್ಮನಾಧಾರವಲ್ತೆ ದೇವೀ
ಸಾಟಿ ಇಲ್ಲವು ನಿನಗೆ ನಾನಿಡುವ ದೀಪ
ಮಂಕು ಬೆಳಕಿದ ನೋಡಿ ನಗುವೆ ತಾಯೆ ॥18॥

ನೈವೇದ್ಯ

ಅನ್ನಪೂರ್ಣಾದೇವಿ ವಾತ್ಸಲ್ಯ ಪರಿಪೂರ್ಣೆ
ಜೀವಮಾತ್ರರಿಗನ್ನವಿಡುವ ತಾಯೇ
ಅನ್ನವನು ಮುಂದಿಟ್ಟು ಮುಗುಳೆ ಕೊಂಡೊಯ್ಯುತಿಹ
ನೈವೇದ್ಯ ನಗೆಗೇಡಿದಲ್ತೆ ಪೇಳಾ ॥19॥

ತಾಂಬೂಲ (ರಾಗ – ಬಿಲಹರಿ)

ಸೌಂದರ್ಯ ಗುಣರೂಪೆ ಸತ್ಕಾಮ ಪರಿಪೋಷೆ
ಸೌಂದರ್ಯದಧಿದೇವಿ ಮದನ ಮಾತೆ
ಸೌಂದರ್ಯ ಸೌಭಾಗ್ಯ ವೃದ್ಧಿಮಾಳ್ಪೊ ಪಚ್ಚ
ಕರ್ಪೂರ ವೀಳ್ಯವನರ್ಪಿಸುವೆನೂ ॥20॥

ಕರ್ಪೂರ ಆರತಿ (ನೀರಾಜನ)

ಪಂಚವಿಷಯಗಳಿಂದ ಕೂಡಿದಿಂದ್ರಿಯಚಯವ
ನುರಿಸುತ್ತಲಿಂದು ಜ್ಞಾನಾಗ್ನಿಯೊಳಗೇ
ಪಂಚಾರತಿಯ ಮಾಡಿ ಬೇಡಿಕೊಂಬುವೆ ದೇವಿ
ಭವ ತಾಪ ಪರಿಹಾರೆ ಭಕ್ತವರದೇ ||21||

ಪುಷ್ಪಾಂಜಲಿ (ರಾಗ – ಹಂಸಾನಂದಿ)

ಜನ್ಮಜನ್ಮಾಂತರದಿ ನಾಗೈದ ಪಾಪ
ಸಂಚಯವೆಲ್ಲ ನಿನ್ನಡಿಯೊಳಿಡುತಲೀಗ
ಜನ್ಮ ಮರಣದ ನಾಶಗೈವ ನಿನ್ನಡಿಯಲ್ಲಿ
ಅರ್ಪಿಸುವೆ ಪುಷ್ಪದಂಜಲಿಯ ನಾನು ||22||

ಪ್ರದಕ್ಷಿಣೆ

ಎಲ್ಲ ಕಡೆಯಲಿ ನೀನು ಎಡಬಲದಲಿ ನೀನು
ನಿನ್ನ ಸುತ್ತಲು ತಿರುಗುತಲೆಂತುಟಹುದು
ಎಲ್ಲ ರೂಪದ ನಿನ್ನ ಸುತ್ತಲರಿಯದೆ ನಾನು
ನಿನ್ನ ಸುತ್ತಲೂ ತಿರುಗುತಿಹೆನು ತಾಯೆ ||23||

ನಮಸ್ಕಾರ (ರಾಗ – ಬಿಲಹರಿ)

ಜ್ಞಾನರೂಪಳೆ ಜಯತು ಜಯತು ಜ್ಞಾನದ ಬೋಧೆ
ಭಕ್ತವತ್ಸಲೆ ದೇವಿ ಜಯತು ಜಯತು
ಜ್ಞಾನ ಕರ್ಮವು ಭಕ್ತಿ ಎಂಬ ದಾರಿಗಳೊಳಗೇ
ನೈಜ ಜ್ಞಾನವನೀವ ತಾಯೆ ಜಯತು ||24||
ನಾನು ಏನನು ಅರಿಯೆ ನೀನು ಎಲ್ಲವನರಿವೆ
ನಾನು ನನ್ನದು ಎಂಬ ಭಾವ ಮರೆಸೀ
ನೀನೀಗಲೆನ್ನ ನಿನ್ನಡಿಯಲ್ಲಿ ಹಾಕಿಕೊಂಡು
ಅಭಿಮಾನ ಬಿಡುವಂತೆ ಮಾಡೆ ತಾಯೆ ||25||

ಜಯತು ಕರುಣಾಸಾಂದ್ರೆ ಜಯತು ಮಂಗಳರೂಪೆ
ಜಯತು ಜಯ ಮಹದಾದಿ ಮಾಯೆ ಜಯತು
ಜಯತು ದೇವರ ದೇವಿ ಶ್ರೀ ಚಿದಂಬರ ರೂಪೆ
ನೀಡು ನೀನೆನಗೀಗ ಸಕಲ ಸುಖವಾ ||26||

ಅಪರಾಧ (ರಾಗ ಕಾನಡ)

ತಪ್ಪುನೆಪ್ಪುಗಳೆಲ್ಲ ಕಾಪಾಡು ತಾಯೆ ನೀ
ಕ್ಷಮೆಸುತಪರಾಧ ಸಂಚಯವನೂ
ತಪ್ಪು ಮಾಡದ ಬುದ್ಧಿ ಪಾಲಿಸುತ್ತಲಿ ಎನ್ನ
ಪೊರೆ ಪರಮ ಕರುಣದಾ ಮಾತೆದಾತೆ ॥27॥

ಕಪ್ಪಿಟ್ಟದ್ದು (ರಾಗ – ಹಿಂದೂಸ್ತಾನಿ ಕಾಪಿ)

ಕಪ್ಪು ದುಃಖವು ಸುಖವಿದೆಂಬ ಭಾವವು ಕಪ್ಪು
ಜನ್ಮ ಜನ್ಮಾಂತರದ ಪಾಪ ಕಪ್ಪು
ಕಪ್ಪು ಬಾಲ್ಯದ ಭ್ರಾಂತಿ ಯೌವನದ ಸುಖದಿಚ್ಛೆ
ಯಿಂದ ಕೂಡಿದ ಮನವು ಅದುವೆ ಕಪ್ಪು ॥28॥

ಇಂತುತೋರುತಲೆನ್ನ ಮನವಮೋಹಿಪ ಕಪ್ಪಿ
ನೊಳಗೆ ಬೆರೆಸುತಲೀಗ ಜ್ಞಾನರಸವ
ಸಂತಸದಿ ಕಾಡಿಗೆಯ ಮಾಡಿ ನಾನರ್ಪಿಸುವೆ
ಕಂಜಲೋಚನೆ ನಿನ್ನ ನೇತ್ರಯುಗಕೇ ॥29॥

ಪ್ರಸಾದ ಕೇಳುವುದು (ರಾಗ – ಸುರಟಿ)

ಪ್ರೇಮಪುಷ್ಪವ ನೀಡು ಜಗದಂಬೆ ಎನಗೀಗ
ಅಕ್ಷಯದ ಸೌಖ್ಯವನು ಬೇಡುತಿರುವೆ
ನೇಮದೊಳು ನಿನ್ನಲ್ಲಿ ಖಂಡವಿಲ್ಲದ ಭಕ್ತಿ
ವೈರಾಗ್ಯ ವಿಷಯದೊಳು ಪುಟ್ಟಿಸಮ್ಮ ॥30॥

ಆರೋಗ್ಯ ಐಶ್ವರ್ಯ ಅಧಿಕಾರ ಸಂಪತ್ತು
ಪಾಪಪುಣ್ಯ ವಿಚಾರ ಬುದ್ಧಿಯೊಡನೆ
ನಾರಾಯಣಾಂಘ್ರಿ ಪದ್ಮದೊಳಿಟ್ಟು ಮನವನು
ನೀನಿಂದು ಕರುಣಿಸು ಎನ್ನ ಪತಿಯ ಪೊರೆಯೆ ॥31॥

ಪತಿಯ ಪುತ್ರರನ್ನೆಲ್ಲ ನಿನ್ನ ರೂಪದಿ ಕಂಡು
ನಾನು ನನ್ನದಿದೆಂಬ ಭಾವ ಮರೆತು
ನುತಿಸಿ ನಿನ್ನಡಿಗಳನು ಪೂಜಿಸುವ ಪರಮಾರ್ಥ
ಬೋಧೆಯನು ಪಡೆವಂತೆ ಹರಸು ತಾಯೆ ॥32॥

ಈಗಿರುವ ಜನ್ಮದೊಳು ಅನುಭವಿಪ ಸುಖ ದುಃಖ
ಭಾವದೊಳಗಡಗಿರ್ಪ ಚಂಚಲತೆಯಾ

ನೀಗಿ ನಿನ್ನಡಿಯೊಳೆನ್ನನರ್ಪಿಪ ಪರಮಾ
ಶಾಂತಿ ಮೋಕ್ಷದ ಪದವ ನೀಡು ತಾಯೆ ॥33॥

ಆರತಿ (ರಾಗ – ಮಧ್ಯಮಾವತಿ ಖಂಡಛಾಪುತಾಳ)

ಜಯ ಸಚ್ಚಿತ್ಸುಖರೂಪೇ ಪರಬ್ರಹ್ಮನರಸೀ ॥ಪಲ್ಲವಿ॥
ಜಯ ಜಗನ್ಮಯದೇವಿ ಜಗದಾದಿಮಾಯೆ ॥ಅನುಪಲ್ಲವಿ॥

ನಿನ್ನ ಲೀಲೆಯೊಳಡಗಿಹುದಿ ಬ್ರಹ್ಮಾಂಡ
ನಿನ್ನ ಚೈತನ್ಯದೊಳಂಶ ಈ ಪಿಂಡ
ನಿನ್ನ ಹೊರತು ಮತ್ತೆ ಇನ್ನೇನು ಅರಿಯೆ
ಸನ್ನುತಾಂಗಿಯೆ ಕೃಪೆಯ ಮಾಡೆನ್ನ ಪೊರೆಯೆ ॥ 34 ॥

ಜಯತು ದೇವರ ದೇವಿ ಜಯತು ಮಂಗಳರೂಪೆ
ಜಯತು ಸರ್ವಾಧಾರೆ ಲಲಿತಾಂಬೆ ಜಯತು
ಜಯತು ಮೋಹನಮೂರ್ತಿ ಜಯತು ಕರುಣಾಸಾಂದ್ರ
ಜಯತು ಶ್ರೀ ಚಿದಂಬರ ಸದ್ಗುರು ರೂಪೇ ॥ 35 ॥

ಸಂಪ್ರದಾಯದ ಹಾಡುಗಳು

ಸೂರ್ಯನಮಸ್ಕಾರ

ಆದಿತ್ಯವಾರದ ಉದಯದೊಳ್ ಎದ್ದು ಪಂಚವೇದ ಪಾಲಕರೆಲ್ಲ ಕೂಡಿ ಪಾಲಿಸಯ್ಯ ಎನ್ನ ಆದಿನಾರಾಯಣ ಈರೇಳು ಜಗಕೆ ಗೋವಿಂದ ಮುಖಮಾರ್ಜನೆ ಮಾಡಿ ಮಕರ ಕುಂಡಲವಿಟ್ಟು ನಮಿಸಿಕೊಂಡರು ಮನದ ಭಕ್ತಿಯಲಿ.

ಉತ್ತಮವಾದ ಸಪ್ತಮಿಯ ದಿವಸದಲಿ ಉತ್ಸಾಹದ ಆದಿ ಮೂರುತಿಯ ನಿಷ್ಠೆಯಿಂದಲಿ ಸ್ನಾನ ಜಪಮಾಡಿದವರಿಗೆ ಪುತ್ರರನೀವ ಸೂರ್ಯನು. ಪರಿಯಿಲ್ಲದವಳ ಪಾಲಿಸಿದಂತೆ ಕುಂತಿಯ ಸುತರ ಪಾಲಿಸಿದ ಸೂರ್ಯನು. ಸೂತರ ಪಾಲಿಸಿದ ಹಾಗೆ ಮಕರ ಕುಂಡಲವಿಟ್ಟು ನಮಿಸಿಕೊಂಡರು ಮನದ ಭಕ್ತಿಯಲಿ, ತೇರೆಂಬ ರಥಕ್ಕೆ ಗಾಲಿ ಸುವರ್ಣದ ಸಾರಥಿ ಅರುಣ, ಒಪ್ಪಿದರು ತಾಳ ಮದ್ದಳೆ ಬೇರೆ ನಾದಗಳಿಂದ ಸೂರ್ಯಮಂಡಲ ಉದಯವಾಯಿತು. ಉದಯೇ ಬ್ರಹ್ಮ ಸ್ವರೂಪಂಚ ಮಧ್ಯಾಹ್ನೇತು ಮಹೇಶ್ವರಂ. ಅಸ್ತಮಾನೇ ಸ್ವಯಂ ವಿಷ್ಣು ಭಾಸ್ಕರಾಯ ನಮೋನಮಃ ॥ ದಿವಾಕರಾಯ ನಮೋ ನಮಃ ॥

ಅಶ್ವತ್ಥ ಸ್ತೋತ್ರ

ನಾರದರು ಧರ್ಮಜರು ಈರ್ವರೊಂದಾಗಿ ಬಂದರು ಮಂದಾಕಿನಿ ಎಂಬ ನದಿಯ ತೀರಕ್ಕಾಗಿ. ತೀರದ ತಡದಲ್ಲಿ ಏನಯ್ಯ ಮಹರ್ಷಿ ಈ ವೃಕ್ಷದ ನಾಮಧೇಯವನು ಹೇಳು, ಈ ವೃಕ್ಷದ ಫಲಾಫಲಗಳನು ಹೇಳು, ನೋಡಿದರೆ ಶುಭವಾಗಿ ಸಂಪತ್ಕರವಾಗಿದೆ. ಶೋಭಾಯಮಾನವಾಗಿರುವುದೀ ವೃಕ್ಷ ಅಶುವು ತ್ರಿಶುವು ಅಡಗಿಹವು. ನೋಡಿ ಅಮೃತಪಾನ

[illegible]

ಮೂಲತೋ ಬ್ರಹ್ಮರೂಪಾಯ ಮಧ್ಯತೋ ವಿಷ್ಣುರೂಪಿಣೇ

ಅಗ್ರತಃ ಶಿವರೂಪಾಯ ವೃಕ್ಷರಾಜಾಯ ತೇ ನಮಃ

ಅಶ್ವತ್ಥನಾರಾಯಣ ಸ್ತೋತ್ರಂ ಸಂಪೂರ್ಣಂ

ಗೋಪಾಲಕೃಷ್ಣನನ್ನು ಕಣ್ಣಾರೆ ಕಂಡೆನು

ಅಂಬಳೆ ಗೋಪಾಲ ಕೃಷ್ಣನಿಗೆ ನಮನ
ಕಂಡೆ ಕಂಡೆ ಸ್ವಾಮಿಯನ ಬೇಡಿಕೊಂಡೆ
ಕಂಡೆ ಅಂಬಳೆ ವೇಣುಗೋಪಾಲಕೃಷ್ಣನ
ಕಾಮಿತಾರ್ಥವನೀವ ದೇವನ
ಕರುಣಾನಿಧಿ ಎಂದು ಎನಿಸಿ ಮೆರೆವನ
ಕಂಡೆ ಕಂಡೆ ಸ್ವಾಮಿಯನು ಬೇಡಿಕೊಂಡೆ ॥1॥

ಉರದಿ ಸಿರಿದೇವಿ ಇರಲು ಕಂಡೆನೋ
ಉನ್ನತದ ಕೌಸ್ತುಭವ ಕಂಡೆನು
ಎಡ ಬಲದಲಿ ರುಕ್ಮಿಣಿ ಭಾಮೆಯರ ಕಂಡೆನು
ಸುರರು ಕಿನ್ನರರು ನಾರದಾದಿ ಗಂಧರ್ವರು
ಪಾಡಿಪೊಗಳುವುದನು ಕಂಡೆನು ॥2॥

ಎಡದಿ ಸಪ್ತ ಮಾತೃಕೆಯರನು ಕಂಡೆನು
ಮಧ್ಯದಲ್ಲಿ ಶ್ರೀವೇಣುಗೋಪಾಲನ ಕಂಡೆನು
ಬಲದಲಿ ಗಂಗಾ ವಿಶ್ವೇಶ್ವರನ ಕಂಡೆನು
ಬರುತಲಿ ಶ್ರೀ ಮಾರುತಿಯ ಕಂಡೆನು ॥ 3 ॥

ಬುಡದಲಿ ಮುತ್ತು ಮಾಣಿಕ್ಯದ ಪಲ್ಲಕ್ಕಿಯ ಕಂಡೆನು
ಶ್ರೀಗರುಡವಾಹನನಾದ ಶ್ರೀವೇಣುಗೋಪಾಲನ ಕಂಡೆನು
ಬೇಡಿದವರಿಗೆ ಇಷ್ಟಾರ್ಥವನು ಕೊಡುವ
ಶ್ರೀವೇಣುಗೋಪಾಲನ ಅಂಘ್ರಿಯ ಕಂಡೆನು ॥ 4 ॥

ದೀಪವ ಬೆಳಗಿಸುವೆನು ನೀ ನೋಡು

ದೀಪವಿದ ಬೆಳಗುವೆನು ದೇವ ನೀ ನೋಡು
ವ್ಯಾಪಿಸಿದ ತಿಮಿರವನು ಪರಿಹರಿಸಿ ಕೊಂಬಂಥ ॥ಪ॥

ಸಕಲ ದೇವಾತ್ಮನಲಿ ತಿಲ ತೈಲವಾಗಿರುವ
ಅಖಿಲ ಶ್ರುತಿವರ್ತಿಯಿಂ ಸಮ್ಮಿಳಿತವಾಗಿ
ಪ್ರಕಟದಿಂದಲೆ ಮೂರು ರೂಪದೊಳ್ ಒಂದಾಗಿ
ವಿಕಸ ರೂಪದಲಿ ಮೂರು ಲೋಕಗಳ ಬೆಳಗುತಿಹ ॥1॥

ಜ್ಞಾನವೇ ಗೋಘೃತವು ಮಾತುಗಳೆ ವರ್ತಿಗಳು
ನೀನದಕೆ ಮೂಲಕಾರಣ ವಸ್ತುವೆನಿಸಿ
ಸ್ವಾನುಕೂಲಗಳಿಂದ ಒಂದಾಗಿ ಚಿತ್ರದೊಳ್
ಲೀನವಾಗಿರುವ ತಿಳಿ ಘೃತವು ಸೇರಿರುವ ॥2॥
ಎನ್ನ ಜೀವವೆ ದೀಪ ನಿಮ್ಮ ಪಾದವೆ ಬ್ರಹ್ಮ
ಭಿನ್ನ ಭಾವನೆ ಅಳಿದ ಪೂರ್ಣರೂಪದೊಳು
ನಿನ್ನೊಳಗೆ ನಿಲಿಸೆನ್ನ ಪುಣ್ಯಸಮವೆಂದೆನಿಸು
ಸ್ವರ್ಣಮಯ ತಿರುಪತಿಯ ವೆಂಕಟರಮಣ ॥3॥

ಆರತಿ ಹಾಡು

ಗುರುಕರುಣವೆಂತೆಂಬ ಗಮಕದ ಓಲೆಯನಿಟ್ಟು
ಹರಿಧ್ಯಾನವೆಂಬ ಆಭರಣವಿಟ್ಟು

ಪರಮಾನಂದವೆಂಬ ಪಾರಿಜಾತವ ಮುಡಿಸಿ
ಪರಮಾತ್ಮ ಗೌರಿಗೆ ಆರತಿ ಎತ್ತಿರೇ ಜಯಮಂಗಳ ನಿತ್ಯ ಶುಭ ಮಂಗಳ ॥ 1 ॥

ಆದಿಮೂರ್ತಿ ಎಂಬ ಅಚ್ಚ ಅರಿಶಿಣ ತೊಡೆದು
ವೇದಮುಖಿ ಎಂಬ ಕುಂಕುಮವಿಟ್ಟು
ಸಾಧು ಸಜ್ಜನರೆಂಬ ಸಂಪಿಗೆ ಹೂವನು ಮುಡಿಸಿ
ಸಂಪನ್ನ ಗೌರಿಗೆ ಆರತಿ ಎತ್ತಿರೆ ॥ 2 ॥

ತನು ಎಂಬ ತಟ್ಟೆಯಲ್ಲಿ ಮನದ ಸೊಡಲನು ಇರಿಸಿ
ಘನ ಶಾಂತವೆಂಬ ಆಜ್ಯವನು ತುಂಬಿ
ಪರಮಾನಂದ ಎಂಬ ಬೆಳಕನು ಮಾಡಿ
ಪರಮಾತ್ಮಗೌರಿಗೆ ಆರತಿ ಎತ್ತಿರೆ ॥ 3 ॥

ಮಂಗಳಂ ಮಂಗಳಂ ಕಮಲಮುಖಿ ದೇವಿಗೆ
ಮಂಗಳಂ ಮಂಗಳಂ ಕಮಲನಾಭನ ರಾಣಿಗೆ
ಮನದಲಿ ನೆಲೆಸಿ ಮಾಂಗಲ್ಯತನವಿತ್ತ ಮಹಾಗೌರಿಗೆ
ಜಯ ಮಂಗಳ ನಿತ್ಯ ಶುಭ ಮಂಗಳ ॥ 4 ॥

ಪ್ರಸಾದ ಕೇಳಿದ್ದು

ಪಾಲಿಸು ಲಕ್ಷ್ಮಿ ಬೇಡುವೆ ವರಗಳ ಲೀಲೆಯಿಂದ ಪರಿಪರಿ ಸುಮನ ಖಾದಿಗೆಯನು ವರ ಖಾದಿಗೆಯನು ದಿವ್ಯ ಸೋದರಿ ಪಾಲಿಸು ಹರುಷದಲಿ ಮತಿಮಂತಳೇ ನಿನ್ನ ಬೇಡುತಲಿರುವೆನು ಸುತರೆಂಬ ಸುತ್ತು ಮಲ್ಲಿಗೆ ಸುಮವ ಮುತ್ತು ಮಾಣಿಕ್ಯವೆಂಬ ಮರುಗ ಮಲ್ಲಿಗೆಯನ್ನು ಅತಿ ಹರುಷದಲಿ ಪಾಲಿಸು ನೀನು ಶಂಕರನ ಸಹೋದರಿಯೇ ಕಿಂಕರಳನು ಪಾಲಿಸು ಬೇಗ.

ಲಾಲಿ ಹಾಡು

ರಾಮಲಾಲಿ ಮೇಘ ಶ್ಯಾಮ ಲಾಲಿ
ತಾಮರಸದೊಳ ನಯನ ತನಯ ಲಾಲಿ ॥ ರಾಮ ॥
ಲಾಲಿ ಲಾಲಿ ನಮ್ಮ ಹರಿಯೇ ಲಾಲಿ
ಸುರನರರಿಗೆ ಒಲಿದು ಕರುಣವ ಬೀರುವ ದೊರೆಯೇ ಲಾಲಿ ॥ ರಾಮ ॥
ಮಾಮನೋಹರ ಅಮಿತ ಸದ್ಗುಣಧಾಮ ಲಾಲಿ
ಕೃಷ್ಣ ಲಾಲಿ ಸರ್ವೋತ್ಕೃಷ್ಟ ಲಾಲಿ
ದುಷ್ಟರ ಶಿಕ್ಷಿಸಿ ಶಿಷ್ಟರ ಪೊರೆವ ಸಂತುಷ್ಟ ಲಾಲಿ
ರಂಗ ಲಾಲಿ ಮಂಗಳಾಂಗ ಲಾಲಿ ॥ ರಾಮ ॥

****

ನಿದ್ರೆ ಮಾಡಿದ ರಂಗಯ್ಯ ನಿದ್ರೆ ಮಾಡಿದ ಕದ್ರು ಸುತನ ಶೇಷನ ಮೇಲೆ
ಭಾಗ್ಯವನೆಂದಿಗೆ ಕೊಡುವೆ । ಯೋಗ್ಯವನೆಂದಿಗೆ ಗೈವೆ ।
ಭಾಗ್ಯಗಳೋಳ್ ಮೇಲಹವೈರಾಗ್ಯ ಭಕ್ತಿಗಳೆಂಬ ॥ ಪ ॥

ಬೆಳಗಿನ ಜಾವದೊಳೆದ್ದು ನದಿಯ ಸ್ನಾನವ ಮಾಡಿ
ತುಳಸೀ ಹೂಗಳ ಕೊಯ್ದು ನಲಿಯುತ ನಿನ್ನನು ಪೂಜಿತ ॥ 1 ॥

ನೆರೆತಂಬೂರಿಯ ಪಿಡಿದು ಕರದೊಳು ತಾಳವಧರಿಸಿ ।
ಪರಮ ಭಕ್ತರನೆನೆಸಿ । ನಿರುತದಿ ನಿಮ್ಮನು ಪೂಜಿಪ ॥ 2 ॥

ಪ್ರೇಮ ಸಹೋದರರೆಂಬ ಕಾಮಕ್ರೋಧವ ಬೆರೆಸಿ ।
ಸ್ವಾಮಿಯೇ ಮೋಸವ ಪೋದೆ ರಾಮನೆ ನೀ ಕೈ ಬಿಡದೇ ॥ 3 ॥

ಶ್ರೀರಘುರಾಮನೆ ನಿಮ್ಮ ಚಾರಿತ್ರಾಮೃತವನ್ನು ।
ಸಾರುತಲಾನಂದದಲಿ ಸೂರೆಗೊಳ್ಳುವ ದಿವ್ಯ ॥ 4 ॥

ಸದ್ಗುರು ಸೇವೆಯಗೈದು ಸದ್ಗತಿ ಮಾರ್ಗವನರಿತು ।
ಹೃದ್ಗತ ಪಾಪವ ಕಳೆದ ಸದ್ಗತಿ ಮೋಕ್ಷವ ಪಡೆದ ॥ 5 ॥

ಸರ್ವಭೂತಂಗಳೊಳು ಸರ್ವೇಶ ನೀನಿರುತ ।
ಸರ್ವವ ಗೈಸುವೆ ಎಂಬ । ಮರ್ಮವ ನಾ ತಿಳಿವಂತೆ ॥ 6 ॥

****



ನನ್ನ ಪೂಜ್ಯ ಅತ್ತೆ ಮಾವಂದಿರುಗಳಾದ
ದಿವಂಗತ ಲಕ್ಷ್ಮಮ್ಮ ಮತ್ತು ಸೂರ್ಯನಾರಾಯಣಪ್ಪ



ನನ್ನ ಬಾಲ್ಯದಿಂದ ಸುಸಂಸ್ಕೃತಿಯನ್ನು ಕಲಿಸಿ ಇದರ ಬಗ್ಗೆ ಆಸಕ್ತಿ
ಉಂಟು ಮಾಡಿದ ನಮ್ಮ ಅತ್ತಿಗೆ ದಿವಂಗತ ರುಕ್ಮಿಣಿಯಮ್ಮನವರು



ಶ್ರೀ ರುಕ್ಮಿಣೀ ಸಮೇತ ಶ್ರೀ ವೇಣುಗೋಪಾಲಸ್ವಾಮಿ ಪ್ರಸನ್ನ
ಅಂಬಳೆ ಗ್ರಾಮ, ಚಿಕ್ಕಮಂಗಳೂರು ಜಿಲ್ಲೆ - 577 101